ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 29 ಬುಧವಾರ 2023

ಸಂಪುಟ: 44 | ಸಂಚಿಕೆ: 222 | ಪುಟಗಳು: 10

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಹೆಣ್ಣು ಭ್ರೂಣ ಹತ್ಯೆ ತಡೆಗೆ ಟಾಸ್ಕ್‌ಫೋರ್ಸ್ ರಚನೆ

●ಆಸ್ಪತ್ರೆ, ಕ್ಲಿನಿಕ್, ಸ್ಕ್ಯಾನಿಂಗ್ ಸೆಂಟರ್‌ಗಳಲ್ಲಿ ಪರಿಶೀಲನೆ ●ದಿಶಾ ಸಮಿತಿ ಸಭೆಯಲ್ಲಿ ಜಿಲ್ಲಾಧಿಕಾರಿ ಡಾ.ರಾಜೇಂದ್ರ ಪ್ರಕಟ ●ತಕ್ಷಣದಿಂದಲೇ ಟಾಸ್ಕ್‌ಫೋರ್ಸ್ ಕಾರ್ಯಾಚರಣೆ ●ವೈದ್ಯರ ಪದವಿ ಪ್ರಮಾಣ ಪತ್ರ ಪ್ರದರ್ಶಿಸುವುದು ಕಡ್ಡಾಯ ●ಟ್ರೇಡ್ ಲೈಸೆನ್ಸ್ ಪಡೆಯಲೇಬೇಕು ●ನಕಲಿ ವೈದ್ಯರ ವಿರುದ್ಧ ಕೂಡ ಆಪರೇಷನ್



ದಿಶಾ ಸಭೆಯಲ್ಲಿ ಸಂಸದ ಪ್ರತಾಪ್ ಸಿಂಹ, ಜಿಲ್ಲಾಧಿಕಾರಿ ಡಾ.ರಾಜೇಂದ್ರ, ಜಿಪಂ ಸಿಇಓ ಕೆ.ಎಂ.ಗಾಯತ್ರಿ ಉಪಸ್ಥಿತರಿದ್ದಾರೆ.

"ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿ ಟೆಂಟ್‌ಗಳನ್ನು ಹಾಕಿಕೊಂಡು ರೋಗಗಳಿಗೆ ಚಿಕಿತ್ಸೆ ನೀಡಲಾಗುವುದು ಎಂದು ಬೋರ್ಡ್ ಹಾಕಿಕೊಂಡಿರುತ್ತಾರೆ. ಅಧಿಕಾರಿಗಳು ಕೂಡಲೇ ಆ ಟೆಂಟ್‌ಗಳನ್ನು ತೆರವು ಮಾಡಬೇಕು. ಮೈಸೂರು ನಗರ ಫ್ಲೆಕ್ಸ್ ಮುಕ್ತವಾಗಬೇಕು. ಈ ನಿಟ್ಟಿನಲ್ಲಿ ಬಿಜೆಪಿ, ಜೆಡಿಎಸ್ ಹಾಗೂ ಕಾಂಗ್ರೆಸ್ ಪಕ್ಷದವರಿಗೆ ಫ್ಲೆಕ್ಸ್ ಹಾಕದಂತೆ ನೋಟಿಸ್ ಜಾರಿ ಮಾಡಿ. ಮೊದಲು ಬಿಜೆಪಿಯವರಿಗೆ ನೋಟಿಸ್ ಜಾರಿ ಮಾಡಿ.

–ಪ್ರತಾಪ್ ಸಿಂಹ, ಸಂಸದರು.

ಮೈಸೂರು, ನ.28(ಬಿಎಲ್‌ಯು)– ಹೆಣ್ಣು ಭ್ರೂಣ ಹತ್ಯೆಯ ಜಾಲ ಮೈಸೂರಿನಲ್ಲಿ ಬೆಳಕಿಗೆ ಬಂದಿರುವ ಹಿನ್ನೆಲೆಯಲ್ಲಿ ನಗರದ ಆಸ್ಪತ್ರೆಗಳು, ಕ್ಲಿನಿಕ್‌ಗಳು ಹಾಗೂ ಸ್ಕ್ಯಾನಿಂಗ್ ಸೆಂಟರ್‌ಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಲು ಟಾಸ್ಕ್ ಫೋರ್ಸ್ ರಚಿಸಲಾಗುವುದು ಎಂದು ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ ಪ್ರಕಟಿಸಿದ್ದಾರೆ.

ಮೈಸೂರು ಜಿಲ್ಲಾ ಪಂಚಾಯಿತಿಯ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಇಂದು ನಡೆದ ದಿಶಾ ಸಮಿತಿ (ಜಿಲ್ಲಾ ಅಭಿವೃದ್ಧಿ ಸಮನ್ವಯ ಹಾಗೂ ಉಸ್ತುವಾರಿ ಸಮಿತಿ) ಸಭೆಯಲ್ಲಿ ಮಾತನಾಡಿದ ಅವರು, ಆರೋಗ್ಯ ಇಲಾಖೆ, ಪೊಲೀಸ್ ಇಲಾಖೆ ಹಾಗೂ ಮೈಸೂರು ನಗರಪಾಲಿಕೆ ಅಧಿಕಾರಿಗಳನ್ನು ಈ ಟಾಸ್ಕ್‌ಫೋರ್ಸ್ ಒಳಗೊಂಡಿರಲಿದೆ.

ಕೆಪಿಎಂಇ (ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆ ಕಾಯ್ದೆ) ಪ್ರಕಾರ ಪ್ರತಿಯೊಂದು ಆಸ್ಪತ್ರೆ, ವೈದ್ಯರ ಕ್ಲಿನಿಕ್ ಹಾಗೂ ಸ್ಕ್ಯಾನಿಂಗ್ ಸೆಂಟರ್‌ಗಳಲ್ಲಿ ವೈದ್ಯರು ತಮ್ಮ ವೈದ್ಯಕೀಯ ಪ್ರಮಾಣ ಪತ್ರದ ರಿಜಿಸ್ಟರ್ ಸಂಖ್ಯೆ ನಮೂದಿಸಿರಬೇಕು. ಜೊತೆಗೆ ನಗರ ಪಾಲಿಕೆಯಿಂದ ಪಡೆದಿರುವ ಟ್ರೇಡ್ ಲೈಸೆನ್ಸ್ ಪ್ರತಿ ಕೂಡ ಪ್ರದರ್ಶಿಸಬೇಕು. ಇದನ್ನು ಪರಿಶೀಲಿಸಲು ಮೈಸೂರಿನ ಎಲ್ಲಾ ಆಸ್ಪತ್ರೆ, ವೈದ್ಯರ ಕ್ಲಿನಿಕ್ ಹಾಗೂ ಸ್ಕ್ಯಾನಿಂಗ್ ಸೆಂಟರ್‌ಗಳಿಗೆ ಟಾಸ್ಕ್‌ಫೋರ್ಸ್ ಭೇಟಿ ನೀಡಲಿದೆ ಎಂದರು. ● 6ನೇ ಪುಟಕ್ಕೆ

ನಕಲಿ ವೈದ್ಯರಿಗೆ ಮಳಿಗೆ ಬಾಡಿಗೆಗೆ ನೀಡುವವರ ವಿರುದ್ಧವೂ ಕ್ರಮ

ಆಸ್ಪತ್ರೆಗಳು, ಕ್ಲಿನಿಕ್ ಹಾಗೂ ಸ್ಕ್ಯಾನಿಂಗ್ ಸೆಂಟರ್‌ಗಳಿಗೆ ಕಟ್ಟಡಗಳ ಬಾಡಿಗೆಗೆ ನೀಡುವ ಮಾಲೀಕರು, ವೈದ್ಯರ ವೈದ್ಯಕೀಯ ಪ್ರಮಾಣ ಪತ್ರದ ಬಗ್ಗೆ ಮಾಹಿತಿ ಪಡೆದು, ಪರಿಶೀಲನೆ ಮಾಡಿ ಬಾಡಿಗೆಗೆ ನೀಡಬೇಕು ಎಂದು ಡಾ.ರಾಜೇಂದ್ರ ಸೂಚನೆ ನೀಡಿದ್ದಾರೆ. ಇದ್ಯಾವುದರ ಬಗ್ಗೆ ಮಾಹಿತಿ ಪಡೆಯದೆ ನಕಲಿ ವೈದ್ಯರಿಗೆ ಕಟ್ಟಡ ಬಾಡಿಗೆ ನೀಡಿದರೆ ಅವರ ವಿರುದ್ಧವೂ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

ಮೈಸೂರಿನ ಬಹಳಷ್ಟು ವ್ಯಾಪಾರಸ್ಥರು ಟ್ರೇಡ್ ಲೈಸೆನ್ಸ್ ಪಡೆದಿಲ್ಲ. ನಗರ ಪಾಲಿಕೆ ಅಧಿಕಾರಿಗಳು ಈಗ ಭೇಟಿ ನೀಡಿ ಪರಿಶೀಲನೆ ನಡೆಸುವ ಮುನ್ನ ವ್ಯಾಪಾರಸ್ಥರು ಟ್ರೇಡ್ ಲೈಸೆನ್ಸ್ ಪಡೆಯಬೇಕು ಎಂದು ಸಲಹೆ ನೀಡಿದರು. ಸಭೆಯ ನಂತರ ಪತ್ರಕರ್ತರ ಜೊತೆ ಮಾತನಾಡಿದ ಡಾ.ರಾಜೇಂದ್ರ, ಮೈಸೂರಿನಲ್ಲಿ ನಡೆದಿರುವ ಹೆಣ್ಣು ಭ್ರೂಣ ಹತ್ಯೆ ಪ್ರಕರಣದ ಬಗ್ಗೆ ಪ್ರಾಥಮಿಕ ವರದಿ ನೀಡುವಂತೆ ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ. ವರದಿ ಬಂದ ನಂತರ ಪರಿಶೀಲನೆ ಮಾಡಲಾಗುವುದು. ಪ್ರಕರಣದಲ್ಲಿ ತಪ್ಪಿತಸ್ಥರು ಯಾರೇ ಆಗಿದ್ದರೂ ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದರು. ಪ್ರಕರಣ ನಡೆದಿರುವ ಮೈಸೂರಿನ ಉದಯಗಿರಿ ಹಾಗೂ ರಾಜ್‌ಕುಮಾರ್ ರಸ್ತೆಯ ನಕಲಿ ಕ್ಲಿನಿಕ್‌ಗಳಿಗೆ ನಾನು ಕೂಡ ಭೇಟಿ ನೀಡಿ ಪರಿಶೀಲನೆ ಮಾಡುತ್ತೇನೆ ಎಂದು ಡಾ.ರಾಜೇಂದ್ರ ಇದೇ ವೇಳೆ ತಿಳಿಸಿದರು.

ಮಂಡ್ಯ ಭ್ರೂಣ ಹತ್ಯೆ ಜಾಲದ ಕುರಿತು ಮತ್ತಷ್ಟು ಆತಂಕಕಾರಿ ಮಾಹಿತಿ ಬಿಚ್ಚಿಟ್ಟ ಬೆಂಗಳೂರು ಪೊಲೀಸ್ ಆಯುಕ್ತ ಬಿ.ದಯಾನಂದ

3 ವರ್ಷದಿಂದ 3 ಸಾವಿರ ಭ್ರೂಣ ಹತ್ಯೆ ಶಂಕೆ



ಬೆಂಗಳೂರು, ನ.28– ಮೈಸೂರು ಹಾಗೂ ಮಂಡ್ಯ ಪ್ರದೇಶದಲ್ಲಿ ಪತ್ತೆಯಾಗಿದ್ದ ಹೆಣ್ಣು ಭ್ರೂಣ ಹತ್ಯೆ ಜಾಲದ ಬಗೆಗಿನ ಸುದ್ದಿ ಇಡೀ ರಾಜ್ಯವನ್ನೇ ಆತಂಕಕ್ಕೊಳಗಾಗುವಂತೆ ಮಾಡಿದೆ. ಜೀವ ಉಳಿಸಬೇಕಾದ ವೈದ್ಯರೇ ಇಂತಹ ಅಮಾನವೀಯ ಕೆಲಸಕ್ಕೆ ಕೈಹಾಕಿದ್ದು ಮನುಕುಲ ತಲೆ ತಗ್ಗಿಸುವಂತಾಗಿತ್ತು. ಇದೀಗ ಪ್ರಕರಣ ಸಂಬಂಧ ಪೊಲೀಸ್ ಆಯುಕ್ತ ಬಿ.ದಯಾನಂದ ಅವರು ಮತ್ತಷ್ಟು ಆತಂಕಕಾರಿ ಮಾಹಿತಿಯನ್ನು ಬಹಿರಂಗಪಡಿಸಿದ್ದಾರೆ. ನಗರದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಹೆಣ್ಣು ಭ್ರೂಣ ಹತ್ಯೆ ಮಾಡುತ್ತಿದ್ದ ಜಾಲವನ್ನು ಪೊಲೀಸರು ಪತ್ತೆ ಮಾಡಿದ್ದಾರೆ. ಅ.15ರಂದು ವಾಹನ ತಪಾಸಣೆ ಮಾಡುತ್ತಿದ್ದರು. ಈ ವೇಳೆ ಆರೋಪಿಗಳು ಕಾರು ನಿಲ್ಲಿಸದೇ ಹೋಗಿದ್ದಾರೆ. ಅವರನ್ನು ಹಿಂಬಾಲಿಸಿ ವಿಚಾರಣೆ ನಡೆಸಿದ ವೇಳೆ ಘಟನೆ ಬೆಳಕಿಗೆ ಬಂದಿತ್ತು. ಹೆಣ್ಣು ಮಗು ಎಂದು ಗೊತ್ತಾದರೆ ಹತ್ಯೆ ಮಾಡುತ್ತಿರುವುದು ತಿಳಿದು ಬಂದಿತ್ತು. ಇಲ್ಲಿಯವರೆಗೂ 9 ಜನರನ್ನು ಬಂಧಿಸಿದ್ದು, ಚೆನ್ನೈ ಮೂಲದ ವೈದ್ಯ ತುಳಸಿರಾಮ್, ● 6ನೇ ಪುಟಕ್ಕೆ

ನವಜಾತ ಶಿಶು ಮಾರಾಟ ಪ್ರಕರಣ ಬಯಲು

ನವಜಾತ ಶಿಶು ಮಾರಾಟ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯೆ ನೀಡಿ, ಆರ್.ಆರ್.ನಗರದಲ್ಲಿನ ಹಸುಗೂಸು ಮಾರಾಟ ಪ್ರಕರಣವನ್ನು ಸಿಸಿಬಿ ಪೊಲೀಸರು ಭೇದಿಸಿದ್ದಾರೆ. ಮಕ್ಕಳ ಮಾರಾಟದ ಬಗ್ಗೆ ರಾಜರಾಜೇಶ್ವರಿ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಸ್ವಿಫ್ಟ್ ಕಾರಿನಲ್ಲಿ ಮಗು ಸಾಗಿಸುತ್ತಿದ್ದಾಗ ಸಿಸಿಬಿ ತಂಡ ದಾಳಿ ಮಾಡಿತ್ತು. ಇಪ್ಪತ್ತು ದಿನದ ಗಂಡು ಮಗುವನ್ನು ರಕ್ಷಣೆ ಮಾಡಲಾಗಿದೆ. ಬಂಧಿತ ಆರೋಪಿಗಳು ತಮಿಳುನಾಡು ಮೂಲದವರು. ಬಡ ಮಹಿಳೆಯರಿಗೆ ಗರ್ಭಧಾರಣೆ ಮಾಡಿಸಿ, ಮಗು ಮಾರುತ್ತಿದ್ದರು. 8 ರಿಂದ 10 ಲಕ್ಷಕ್ಕೆ ಮಗು ಮಾರಾಟ ಮಾಡುತ್ತಿದ್ದದ್ದು ಬೆಳಕಿಗೆ ಬಂದಿದೆ. ತಮಿಳುನಾಡಿನ ಆಸ್ಪತ್ರೆಗಳು, ವೈದ್ಯರು ಮತ್ತು ಬೆಂಗಳೂರಿನ ಓರ್ವ ಮಹಿಳೆ ಮಕ್ಕಳನ್ನು ಮಾರಾಟ ಮಾಡಲು ಸಹಾಯ ಮಾಡುತ್ತಿದ್ದಳು. ಹತ್ತಕ್ಕೂ ಹೆಚ್ಚು ಮಕ್ಕಳನ್ನು ಮಾರಾಟ ಮಾಡಿರುವ ಬಗ್ಗೆ ಮಾಹಿತಿ ಇದೆ. ತಮಿಳುನಾಡಿನ 4 ಆಸ್ಪತ್ರೆಗಳಲ್ಲಿ ಕೃತ್ಯ ನಡೆದಿರುವ ಬಗ್ಗೆ ಮಾಹಿತಿ ಇದೆ ಎಂದು ಹೇಳಿದರು.



ಅಂತೂ ಎಚ್ಚೆತ್ತ ಮಂಡ್ಯ ಜಿಲ್ಲಾಡಳಿತ

ಲೋಕಾಯುಕ್ತ, ಕಂದಾಯ ಪೊಲೀಸ್ ಅಧಿಕಾರಿಗಳು ಆಲೆಮನೆಗೆ ಭೇಟಿ; ಪರಿಶೀಲನೆ

ಮಂಡ್ಯ, ನ.28–ಇಡೀ ರಾಜ್ಯವನ್ನೇ ಬೆಚ್ಚಿ ಬೀಳಿಸಿರುವ ತಾಲೂಕಿನ ಹಾಡ್ಯ ಗ್ರಾಮದ ಆಲೆಮನೆಯೊಂದರಲ್ಲಿ ಹೆಣ್ಣು ಭ್ರೂಣ ಪತ್ತೆ ಹಾಗೂ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತ ಕಂದಾಯ ಹಾಗೂ ಪೊಲೀಸ್ ಅಧಿಕಾರಿಗಳು ಮಂಗಳವಾರ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು. ಮಾಧ್ಯಮಗಳ ನಿರಂತರ ವರದಿಯಿಂದ ಎಚ್ಚೆತ್ತ ಜಿಲ್ಲಾಡಳಿತ, ಭ್ರೂಣ ಲಿಂಗ ಪತ್ತೆ ಕಾರ್ಯ ನಡೆಯುತ್ತಿದ್ದ ಆಲೆಮನೆಗೆ ಭೇಟಿ ನೀಡಿ, ಆರೋಗ್ಯ ಹಾಗೂ ಕಂದಾಯ ಇಲಾಖೆಯ ಅಧಿಕಾರಿಗಳು ಪರಿಶೀಲನೆ ನಡೆಸಿದರು. ಲೋಕಾಯುಕ್ತ ಡಿವೈಎಸ್ಪಿ ● 6ನೇ ಪುಟಕ್ಕೆ

ಎನ್.ಆರ್.ಕ್ಷೇತ್ರದ ಬಾಕಿ 21 ಸಾವಿರ ಮನೆಗಳ ನಲ್ಲಿಗಳಿಗೆ ಮೀಟರ್ ಅಳವಡಿಸಿ

ಅಧಿಕಾರಿಗಳಿಗೆ ಸಂಸದ ಪ್ರತಾಪ್ ಸಿಂಹ ಸೂಚನೆ

- ನಾನೇನು ಕಮಿಷನ್ ಕೇಳಿದ್ದೀನಾ...
- ಗಲ್ಲಿ ಕಾ ಕುತ್ತಾಗಳು ಟೆಂಡರ್ ಹಾಕಿವೆ
- ಬಿಎಸ್‌ಎನ್‌ಎಲ್ ನಾಟ್ ರೀಚಬಲ್
- ಹೆಸರಿನ ಅಕ್ಷರ ಬದಲಾವಣೆ ಸಂಖ್ಯಾಶಾಸ್ತ್ರವಲ್ಲ





ಮೈಸೂರು, ನ.28(ಬಿಎಲ್‌ಯು)– ಮೈಸೂರಿನ ನರಸಿಂಹರಾಜ ಕ್ಷೇತ್ರದಲ್ಲಿ ಮೀಟರ್ ಅಳವಡಿಸದ 21 ಸಾವಿರ ಮನೆಗಳ ನಲ್ಲಿಗಳಿಗೆ ಕೂಡಲೇ ಮೀಟರ್ ಅಳವಡಿಸಿ ಎಂದು ಸಂಸದ ಪ್ರತಾಪ್ ಸಿಂಹ ಅಧಿಕಾರಿಗಳಿಗೆ ತಾಕೀತು ಮಾಡಿದ್ದಾರೆ.

ಮೈಸೂರಿನ ಜಿಲ್ಲಾ ಪಂಚಾಯತ್‌ನಲ್ಲಿ ನಡೆದ ದಿಶಾ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, ಮೀಟರ್ ಅಳವಡಿಸದ ಕಾರಣ ನಗರಪಾಲಿಕೆಗೆ ಬರಬೇಕಾದ ಆದಾಯ ಇಲ್ಲದಂತಾಗಿದೆ. ಆದ ಕಾರಣ ಕೂಡಲೇ ನಲ್ಲಿಗಳಿಗೆ ಮೀಟರ್ ಅಳವಡಿಸಿ ಎಂದು ವಾಣಿ ವಿಲಾಸ ನೀರು ಸರಬರಾಜು ಕೇಂದ್ರದ ಅಧಿಕಾರಿಗಳಿಗೆ ಸೂಚಿಸಿದರು.

ಮೈಸೂರು ವೀಳ್ಯದೆಲೆಗೆ ದೊರೆತಿರುವ ಜಿಐ ಟ್ಯಾಗ್ ನವೀಕರಣ ಅವಧಿ 2025ರ ವೇಳೆಗೆ ಮುಗಿಯಲಿದೆ. ಈ ಹಿನ್ನೆಲೆಯಲ್ಲಿ ಅವಧಿಗೂ ಮುನ್ನ ಪೇಟೆಂಟ್ ನವೀಕರಣ ಮಾಡಿಸಬೇಕು ಎಂದು ಸೂಚಿಸಿದರು. ಹುಣಸೂರು ತಾಲೂಕಿನಲ್ಲಿ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಲ್ಲಿ ನಿರ್ಮಾಣವಾಗಿರುವ ರಸ್ತೆಗಳು ಹಾಳಾಗಿವೆ. ಕಳಪೆ ಗುಣಮಟ್ಟದ ಕಾಮಗಾರಿ ಕಾರಣ ರಸ್ತೆಯಲ್ಲಿ ಗಿಡಗಳು ಬೆಳೆದಿವೆ. ರಸ್ತೆ ಕಾಮಗಾರಿಯಲ್ಲಿ ನಾನೇನಾದರೂ ನಿಮ್ಮಿಂದ ಕಮಿಷನ್ ಕೇಳಿದ್ದೀನಾ ಎಂದು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ಪ್ರತಾಪ್ ಸಿಂಹ, ● 8ನೇ ಪುಟಕ್ಕೆ





17 ದಿನದಿಂದ ಸುರಂಗದಲ್ಲಿ ಸಿಲುಕಿದ್ದ 41 ಕಾರ್ಮಿಕರ ರಕ್ಷಣೆ

ಫಲಿಸಿತು ಶತಕೋಟಿ ಭಾರತೀಯರ ಪ್ರಾರ್ಥನೆ; ಸಿಹಿ ಹಂಚಿ ಸಂಭ್ರಮ

ಡೆಹ್ರಾಡೂನ್, ನ.28– ಉತ್ತರಾಖಂಡದ ಉತ್ತರಕಾಶಿ ಜಿಲ್ಲೆಯ ಸಿಲ್ಕ್ಯಾರ್ ಸುರಂಗದೊಳಗೆ ಸಿಲುಕಿ, ಕಳೆದ 17 ದಿನಗಳಿಂದ ಜೀವ ಕೈಯ್ಯಲ್ಲಿ ಹಿಡಿದುಕೊಂಡು ಹೊಸ ಬದುಕಿಗಾಗಿ ಆಸೆಗಣ್ಣುಗಳಿಂದ ಎದುರು ನೋಡುತ್ತಿದ್ದ ಎಲ್ಲಾ 41 ಕಾರ್ಮಿಕರನ್ನು ಸುರಕ್ಷಿತವಾಗಿ ಸುರಂಗದಿಂದ ಇಂದು ಹೊರಕರೆತರಲಾಗಿದೆ. 17 ದಿನಗಳ ನಿರಂತರ ಶ್ರಮ ಮತ್ತು ಅಸಂಖ್ಯಾತ ಜನರ ಪ್ರಾರ್ಥನೆಗೆ ಫಲ ಸಿಕ್ಕಿದ್ದು, ಬಹುದೊಡ್ಡ ರಕ್ಷಣಾ ಕಾರ್ಯಾಚರಣೆ ದೊಡ್ಡ ಯಶಸ್ಸು ಸಾಧಿಸಿದೆ.

ಸುಮಾರು 50 ಮೀಟರ್‌ಗೂ ಅಧಿಕ ದೂರದಲ್ಲಿ ಸುರಂಗದ ಒಳಗಡೆ ಸಿಲುಕಿದ್ದ ಎಲ್ಲ 41 ಕಾರ್ಮಿಕರನ್ನು ಒಬ್ಬೊಬ್ಬರನ್ನಾಗಿ ಪೈಪ್ ಮೂಲಕ ಗಾಲಿ ಸ್ಟ್ರೆಚರ್ ಸಹಾಯದಿಂದ ರಕ್ಷಣಾ ತಂಡಗಳು ಹೊರಗೆಳೆದು ರಕ್ಷಣೆ ಮಾಡಿದವು. ಹೊರಗೆ ಬಂದ ಕಾರ್ಮಿಕರಿಗೆ ತಕ್ಷಣ ಪ್ರಾಥಮಿಕ ಚಿಕಿತ್ಸೆ ಅಡಿಯಲ್ಲಿ ದೇಹ ಪರೀಕ್ಷೆ ಮಾಡಿ ತಕ್ಷಣ ಆಂಬುಲೆನ್ಸ್‌ಗಳ ಸಹಾಯದಿಂದ ಸಮೀಪದ ಆಸ್ಪತ್ರೆಗಳಿಗೆ ರವಾನಿಸಲಾಗಿದೆ. ಎಲ್ಲ ಕಾರ್ಮಿಕರು ಆರೋಗ್ಯವಂತರಾಗಿದ್ದಾರೆ ಎಂದು ಮೂಲಗಳು ತಿಳಿಸಿವೆ. ಪ್ರತೀ ಹಂತದಲ್ಲೂ ನಾಲ್ವರು ಕಾರ್ಮಿಕರನ್ನು ಹೊರಗೆ ಕರೆತರಲಾಯಿತು. ಕಾರ್ಮಿಕರ ರಕ್ಷಣೆಗೆ ಶತಕೋಟಿ ಭಾರತೀಯರು ಪ್ರಾರ್ಥಿಸಿದ್ದರು. ಎಲ್ಲರ ಪ್ರಾರ್ಥನೆ ಇಂದು ಫಲಿಸಿದ್ದು, ಕಾರ್ಯಾಚರಣೆ ಯಶಸ್ವಿಯಾಗಿದೆ. ಕಾರ್ಮಿಕರು ಹೊರಗೆ ಬರುತ್ತಿದ್ದಂತೆ ಸುತ್ತಲೂ ಜೈಕಾರಗಳು ಮೊಳಗಿದವು ಮತ್ತು ಸ್ಥಳದಲ್ಲಿ ನೆರೆದಿದ್ದ ಜನರು ಸಿಹಿ ಹಂಚಿ ಸಂಭ್ರಮಿಸಿದರು. ನುರಿತ ಕಾರ್ಮಿಕರ ತಂಡವು ಇಲಿ–ಕುಳಿ ಗಣಿಗಾರಿಕೆ ತಂತ್ರವನ್ನು ಬಳಸಿಕೊಂಡು ಕೈಯಿಂದ ರಂಧ್ರ ಕೊರೆಯುವ ಮೂಲಕ ಅಂತಿಮ ಹಂತದ ಕಾರ್ಯಾಚರಣೆಯಲ್ಲಿ ● 8ನೇ ಪುಟಕ್ಕೆ

ರೈತ ಮಹಿಳೆ ಬಲಿ ಪಡೆದಿದ್ದ ಹುಲಿ ಅಂತೂ ಸೆರೆ

● ಅರಣ್ಯ ಸಿಬ್ಬಂದಿಯ ರೋಚಕ ಕಾರ್ಯಾಚರಣೆ ಯಶಸ್ವಿ ● ಬೋನಿನಲ್ಲಿ ಕುಳಿತು ಹುಲಿಗೆ ಅರವಳಿಕೆ ಮದ್ದು ● ನಾಲ್ಕು ದಿನಗಳ ಸತತ ಕಾರ್ಯಾಚರಣೆ ಫಲ

ಮೈಸೂರು, ನ.28 (ಎಂಟಿವೈ, ಎಂಸಿ,ಆರ್‌ಎಸ್)–ಬಂಡೀಪುರ ಹುಲಿ ಸಂರಕ್ಷಿತಾ ಪ್ರದೇಶದ, ಹೆಡಿಯಾಲ ವಲಯದ ಬಳ್ಳೂರುಹುಂಡಿ ಬಳಿ ರೈತ ಮಹಿಳೆಯನ್ನು ಬಲಿ ಪಡೆದಿದ್ದ ಹುಲಿಯನ್ನು ಅರಣ್ಯ ಸಿಬ್ಬಂದಿಗಳು, ರೋಚಕ ಕಾರ್ಯಾಚರಣೆಯಲ್ಲಿ ಸೆರೆ ಹಿಡಿದಿದ್ದಾರೆ.

ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನ ಬಳ್ಳೂರುಹುಂಡಿ ಗ್ರಾಮವು ಬಂಡೀಪುರ ಹುಲಿ ಸಂರಕ್ಷಿತಾ ಪ್ರದೇಶದ ಹೆಡಿಯಾಲ ವ್ಯಾಪ್ತಿಗೆ ಒಳಪಡಲಿದ್ದು, ನ.24ರಂದು ಮಧ್ಯಾಹ್ನ 3.30ರ ವೇಳೆಗೆ ಕಾಡಂಚಿನ ಜಮೀನಿನಲ್ಲಿ ಜಾನುವಾರು ಮೇಯಿಸುತ್ತಿದ್ದ ರೈತ ಮಹಿಳೆ ರತ್ನಮ್ಮ (52) ಅವರ ಮೇಲೆ ದಾಳಿ ನಡೆಸಿ, ಬಲಿ ಪಡೆದಿತ್ತು. ಅವರ ದೇಹದ ಎಡ ಪಾರ್ಶ್ವವನ್ನೇ ಭಕ್ಷಿಸಿತ್ತು. ಹುಲಿ ಸೆರೆಗೆ ವ್ಯಾಪಕ ಆಗ್ರಹ ಕೇಳಿ ಬಂದ ಹಿನ್ನೆಲೆಯಲ್ಲಿ ನ.24ರಂದು ಸಂಜೆಯಿಂದಲೇ ಕಾರ್ಯಾಚರಣೆ ಆರಂಭಿಸಲಾಗಿತ್ತು. ಸತತ 96 ಗಂಟೆಗಳ ಸುದೀರ್ಘ ಕಾರ್ಯಾಚರಣೆ ಬಳಿಕ ಹುಲಿ ಸೆರೆ ಸಿಕ್ಕಿದೆ.

ಈಗ ಸೆರೆಯಾಗಿರುವ ಹುಲಿಯು ಬಂಡೀಪುರ ಹೆಡಿಯಾಲ ವಲಯದಲ್ಲಿ ಸರಹದ್ದು ನಿರ್ಮಿಸಿಕೊಂಡಿದ್ದ ಯು



2371 ಸಂಖ್ಯೆಯ 10 ವರ್ಷದ ಗಂಡು ಹುಲಿಯಾಗಿದೆ. ವಯೋಸಹಜ ದೌರ್ಬಲ್ಯವುಳ್ಳ ಈ ಹುಲಿಯು ಬೇಟೆಯಾಡುವ ಶಕ್ತಿ ಕಳೆದುಕೊಂಡಿದ್ದರಿಂದ ಕಾಡಂಚಿನ ಗ್ರಾಮದ ಜಾನುವಾರುಗಳ ಬೇಟೆಯಾಡುತ್ತಿತ್ತು ಎನ್ನಲಾಗಿದೆ. ಮಹಿಳೆ ಬಲಿ ಪಡೆದ ಸ್ಥಳದಿಂದ 1 ಕಿಲೋ ಮೀಟರ್ ವ್ಯಾಪ್ತಿಯಲ್ಲಿ ನ.26ರಂದು ಜಾನುವಾರು ಒಂದನ್ನು ಬಲಿ ಪಡೆದಿತ್ತು. ಇದಕ್ಕೆ ಅನತಿ ದೂರದಲ್ಲಿ ರಾತ್ರಿ ಇಡೀ ಕಾರ್ಯಾಚರಣೆ ನಡೆಸಿ ಯಶಸ್ವಿಯಾಗಿ ಸೆರೆ ಹಿಡಿಯಲಾಗಿದೆ.

ರೋಚಕ ಕಾರ್ಯಾಚರಣೆ: ಅರಣ್ಯ ಸಿಬ್ಬಂದಿ ಕಾರ್ಯಾಚರಣೆ ನಡೆಸುತ್ತಿದ್ದ ಸಂದರ್ಭದಲ್ಲಿಯೇ ನ.26ರಂದು ಕಾಳನಮುಂಟಿ ಸೋಲಾರ್ ಶೆಡ್ ಹಾಗೂ ಓಂಕಾರ್ ಗಡಿ ಭಾಗದ ಕಲ್ಲಾರೆಕಂಡಿಯಲ್ಲಿ ಪ್ರತ್ಯೇಕ ಘಟನೆಗಳಲ್ಲಿ 2 ಜಾನುವಾರುಗಳನ್ನು ಬಲಿ ಪಡೆದಿತ್ತು. ಕ್ಯಾಮರಾ ಟ್ರ್ಯಾಪ್‌ನಲ್ಲಿ ದಾಖಲಾದ ದೃಶ್ಯ ಪರಿಶೀಲಿಸಿದಾಗ ಕಲ್ಲಾರೆಕಂಡಿ ಹಾಗೂ ಕಾಳನಮುಂಟಿ ಸೋಲಾರ್ ಶೆಡ್ ಬಳಿ ಪ್ರತ್ಯೇಕ ಎರಡು ಹುಲಿಗಳು ಜಾನುವಾರುಗಳನ್ನು ಕೊಂದಿದ್ದು ದೃಢಪಟ್ಟಿತ್ತು. ಕೂಲಂಕಷವಾಗಿ ಪರಿಶೀಲಿಸಿದಾಗ ಮಹಿಳೆ ಬಲಿ ಪಡೆದ ಸ್ಥಳದಿಂದ 1 ಕಿಲೋ ಮೀಟರ್ ದೂರವಿರುವ ಕಾಳನಮುಂಟಿ ಸೋಲಾರ್ ● 8ನೇ ಪುಟಕ್ಕೆ

"ಸತತ ಕಾರ್ಯಾಚರಣೆಯ ಫಲವಾಗಿ ಹುಲಿಯನ್ನು ಸುರಕ್ಷಿತವಾಗಿ ಸೆರೆ ಹಿಡಿಯಲಾಗಿದೆ. ಒಬ್ಬರ ಬಲಿ ಪಡೆದ ಹಿನ್ನೆಲೆಯಲ್ಲಿ ಕೆಲವರು ಹುಲಿಗೆ ಗುಂಡಿಕ್ಕುವಂತೆ ಒತ್ತಾಯಿಸುತ್ತಿದ್ದರು. ಆದರೆ, ಹುಲಿಯನ್ನು ಸುರಕ್ಷಿತವಾಗಿ ಸೆರೆ ಹಿಡಿಯುವುದು ನಮ್ಮ ಉದ್ದೇಶವಾಗಿತ್ತು. ಸಿಬ್ಬಂದಿಗಳ ಸಂಘಟಿತ ಯೋಜನಾಬದ್ಧ ಕಾರ್ಯಾಚರಣೆ ಫಲವಾಗಿ ಗ್ರಾಮಸ್ಥರ ಸಹಕಾರದಿಂದ ಹುಲಿ ಸೆರೆ ಹಿಡಿಯಲಾಗಿದೆ.


–ಡಾ.ಪಿ.ರಮೇಶ್ ಕುಮಾರ್, ನಿರ್ದೇಶಕ, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ



ತೂಗು ಗಾರ್ಡನ್ ರೀತಿಯಾಗಿರುವ ಮೈಸೂರಿನ ಫೈರ್ ಬ್ರಿಗೇಡ್ ಎದುರಿನ ರೈಲ್ವೆ ಅಂಡರ್ ಬ್ರಿಡ್ಜ್







ಮೈಸೂರು, ನ.28(ಆರ್‌ಕೆ)– ದಟ್ಟವಾಗಿ ಗಿಡಗಳು ಬೆಳೆದು ಜೋತು ಬಿದ್ದಿರುವುದರಿಂದ ಮೈಸೂರಿನ ಅಗ್ನಿಶಾಮಕ ದಳದ ಎದುರಿನ ರೈಲ್ವೆ ಅಂಡರ್ ಬ್ರಿಡ್ಜ್ ತೂಗು ಉದ್ಯಾನದಂತೆ ಕಾಣುತ್ತಿದೆ.

ಮುಡಾದಿಂದ ಕೋಟ್ಯಾಂತರ ರೂ. ಖರ್ಚು ಮಾಡಿ ನಿರ್ಮಿಸಿರುವ ಹಿನಕಲ್ ಫ್ಲೈ ಓವರ್‌ನಲ್ಲಿ ಅರಳಿಗಿಡಗಳು ಬೆಳೆದು ಬೇರುಗಳು ನಾಟಿದ್ದರೂ ನಿರ್ವಹಣೆ ಮಾಡದಿರುವುದು ಅಪಾಯಕ್ಕೆ ಕಾರಣವಾಗಿರುವ ಸುದ್ದಿ, ಇಂದಿನ (ನ.28) 'ಮೈಸೂರು ಮಿತ್ರ'ನಲ್ಲಿ ಪ್ರಕಟವಾಗಿದೆ.

ಅದರ ಬೆನ್ನಲ್ಲೇ ಇದೀಗ ಮಹಾರಾಜ ಕಾಲೇಜು ಮೈದಾನದ ಪಕ್ಕದಲ್ಲಿರುವ ಸರಸ್ವತಿಪುರಂನ ಫೈರ್ ಬ್ರಿಗೇಡ್ ಎದುರಿನಲ್ಲಿರುವ ರೈಲ್ವೆ ಕೆಳ ಸೇತುವೆ ಹಾಗೂ ರಸ್ತೆಯ ಎರಡೂ ಬದಿಯ ತಡೆಗೋಡೆಗಳಲ್ಲಿ ದಟ್ಟವಾಗಿ ಬೆಳೆದಿರುವ ಗಿಡಗಳು ಜೋತು ಬಿದ್ದಿರುವುದರಿಂದ ಹ್ಯಾಂಗಿಂಗ್ ಗಾರ್ಡನ್‌ನಂತೆ ಕಾಣಿಸುತ್ತಿದೆ. ಬ್ರಿಡ್ಜ್ ಮೇಲೆ ರೈಲು ಹಳಿಯ ಇಕ್ಕೆಲಗಳಲ್ಲಿ ಬೆಳೆದಿರುವ ಗಿಡ, ಬಳ್ಳಿಗಳು ಕೆಳಕ್ಕೆ ಜೋತು ಬಿದ್ದಿದ್ದು, ಆ ಮಾರ್ಗದ ಎರಡೂ ಕಡೆಯ ತಡೆಗೋಡೆ (ರೀಟೇನಿಂಗ್ ವಾಲ್)ಗಳಲ್ಲೂ ಗಿಡಗಳು ದಟ್ಟವಾಗಿ ಬೆಳೆದಿರುವುದರಿಂದ ಹ್ಯಾಂಗಿಂಗ್ ಗಾರ್ಡನ್ ರೀತಿ ಹಚ್ಚ ಹಸುರಾಗಿ ಕಾಣಿಸುತ್ತಿವೆ. ರೈಲ್ವೆ ಇಲಾಖೆಯು ಗಿಡ–ಗಂಟಿಗಳನ್ನು ತೆರವುಗೊಳಿಸಿ ನಿರ್ವಹಣೆ ಮಾಡದಿರುವುದು, ಮುಂದೆ ಅಂಡರ್ ಬ್ರಿಡ್ಜ್ ಅಪಾಯಕ್ಕೆ ಸಿಲುಕುವ ಸಾಧ್ಯತೆಗಳನ್ನು ತಳ್ಳಿ ಹಾಕುವಂತಿಲ್ಲ. ಜೊತೆಗೆ ವಾಹನ ಚಲಾಯಿಸುವವರು ಹಚ್ಚ ಹಸಿರಾಗಿ ಕಾಣುವ ಗಿಡಗಳತ್ತ ಗಮನ ಹರಿಸುವುದರಿಂದ ಅಪಘಾತಗಳು ಸಂಭವಿಸುವ ಸಾಧ್ಯತೆಯೂ ಇದೆ.

ಅಷ್ಟೇ ಅಲ್ಲದೇ, ಹಳಿಯ ಇಕ್ಕೆಲಗಳಲ್ಲಿ ಬೆಳೆದಿರುವ ಗಿಡ, ಬಳ್ಳಿಗಳೂ ರೈಲು ಸಂಚರಿಸುವುದು ಸರಿಯಾಗಿ ಗೋಚರಿಸದೇ ಜನರ ಜೀವಕ್ಕೆ ಸಂಚಕಾರ ತರುವ ಸಾಧ್ಯತೆ ಇರುವುದರಿಂದ ರೈಲ್ವೆ ಇಲಾಖೆ ಅಧಿಕಾರಿಗಳು ತಕ್ಷಣ ಗಮನಹರಿಸಿ ಗಿಡ–ಗಂಟಿ ತೆರವುಗೊಳಿಸಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ನಿಧಿ ಆಪ್ಕೆ ನಿಕಟ್ ಕಾರ್ಯಕ್ರಮ



ಮೈಸೂರು,ನ.28–ಮೈಸೂರಿನ ಪ್ರಾದೇಶಿಕ ಭವಿಷ್ಯ ನಿಧಿ ಕಚೇರಿಯಿಂದ ಜೆ.ಪಿ. ನಗರದ ಪೇಜ್ ಇಂಡಸ್ಟ್ರೀಸ್ ಲಿಮಿಟೆಡ್, ಘಟಕ ಸಂಖ್ಯೆ 16ರಲ್ಲಿ ನಿಧಿ ಆಪ್ಕೆ ನಿಕಟ್ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಸಂದೀಪ್ ಬಿ.ಸಿ., ವಿಭಾಗ ಮೇಲ್ವಿಚಾರಕರು ಮತ್ತು ಆರ್.ಜಗದೀಶ್, ಎಸ್‌ಎಸ್‌ಎಸ್‌ಎ ಹಾಗೂ ಇಎಸ್‌ಐಸಿ ಕಡೆಯಿಂದ ರಾಕೇಶ್‌ಕುಮಾರ್ ಝಾ, ಎಸ್‌ಎಸ್‌ಒ ಮತ್ತು ಸುರೇಶ್ ಸಿ.ಬಿ., ಯುಡಿಸಿ, ಇಎಸ್‌ಐಸಿ ಉದ್ಯೋಗದಾತರು, ಉದ್ಯೋಗಿಗಳು ಮತ್ತು ಪಿಂಚಣಿದಾರರು ಕುಂದುಕೊರತೆಗಳ ಪರಿಹಾರ ಮತ್ತು ಸಂದರ್ಭದ ಸರಿಯಾದ ನಿರ್ವಹಣೆಗಾಗಿ ಉಪಸ್ಥಿತರಿದ್ದರು.

ಇಪಿಎಫ್‌ಒ ಉದ್ಯೋಗದಾತರು, ಉದ್ಯೋಗಿಗಳು ಮತ್ತು ಪಿಂಚಣಿದಾರರು ತಮ್ಮ ಪ್ರಶ್ನೆಗಳು ಮತ್ತು ಕುಂದು ಕೊರತೆಗಳೊಂದಿಗೆ ಸ್ಥಳಕ್ಕೆ ಖುದ್ದು ಭೇಟಿ ನೀಡಿದ್ದರು. ಅವುಗಳನ್ನು ಆಲಿಸಿ, ಸ್ಥಳದಲ್ಲೇ ಪರಿಹರಿಸಲಾಯಿತು.



ಹುಟ್ಟುಹಬ್ಬ ಆಚರಿಸಿಕೊಂಡ ಮಾಜಿ ಕಾರ್ಪೊರೇಟರ್ ಮಾದೇಶ್ ಅವರನ್ನು ಕೆ.ಆರ್.ಮಿಲ್ ಶಿವಣ್ಣ, ಲಯನ್ ಸುರೇಶ್ ಗೋಲ್ಡ್, ಕೃಷ್ಣೇಗೌಡ, ಲಯನ್ ಶಂಕರ್ ಗುರು ಆತ್ಮೀಯವಾಗಿ ಅಭಿನಂದಿಸಿದರು.

ಡಿ.2, ಜಿಲ್ಲಾಮಟ್ಟದ ಸಹಪಠ್ಯ ಚಟುವಟಿಕೆ ಸ್ಪರ್ಧೆ

ಮೈಸೂರು.ನ.28–2023–24ನೇ ಸಾಲಿನಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರಿಗೆ ಜಿಲ್ಲಾ ಮಟ್ಟದ ಸಹಪಠ್ಯ ಚಟುವಟಿಕೆ ಸ್ಪರ್ಧೆಗಳು ಜೆಎಸ್‌ಎಸ್ ಬಾಲಕಿಯರ ಪ್ರೌಢಶಾಲೆ ಸರಸ್ವತಿಪುರಂನಲ್ಲಿ ಡಿ.2ರಂದು ಬೆಳಗ್ಗೆ 10 ಗಂಟೆಗೆ ನಡೆಯಲಿವೆ. ಈ ಸ್ಪರ್ಧೆಯಲ್ಲಿ ಜಾನಪದ ಗೀತೆ, ಆಶುಭಾಷಣ, ಪ್ರಬಂಧ, ಸ್ಥಳದಲ್ಲೇ ಪಾಠೋಪಕರಣಗಳ ತಯಾರಿಕೆ ಸ್ಪರ್ಧೆ, (TLM), ಸ್ಥಳದಲ್ಲಿ ಚಿತ್ರ ಬರೆಯುವ ಸ್ಪರ್ಧೆ, ರಸಪ್ರಶ್ನೆ (ಸಾಮಾನ್ಯ ಜ್ಞಾನ) ಮತ್ತು ರಸಪ್ರಶ್ನೆ (ವಿಜ್ಞಾನ) ಸ್ಪರ್ಧೆಗಳಲ್ಲಿ ತಾಲೂಕು ಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದ ಶಿಕ್ಷಕರು ಭಾಗವಹಿಸಬಹುದು. ಸದರಿ ಶಿಕ್ಷಕರು ಅಂದು ಬೆಳಗ್ಗೆ 10 ಗಂಟೆಗೆ ನಿಗದಿತ ಶಾಲೆಯಲ್ಲಿ ಹಾಜರಾಗಿ ನೋಂದಣಿ ಮಾಡಿಕೊಳ್ಳಲು ತಿಳಿಸಲಾಗಿದೆ ಎಂದು ಮೈಸೂರು ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಧನ

ಎಂ.ಎನ್. ವೀಣಾ



ಮೈಸೂರು: ಹಿರಿಯ ಪತ್ರಕರ್ತ ಹಾಗೂ ಕನಕದಾಸನಗರ (ದಟ್ಟಗಳ್ಳಿ) ನಿವಾಸಿ ರಾಜ್‌ಕುಮಾರ್ ಭಾವಸಾರ್ ಅವರ ಪತ್ನಿ ಎಂ.ಎನ್.ವೀಣಾ (60) ಮಂಗಳವಾರ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಮೃತರು ಪತಿ, ಇಬ್ಬರು ಸಹೋದರರು, ಇಬ್ಬರು ಸಹೋದರಿಯರು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಇಂದು ಸಂಜೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಮಾಹಿತಿಗೆ ಮೊ.9480769600 ಸಂಪರ್ಕಿಸಬಹುದು.

ಇಕ್ಬಾಲ್ ಪಾಷ



ಮೈಸೂರಿನ ಬನ್ನಿಮಂಟಪ ಬಡಾವಣೆ ನಿವಾಸಿ ಹಾಗೂ ಮೆ॥ ಡೈಮಂಡ್ ಸೈಕಲ್ ಮಾರ್ಟ್ ಮಾಲೀಕರಾದ ಇಕ್ಬಾಲ್ ಪಾಷ (62) ಖಾಸಗಿ ಆಸ್ಪತ್ರೆಯಲ್ಲಿ ಮಂಗಳವಾರ ನಿಧನರಾದರು.

ಮೃತರು ಪುತ್ರ, ಪುತ್ರಿ, ಮೊಮ್ಮಕ್ಕಳು ಹಾಗೂ ಅಪಾರ ಬಂಧುಮಿತ್ರರನ್ನು ಅಗಲಿದ್ದಾರೆ. ಈ ಸಂಬಂಧ ಸಂಜೆ 5 ಗಂಟೆಗೆ ಅಸರ್ ಸಾಲ್ತ್ ನಂತರ ಇಂದು ಬನ್ನಿಮಂಟಪದ ಮಸೀದಿ ಟಿಪ್ಪು ಇಲ್ಲಿ ನಮಾಜ್–ಎ–ಜನಾಜ ನಡೆದು, ಅನಂತರ ಮೈಸೂರಿನ ಟಿಪ್ಪು ಸರ್ಕಲ್, ಮೈಸೂರು–ಬೆಂಗಳೂರು ರಸ್ತೆಯಲ್ಲಿರುವ ಮುಸ್ಲಿಮರ ರುದ್ರಭೂಮಿ ಗೇಟ್ ನಂ.6ರಲ್ಲಿ ಅಂತ್ಯಸಂಸ್ಕಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮುನಾವರ್ ಪಾಶಾ



ಮೈಸೂರಿನ ರಾಜೀವ್‌ನಗರದ ನಿವಾಸಿ ಮುನಾವರ್ ಪಾಶಾ (50) ಸೋಮವಾರ (ನ.27) ನಿಧನರಾದರು. ಮೃತರು ಪತ್ನಿ, ಇಬ್ಬರು ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಶೋಕ ರಸ್ತೆಯಲ್ಲಿರುವ ಮಸೀದಿ–ಇ–ಅಜಾಮ್‌ನಲ್ಲಿ ನಮಾಜ್–ಇ–ಜನಾಜ ನಡೆದ ನಂತರ ಟಿಪ್ಪು ವೃತ್ತದಲ್ಲಿರುವ ಮುಸ್ಲಿಂ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಜ್ಞಾನವಾಪಿ ಮಸೀದಿ: ವೈಜ್ಞಾನಿಕ ಸಮೀಕ್ಷೆ ವರದಿ ಸಲ್ಲಿಸಲು ಮತ್ತೆ ಸಮಯ ಕೋರಿದ ಎಎಸ್‌ಐ

ವಾರಣಾಸಿ: ಜ್ಞಾನವಾಪಿ ಮಸೀದಿ ಸಂಕೀರ್ಣದ ವೈಜ್ಞಾನಿಕ ಸಮೀಕ್ಷೆ ವರದಿ ಸಲ್ಲಿಸಲು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ ಮಂಗಳವಾರ ಇಲ್ಲಿನ ಜಿಲ್ಲಾ ನ್ಯಾಯಾಲಯಕ್ಕೆ 3 ವಾರ ಕಾಲಾವಕಾಶ ಕೋರಿದೆ. ನ್ಯಾಯಾಲಯ ಬುಧವಾರ ಅರ್ಜಿಯ ವಿಚಾರಣೆ ನಡೆಸಲಿದೆ.

ಇಲ್ಲಿನ ಜಿಲ್ಲಾ ನ್ಯಾಯಾಲಯ ನ.28ರೊಳಗೆ ಜ್ಞಾನವಾಪಿ ಮಸೀದಿ ಸಂಕೀರ್ಣದ ವರದಿ ಸಲ್ಲಿಸುವಂತೆ ಎಎಸ್‌ಐಗೆ ಸೂಚಿಸಿತ್ತು. ಇಂದು ಎಎಸ್‌ಐ ವರದಿ ಸಲ್ಲಿಸಲು ಇನ್ನೂ 3 ವಾರಗಳ ಕಾಲಾವಕಾಶ ಕೋರಿ ಅರ್ಜಿ ಸಲ್ಲಿಸಿದೆ. ವಿಭಿನ್ನ ತಜ್ಞರು ರಚಿಸಿದ ಮಾಹಿತಿಯನ್ನು ಒಟ್ಟುಗೂಡಿಸಲು ಹೆಚ್ಚಿನ ಸಮಯ ಬೇಕಾಗುತ್ತದೆ ಎಂದು ಹಿಂದೂ ಪರ ವಕೀಲ ಮದನ್ ಮೋಹನ್ ಯಾದವ್ ತಿಳಿಸಿದ್ದಾರೆ. ಪುರಾತತ್ವಶಾಸ್ತ್ರಜ್ಞರು, ಸರ್ವೇಯರ್‌ಗಳು ಮತ್ತು ಇತರ ತಜ್ಞರು ಸಂಗ್ರಹಿಸಿದ ವಿವಿಧ ರೀತಿಯ ದತ್ತಾಂಶಗಳ ಮೇಲೆ ತಜ್ಞರು ಕೆಲಸ ಮಾಡುತ್ತಿದ್ದಾರೆ ಎಂದು ಎಎಸ್‌ಐ ಅರ್ಜಿಯಲ್ಲಿ ತಿಳಿಸಿದೆ. ವಿವಿಧ ತಜ್ಞರು ಮತ್ತು ವಿಭಿನ್ನ ಸಾಧನಗಳಿಂದ ರಚಿಸಲಾದ ಮಾಹಿತಿಯನ್ನು ಒಟ್ಟುಗೂಡಿಸುವುದು ಕಷ್ಟಕರ ಮತ್ತು ನಿಧಾನ ಪ್ರಕ್ರಿಯೆಯಾಗಿದೆ. ಅಂತಿಮವಾಗಿ ವರದಿ ಸಿದ್ಧಪಡಿಸಲು ಇನ್ನೂ ಸ್ವಲ್ಪ ಸಮಯ ತೆಗೆದುಕೊಳ್ಳುತ್ತದೆ ಆದ್ದರಿಂದ ಅದನ್ನು ಸಲ್ಲಿಸಲು ಎಎಸ್‌ಐಗೆ ಇನ್ನೂ 3 ವಾರ ಕಾಲಾವಕಾಶ ನೀಡುವಂತೆ ನ್ಯಾಯಾಲಯವನ್ನು ಕೋರಲಾಗಿದೆ ಎಂದು ಯಾದವ್ ಹೇಳಿದ್ದಾರೆ.

ಇಂದಿನಿಂದ ಜಿಲ್ಲಾ ಪೊಲೀಸ್ ಕ್ರೀಡಾಕೂಟ

ಮೈಸೂರು, ನ.28(ಆರ್‌ಕೆ)–ಮೈಸೂರಿನ ಜ್ಯೋತಿ ನಗರದ ಕವಾಯತು ಮೈದಾನದಲ್ಲಿ ನಾಳೆ (ನ.29)ಯಿಂದ 3 ದಿನಗಳ ಜಿಲ್ಲಾ ಪೊಲೀಸ್ ವಾರ್ಷಿಕ ಕ್ರೀಡಾಕೂಟವನ್ನು ಆಯೋಜಿಸಲಾಗಿದೆ. ಬುಧವಾರ ಬೆಳಗ್ಗೆ 8.30 ಗಂಟೆಗೆ ಅಂತರ ರಾಷ್ಟ್ರೀಯ ಅಥ್ಲೆಟಿಕ್ ಕ್ರೀಡಾಪಟು ಕು.ರೀನಾ ಜಾರ್ಜ್ ಕ್ರೀಡಾಕೂಟವನ್ನು ಉದ್ಘಾಟಿಸಲಿದ್ದು, ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ ಹಾಗೂ ಜಿಲ್ಲಾ ಪಂಚಾಯಿತಿ ಸಿಇಓ ಕೆ.ಎಂ.ಗಾಯಿತ್ರಿ ವಿಶೇಷ ಆಹ್ವಾನಿತರಾಗಿ ಭಾಗವಹಿಸುವರು.



ಜಮ್ಮು–ಕಾಶ್ಮೀರದಲ್ಲಿ ಭಯೋತ್ಪಾದಕರೊಂದಿಗೆ ಹೋರಾಡುತ್ತಾ ಹುತಾತ್ಮರಾದ ಪ್ರಾಂಜಲ್ ಅವರಿಗೆ ಮೈಸೂರಿನ ಸರ್ದಾರ್ ವಲ್ಲಭಬಾಯಿ ಪಟೇಲ್‌ನಗರದ ನಿವಾಸಿಗಳು ಶ್ರದ್ಧಾಂಜಲಿ ಸಲ್ಲಿಸಿದರು. ಈ ವೇಳೆ ಬಡಾವಣೆ ಮುಖಂಡರಾದ ಗಗನ್‌ಗೌಡ, ನಿವೃತ್ತ ಎಎಸ್‌ಐ ಮಲ್ಲಿಕಾರ್ಜುನ್, ನಿವೃತ್ತ ಅಧ್ಯಾಪಕ ನಂಜುಂಡಸ್ವಾಮಿ, ರಾಜಪ್ಪ, ಉಮಾಶಂಕರ್, ಮಹದೇವಪ್ಪ, ಈಶ್ವರೇಗೌಡ ಇತರರು ಉಪಸ್ಥಿತರಿದ್ದರು.

ಹೆಣ್ಣು ಭ್ರೂಣ ಹತ್ಯೆ ತಡೆಗೆ ಆಗ್ರಹ

ಮೈಸೂರು,ನ.28–ಹೆಣ್ಣು ಭ್ರೂಣ ಹತ್ಯೆ ಪ್ರಕರಣಗಳು ದಿನೇ ದಿನೇ ಹೆಚ್ಚುತ್ತಿದ್ದು, ಇದಕ್ಕೆ ಕಡಿವಾಣ ಹಾಕಬೇಕು ಎಂದು ಶ್ರೀ ದುರ್ಗಾ ಫೌಂಡೇಶನ್ ಅಧ್ಯಕ್ಷೆ ರೇಖಾ ಶ್ರೀನಿವಾಸ್ ಒತ್ತಾಯಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ಸಮಾಜದಲ್ಲಿ ಮಹಿಳೆಯರ ಸಂಖ್ಯೆ ಕಡಿಮೆಯಾಗುತ್ತಿದೆ. ಜನರ ಜೀವ ಕಾಪಾಡಬೇಕಾದ ವೈದ್ಯರೇ ಹೆಣ್ಣು ಭ್ರೂಣ ಹತ್ಯೆ ಮಾಡುತ್ತಿರುವುದು ಖಂಡನೀಯ. ಕೂಡಲೇ ಇದನ್ನು ತಡೆಯಬೇಕು. ಇಂತಹ ಕೃತ್ಯದಲ್ಲಿ ತೊಡಗಿಸಿಕೊಳ್ಳುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಗರ್ಭದಲ್ಲಿರುವ ಮಗುವಿನ ಲಿಂಗ ಪತ್ತೆ ಮಾಡುವುದು ಕಾನೂನು ಪ್ರಕಾರ ಶಿಕ್ಷಾರ್ಹ ಅಪರಾಧ. ಕುಸಿಯುತ್ತಿರುವ ಲಿಂಗಾನುಪಾತವು ಸಮಾಜದ ಸ್ವಾಸ್ಥ್ಯವನ್ನು ಹದಗೆಡಿಸುತ್ತದೆ. ಆದ್ದರಿಂದ ಪ್ರಸವಪೂರ್ವ ಮತ್ತು ಗರ್ಭಪೂರ್ವ ಭ್ರೂಣಲಿಂಗ ಪತ್ತೆ ನಿಷೇಧ ಕಾಯ್ದೆಯ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸುವುದು ಅತ್ಯವಶ್ಯಕ ಎಂದರು.

ತಾಲೂಕು ಮಟ್ಟದ ಪ್ರತಿಭಾ ಕಾರಂಜಿಯಲ್ಲಿ ಬಹುಮಾನ



ಮೈಸೂರು, ನ.28–ಸಾರ್ವಜನಿಕ ಶಿಕ್ಷಣ ಇಲಾಖೆ ಸಹಯೋಗದೊಂದಿಗೆ ಮೈಸೂರು ಉತ್ತರ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ವತಿಯಿಂದ ಸಂತ ಫಿಲೋಮಿನಾ ಶಾಲಾ ಆವರಣದಲ್ಲಿ ತಾಲೂಕು ಮಟ್ಟದ ಪ್ರತಿಭಾ ಕಾರಂಜಿ ಕಾರ್ಯಕ್ರಮದಲ್ಲಿ ಹಲವು ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು.

ಈ ಸ್ಪರ್ಧೆಯಲ್ಲಿ ನಗರದ ಅನಂತಗೀತ ವಿದ್ಯಾಲಯದ 9ನೇ ತರಗತಿಯ ಪ್ರೇರಣ್ ಮತ್ತು 10ನೇ ತರಗತಿಯ ಕುಶಾಲ್‌ರಾಜ್ ಪ್ರಥಮ ಸ್ಥಾನ ಪಡೆದುಕೊಂಡರು. ಛದ್ಮವೇಶದಲ್ಲಿ 3ನೇ ತರಗತಿಯ ಶಿಶಿರ್ ಕಶ್ಯಪ್ ಪ್ರಥಮ ಸ್ಥಾನ, ಹೃತ್ವಿಕ ಧಾರ್ಮಿಕ ಪಠಣದಲ್ಲಿ ಪ್ರಥಮ ಸ್ಥಾನ, ಕೃತಿಕಾ ತೃತೀಯ ಸ್ಥಾನ, ಲಘು ಸಂಗೀತ ತೃತೀಯ ಸ್ಥಾನ ಪಡೆದುಕೊಂಡರು. ವಿಜೇತರನ್ನು ಶಾಲೆ ಅಧ್ಯಕ್ಷ ವೇಣುಗೋಪಾಲ್ ಕಲ್ಲೂರು, ಪ್ರಾಂಶುಪಾಲರಾದ ಶ್ರೀಕಾಂತ್ ಅಮರನಾಥ್, ಉಪಪ್ರಾಂಶುಪಾಲ ಹರದೂರು ಲೋಕೇಶ್ ಅಭಿನಂದಿಸಿದರು. ಶಿಕ್ಷಕರಾದ ಜಮುನಾ, ತೇಜಸ್ವಿ ಮತ್ತು ವಿದ್ಯಾರ್ಥಿಗಳು ಇದ್ದರು.

ಎಂ.ನೀತಿಗೆ ಪಿಹೆಚ್.ಡಿ ಪದವಿ



ಮೈಸೂರು,ನ.28–ಡಾ.ಎಂ.ಎಸ್.ಶಶಿಕಲಾ ಅವರ ಮಾರ್ಗದರ್ಶನದಲ್ಲಿ ಎಂ.ನೀತಿ ಅವರು ಡೆವಲಪ್‌ಮೆಂಟ್ ಆಫ್ ಹಿರರಾಚಿಕಲ್ ಕಂಟ್ರೋಲ್ ಸ್ಟ್ರಾಟರ್ಜಿ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು, ವಿಶ್ವೇಶ್ವರಯ್ಯ ಟೆಕ್ನಾಲಜಿಕಲ್ ಯೂನಿವರ್ಸಿಟಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರಾ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ಬೆಳಗ್ಗೆ 10ರಿಂದ ಸಂಜೆ 7 ಗಂಟೆವರೆಗೆ

■ **ಕನ್ನಡಾಂಬೆ ರಕ್ಷಣಾ ವೇದಿಕೆ:** ಕನ್ನಡಾಂಬೆ ಹಬ್ಬ, ಕನ್ನಡಾಂಬೆ ಸೇವಾ ರತ್ನ ಪ್ರಶಸ್ತಿ ಪ್ರದಾನ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶ್ರೀ ಅರ್ಜುನ್ ಅವಧೂತ ಗುರೂಜಿ, ಉದ್ಘಾಟನೆ: ಶಾಸಕ ಜಿ.ಟಿ.ದೇವೇಗೌಡ, ಅಧ್ಯಕ್ಷತೆ: ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಪ್ರಾಸ್ತಾವಿಕ ನುಡಿ: ವೇದಿಕೆ ಸಂಸ್ಥಾಪಕ ರಾಜಶೇಖರ್, ಮುಖ್ಯ ಭಾಷಣಕಾರರು: ಸಾಹಿತಿ ಕೆ.ಬನ್ನೂರು ರಾಜು, ವಿಶೇಷ ಆಹ್ವಾನಿತರು: ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ, ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಸಂಸದ ಪ್ರತಾಪ್ ಸಿಂಹ, ಶಾಸಕರಾದ ಕೆ.ಹರೀಶ್‌ಗೌಡ, ಜಿ.ಡಿ. ಹರೀಶ್‌ಗೌಡ, ಟಿ.ಎಸ್.ಶ್ರೀವತ್ಸ, ದರ್ಶನ್ ಧ್ರುವನಾರಾಯಣ್, ಮೈಸೂರು ವಿವಿ ಕುಲಪತಿ ಎನ್.ಕೆ.ಲೋಕನಾಥ್, ಮುಖ್ಯ ಅತಿಥಿಗಳು: ಜಿಲ್ಲಾಧಿಕಾರಿ ಕೆ.ವಿ.ರಾಜೇಂದ್ರ, ಪೊಲೀಸ್ ಆಯುಕ್ತ ರಮೇಶ್ ಬಾನೋತ್, ಜಿಪಂ ಸಿಇಓ ಗಾಯತ್ರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ. ಸುದರ್ಶನ್, ಪೊಲೀಸ್ ಸೊಸೈಟಿ ಅಧ್ಯಕ್ಷ ರವಿ, ಮಾಜಿ ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್, ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ, ಕನ್ನಡ ಸಾಹಿತ್ಯ ಕಲಾಕೂಟ ಅಧ್ಯಕ್ಷ ಚಂದ್ರಶೇಖರ್, ಸೃಷ್ಟಿ ನಾಗೇಶ್, ಲಿಂಗಾಯತಗೌಡ ಮಹಾಸಭಾ ರಾಜ್ಯಾಧ್ಯಕ್ಷ ಆಲನಹಳ್ಳಿ ಪುಟ್ಟಸ್ವಾಮಿ, ಸ್ಥಳ: ಕಲಾಮಂದಿರ, ಬೆಳಗ್ಗೆ 10ಕ್ಕೆ.

■ **ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ, ದಕ್ಷಿಣ ವಲಯ :** ಕನ್ನಡ ಭಾಷಾ ವಿಚಾರ ಸಂಕಿರಣ ಹಾಗೂ ಸಾಹಿತ್ಯ ಹಬ್ಬ, ಸ್ಥಳ: ರಮಾಗೋವಿಂದ ಸಭಾಂಗಣ, ರಾಮಕೃಷ್ಣನಗರ, ಬೆಳಗ್ಗೆ 10ಕ್ಕೆ.

■ **ಕರ್ನಾಟಕ ಬೀದಿ ನಾಟಕ ಪರಿಷತ್, ಜಿಲ್ಲಾ ಜಾನಪದ ಮತ್ತು ಬೀದಿ ನಾಟಕ ಕಲಾ ತಂಡಗಳ ಒಕ್ಕೂಟ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮೈಸೂರು ಮಹಾನಗರ ಪಾಲಿಕೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ :** ಸುವರ್ಣ ಕರ್ನಾಟಕೋತ್ಸವ ಸಂಭ್ರಮಾಚರಣೆ ಅಂಗವಾಗಿ ರಾಜ್ಯ ಮಟ್ಟದ ಜನಪದ ಹಾಗೂ ಬೀದಿ ನಾಟಕೋತ್ಸವ–2023, ಬೀದಿ ನಾಟಕ ಸ್ಪರ್ಧೆ, ಉದ್ಘಾಟನೆ: ಸಚಿವರಾದ ಡಾ.ಹೆಚ್.ಸಿ.ಮಹದೇವಪ್ಪ, ಚಲುವರಾಯಸ್ವಾಮಿ, ಅಧ್ಯಕ್ಷತೆ: ಶಾಸಕ ಹರೀಶ್‌ಗೌಡ, ಮುಖ್ಯ ಅತಿಥಿಗಳು: ರಂಗಾಯಣ ಮಾಜಿ ನಿರ್ದೇಶಕ ಹೆಚ್.ಜನಾರ್ಧನ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಉಪನಿರ್ದೇಶಕ ಡಿ.ಅಶೋಕ್ ಕುಮಾರ್, ಎಸ್.ಎಂ.ಮಂಜುಳಾದೇವಿ, ಎನ್.ಭಾಸ್ಕರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಆರೋಗ್ಯಾಧಿಕಾರಿ ಡಾ.ವೆಂಕಟೇಶ್, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಡಾ.ಆರ್.ನಿಂಗರಾಜು, ಅಬಕಾರಿ ಇಲಾಖಾಧಿಕಾರಿ ನಾರಾಯಣ ತಿರುಮಲಾಪುರ, ಕಲಾವಿದ ಶಂಕ್ರಣ್ಣ ಸಂಕಣನವರ, ಗ್ಯಾರಂಟಿ ರಾಮಣ್ಣ, ಪುರುಷೋತ್ತಮ ಪಿ.ಗೌಡ, ಪ್ರಾಸ್ತಾವಿಕ ನುಡಿ: ಕರ್ನಾಟಕ ಬೀದಿ ನಾಟಕ ಪರಿಷತ್ ಮುಖ್ಯ ಸಂಚಾಲಕ ಹೆಚ್.ಪಿ.ವೈರಮುಡಿ, ಸ್ಥಳ: ಕಿರುರಂಗಮಂದಿರ, ರಂಗಾಯಣ ಆವರಣ, ಬೆಳಗ್ಗೆ 10.30ಕ್ಕೆ



ಇಂದಿನ ಪಂಚಾಂಗ

29.11.2023 ಬುಧವಾರ, ಮಳೆ ನಕ್ಷತ್ರ: ಅನುರಾಧ, 20.11.2023ರಿಂದ 02.12.2023 ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಕೃಷ್ಣ ಪಕ್ಷ, ತಿಥಿ: ಬಿದಿಗೆ, ನಕ್ಷತ್ರ: ಮೃಗಶಿರ, ರಾಹುಕಾಲ: ಮಧ್ಯಾಹ್ನ 12ರಿಂದ 1.30ರವರೆಗೆ

■ **ವಿಶ್ವಮಾನವ ಮೈಸೂರು ವಿಶ್ವವಿದ್ಯಾನಿಲಯ ನೌಕರರ ವೇದಿಕೆ :** ಕನಕದಾಸರ ಜಯಂತ್ಯುತ್ಸವ, ಮುಖ್ಯ ಅತಿಥಿಗಳು: ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಡಿವೈಎಸ್ಪಿ ಶಿವಶಂಕರ್, ಮೈಸೂರು ವಿವಿ ಹಣಕಾಸು ಅಧಿಕಾರಿ ಶ್ರೀಮತಿ ರೇಖಾ, ಮೈಸೂರು ವಿವಿ ಕುಲಸಚಿವ ಡಾ.ಕೆ.ಎಂ. ಮಹದೇವನ್, ಡಾ.ಬಿ.ಜೆ.ವಿಜಯಕುಮಾರ್, ಪ್ರೊ.ಎಸ್. ಮಹದೇವಮೂರ್ತಿ, ಪ್ರೊ. ಎಸ್. ಶಿವರಾಜಪ್ಪ, ಡಾ. ಹೆಚ್.ಪಿ. ಜ್ಯೋತಿ, ಉಮೇಶ್, ನಾಗರಾಜು, ಸ್ಥಳ: ವಿವಿ ಸಂಜೆ ಕಾಲೇಜು ಮುಂಭಾಗ, ಬೆಳಗ್ಗೆ 10.30ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನೆ ಹಾಗೂ ವಿಸ್ತರಣಾ ಕೇಂದ್ರ:** 74ನೇ ಸಂವಿಧಾನ ದಿನಾಚರಣೆಯ ಅಂಗವಾಗಿ ವಿಶೇಷ ಉಪನ್ಯಾಸಗಳ ಮಾಲಿಕೆ, ಡಾ. ಬಿ.ಆರ್. ಅಂಬೇಡ್ಕರ್ ಕೇಂದ್ರದ ಸಂಶೋಧನಾ ಸಹಾಯಕರಾದ ಡಾ.ಹೆಚ್.ಕೆ. ಕಲಾವತಿ ಅವರಿಂದ ಭಾರತದ ಸಂವಿಧಾನ ಮತ್ತು ಶಿಕ್ಷಣದ ಹಕ್ಕುಗಳು ಕುರಿತು ಉಪನ್ಯಾಸ, ಅಧ್ಯಕ್ಷತೆ : ಶಿಕ್ಷಣ ಅಧ್ಯಯನ ವಿಭಾಗದ ಅಧ್ಯಕ್ಷೆ ಪ್ರೊ ಎಂ. ಪುಷ್ಪ, ಸ್ಥಳ: ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಮಾನಸ ಗಂಗೋತ್ರಿ, ಬೆಳಗ್ಗೆ 10.30ಕ್ಕೆ

■ **ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು:** ಪಠ್ಯೇತರ ಚಟುವಟಿಕೆಗಳ ಉದ್ಘಾಟನಾ ಸಮಾರಂಭ, ಉದ್ಘಾಟನೆ: ಶಾಸಕ ಜಿ.ಟಿ.ದೇವೇಗೌಡ, ಮುಖ್ಯ ಅತಿಥಿಗಳು: ಸಂಗೀತ ನಿರ್ದೇಶಕ ಪ್ರಸನ್ನಕುಮಾರ್, ನಿವೃತ್ತ ದೈಹಿಕ ಶಿಕ್ಷಣ ನಿರ್ದೇಶಕ ಹುಚಗೊಂಡರ್, ಪ್ರೊ.ಪುಟ್ಟರಾಜ, ಅಧ್ಯಕ್ಷತೆ: ಕಾಲೇಜು ಪ್ರಿನ್ಸಿಪಾಲ್ ಪ್ರೊ.ಅನಿತಾ, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 11ಕ್ಕೆ

■ **ಕೆ.ಎಸ್. ಮುದ್ದಪ್ಪ ಸ್ಮಾರಕ ಟ್ರಸ್ಟ್–ಕೃಷ್ಣಾಪುರ ದೊಡ್ಡಿ, ಮಹಾರಾಜ ಕಾಲೇಜು, ಜಾನಪದ ವಿಭಾಗ:** ಪ್ರೊ.ವ.ನಂ.ಶಿವರಾಮು ಅವರ ಜನಪದ–ಜಾನಪದ ಅಧ್ಯಯನ ಹಾಗೂ ಕ್ಷೇತ್ರ ಕಾರ್ಯ ಪುಸ್ತಕ ಬಿಡುಗಡೆ, ಪುಸ್ತಕ ಬಿಡುಗಡೆ: ಸಂಸ್ಕೃತಿ ಚಿಂತಕ ಡಾ.ಹಿ.ಶಿ.ರಾಮಚಂದ್ರೇಗೌಡ, ಮುಖ್ಯ ಅತಿಥಿಗಳು: ವಿಶ್ರಾಂತ ಕುಲಪತಿ ಡಾ.ಅಂಬಳಿಕೆ ಹಿರಿಯಣ್ಣ, ಕೃತಿ ಪರಿಚಯ: ಡಾ.ವೆಂಕಟೇಶ್, ಅಧ್ಯಕ್ಷತೆ: ಕಾಲೇಜು ಪ್ರಿನ್ಸಿಪಾಲ್ ಪ್ರೊ.ಸೋಮಶೇಖರಪ್ಪ, ಸ್ಥಳ: ಮಹಾರಾಜ ಕಾಲೇಜು ಜೂನಿಯರ್ ಬಿ.ಎ.ಹಾಲ್, ಬೆಳಗ್ಗೆ 11ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಚಾಯ್ಸ್ ಈಕ್ವಿಟಿ ಗಳಿಕೆ–ಉಳಿಕೆ–ಹೂಡಿಕೆ–ಹಣಕಾಸಿನ ಮಾಹಿತಿಯ ಬಾನುಲಿ ಸರಣಿ, ಪ್ರಸ್ತುತಿ–ಮೂಕನಹಳ್ಳಿ ರಂಗಸ್ವಾಮಿ, 6.40 ಪದ ಸಂಸ್ಕೃತಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು –ಹೆಚ್.ಕೆ. ನಾರಾಯಣ, ಎಂ.ಎಸ್.ಶೀಲಾ, 9.00 ವೃತ್ತಿ ಮಾರ್ಗದರ್ಶನ, ವಿಷಯ–ಗ್ರಾಮೀಣರಿಗೆ ಸ್ವ ಉದ್ಯೋಗ ತರಬೇತಿ ಕಾರ್ಯಕ್ರಮಗಳು ಕೆ.ಎಸ್. ಸರಿತಾ ಹಾಗೂ ಹೆಚ್.ಆರ್.ನವೀನ್‌ಕುಮಾರ್ ಅವರೊಂದಿಗೆ ಮಾತುಕತೆ. ನಡೆಸಿಕೊಡುತ್ತಾರೆ ಬೇದ್ರೆ ಮಂಜುನಾಥ್, 10.00 ಹಿಂದೂಸ್ಥಾನಿ ಸಂಗೀತ –ಪಂಡಿತ್ ಅಜಯ್ ಪೋಹಂಕರ್–ಗಾಯನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಮಧ್ಯಾಹ್ನ: 12.30 ದೇವರನಾಮ–ರೇಖಾ ವೆಂಕಟೇಶ್, ಸುಚೇತನ್ ರಂಗಸ್ವಾಮಿ, 12.45 ಕನಕ ಗೀತ ಗಾಂಭೀರ್ಯ –ಬಾನುಲಿ ಸರಣಿ. ರಚನೆ–ಡಾ.ಶ್ರೀಧರ ಹೆಗಡೆ ಭದ್ರನ್, ಪ್ರಸ್ತುತಿ–ದಿವಾಕರ ಹೆಗಡೆ, 1.20 ಭಾವಗೀತೆಗಳು–ಶಾಂತಲಾ ವಟ್ಟಂ ಮತ್ತು ಸಂಗಡಿಗರು, 3.00 ವಿದ್ವಾನ್ ಎನ್.ಆರ್.ಪ್ರಶಾಂತ್–ಹಾಡುಗಾರಿಕೆ, 4.00 ಮಹಿಳಾ ರಂಗ–ಸ್ತ್ರೀ ಚೇತನ, ಭಾಗವಹಿಸುವವರು ಲೇಖಕಿ ರೂಪಶ್ರೀ, 6.50 ಕೃಷಿರಂಗ–ಸಾವಯವ ಹಾಲು ಉತ್ಪಾದನೆ ಕುರಿತು ಡಾ.ಎ. ನಾಗಮಣಿ ಅವರೊಂದಿಗೆ ಸಂದರ್ಶನ, 8.00 ಕ್ಷಿತಿಜ–ಸಾಹಿತ್ಯ ಸಾಧಕರೊಂದಿಗೆ ಸಂವಾದ, 9.30 ಹಿಂದೂಸ್ಥಾನಿ ಸಂಗೀತ–ಪ್ರಭಾಕರ್ ಧಾಕಡೇ–ವಯೋಲಿನ್ ವಾದನ, 10.00 ಜನಪದ ಸಂಗೀತ, 10.30 ಸವಿನೆನಪು

■ **ಸಂತ ಜೋಸೆಫರ ಪ್ರಥಮ ದರ್ಜೆ ಕಾಲೇಜು:** ಕನ್ನಡ ರಾಜ್ಯೋತ್ಸವ ಸಮಾರಂಭ, ಅಧ್ಯಕ್ಷತೆ: ಗುರು ವಿಜಯಕುಮಾರ್, ಮುಖ್ಯ ಅತಿಥಿ: ಚಿತ್ರ ನಿರ್ದೇಶಕ ಸುನೀಲ್‌ಕುಮಾರ್ ದೇಸಾಯಿ, ಉಪಸ್ಥಿತರು: ಗುರು ಅವಿನಾಶ್, ಲೋಕೇಶ್ ಮೊಸಳೆ, ಅಮ್ಮ ರಾಮಚಂದ್ರ, ಕು. ರಿಷಿ, ಸ್ಥಳ: ಸಂತ ಜೋಸೆಫರ್ ಶಾಲಾ ಮೈದಾನ, ಜಯಲಕ್ಷ್ಮಿಪುರಂ, ಮಧ್ಯಾಹ್ನ 2.30ಕ್ಕೆ

■ **ಡಾ. ಹಾ.ಮಾ.ನಾಯಕ ಪ್ರತಿಷ್ಠಾನ:** ಡಾ.ಹಾ.ಮಾ.ನಾಯಕ ಸ್ಮಾರಕ ಉಪನ್ಯಾಸ, ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ವಿಶ್ರಾಂತ ಅಧ್ಯಕ್ಷ ಡಾ.ಎ.ಎಸ್.ಕಿರಣ್‌ಕುಮಾರ್‌ರಿಂದ ಚಂದ್ರ ಸ್ಪರ್ಷ–ಸವಾಲುಗಳು ಕುರಿತು ಉಪನ್ಯಾಸ, ಅಧ್ಯಕ್ಷತೆ: ಪ್ರತಿಷ್ಠಾನದ ಅಧ್ಯಕ್ಷ ಡಾ.ಎಸ್.ಎಲ್. ಭೈರಪ್ಪ, ಸ್ಥಳ: ಐನ್‌ಸ್ಟೀನ್ ಸಭಾಂಗಣ, ಮಾನಸಗಂಗೋತ್ರಿ, ಸಂಜೆ 4ಕ್ಕೆ

■ **ಜನ ಚೈತನ್ಯ ಫೌಂಡೇಷನ್ :** ಕನ್ನಡ ರಾಜ್ಯೋತ್ಸವ, ಪಿ.ಮಣಿವಣ್ಣನ್ ಜನ್ಮದಿನದ ಪ್ರಯುಕ್ತ ಸಂಗೀತ ಕಾರ್ಯಕ್ರಮ, ಅಧ್ಯಕ್ಷತೆ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮುಖ್ಯ ಅತಿಥಿಗಳು: ಹಿಂದುಳಿದ ವರ್ಗಗಳ ಇಲಾಖೆ ಜಿಲ್ಲಾಧಿಕಾರಿ ಮುನಿರಾಜು, ಮಾಜಿ ಮೇಯರ್ ನಾರಾಯಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಡಾ.ಎನ್.ಕುಲದೀಪ್, ಎಂ. ಷರೀಫ್, ಡಾ.ರೇಖಾ ಅರುಣ್, ಗಾಯಕ ಅಮ್ಮ ರಾಮಚಂದ್ರ, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ, ಸಂಜೆ 4ರಿಂದ.

■ **ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಮೈಸೂರು ಸಂವಹನ ಟ್ರಸ್ಟ್, ಸಂವಹನ, ಮೈಸೂರು ಕನ್ನಡ ಸಾಹಿತ್ಯ ಕೂಟ:** ಸುವರ್ಣ ಕರ್ನಾಟಕ ರಾಜ್ಯೋತ್ಸವ ಪ್ರಯುಕ್ತ ವಿವಿಧ ಲೇಖಕರ ಹತ್ತು ಕೃತಿಗಳ ಲೋಕಾರ್ಪಣೆ, ಹಿರಿಯ ಸಾಹಿತಿಗಳಿಗೆ ಸನ್ಮಾನ, ಸಂವಹನ ಸಿರಿ ಪ್ರಶಸ್ತಿ ಪ್ರದಾನ ಹಾಗೂ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಿಗೆ ಅಭಿನಂದನಾ ಸಮಾರಂಭ, ಕೃತಿ ಬಿಡುಗಡೆ: ಬೆಂಗಳೂರು ಕರ್ನಾಟಕ ಜಾನಪದ ಪರಿಷತ್ ಅಧ್ಯಕ್ಷ ಡಾ.ಹಿ.ಶಿ. ರಾಮಚಂದ್ರೇಗೌಡ, ಕೃತಿ ಕುರಿತು ಮಾತನಾಡುವವರು : ಮೈಸೂರು ಭಾರತೀಯ ಭಾಷಾ ಸಂಸ್ಥಾನದ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಯೋಜನಾ ನಿರ್ದೇಶಕ ಪ್ರೊ.ನೀಲಗಿರಿ ಎಂ.ತಳವಾರ, ಮೈಸೂರು ಜೆಎಸ್‌ಎಸ್ ಕಾಲೇಜು ವಿಶ್ರಾಂತ ಪ್ರಾಧ್ಯಾಪಕಿ ಡಾ.ಹೆಚ್.ಟಿ. ಶೈಲಜಾ, ಅಭಿನಂದಿತರ ಕುರಿತು ಮಾತನಾಡುವವರು: ಕನ್ನಡ ಸಾಹಿತ್ಯ ಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ಅಧ್ಯಕ್ಷತೆ: ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಉಪಸ್ಥಿತರು: ಮೈಸೂರು ಸಂವಹನ ಟ್ರಸ್ಟ್ ಅಧ್ಯಕ್ಷ ಡಿ.ಎನ್. ಲೋಕಪ್ಪ, ಅಭಿನಂದಿತರು: ಕವಯಿತ್ರಿ ಡಾ.ಲತಾ ರಾಜಶೇಖರ್, ಡಾ. ಎಂ.ಮಹೇಂದ್ರಮೂರ್ತಿ ದೇವನೂರು, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಡಾ.ಸಿ.ನಾಗಣ್ಣ (ಸಾಹಿತ್ಯ), ಡಾ.ಕಬ್ಬಿನಾಲೆ ವಸಂತಭಾರದ್ವಾಜ್ (ಸಂಕೀರ್ಣ), ಜವರಪ್ಪ (ಮಾಧ್ಯಮ), ಸ್ಥಳ: ಕನ್ನಡ ಸಾಹಿತ್ಯ ಭವನ, ವಿಜಯನಗರ 1ನೇ ಹಂತ, ಸಂಜೆ 5ಕ್ಕೆ


■ **ಮೈಸೂರು ವಕೀಲರ ಸಂಘ:** 68ನೇ ಕನ್ನಡ ರಾಜ್ಯೋತ್ಸವ ದಿನಾಚರಣೆ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ: ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಶ್ರೀಮತಿ ಪ್ರಭಾವತಿ ಎಂ.ಹಿರೇಮಠ್, ಅಧ್ಯಕ್ಷತೆ: ಸಂಘದ ಅಧ್ಯಕ್ಷ ಎಂ.ಮಹಾದೇವಸ್ವಾಮಿ, ಮುಖ್ಯ ಭಾಷಣಕಾರರು: ಆಧ್ಯಾತ್ಮಿಕ ಚಿಂತಕ ಶಂಕರ್ ದೇವನೂರು, ಉಪಸ್ಥಿತರು: ಬಿ.ಆರ್.ಚಂದ್ರಮೌಳಿ, ಎಸ್.ಉಮೇಶ್, ಪುಟ್ಟಸಿದ್ದೇಗೌಡ, ಸ್ಥಳ: ಮೈಸೂರು ಜಿಲ್ಲಾ ನ್ಯಾಯಾಲಯದ ಆವರಣ, ಸಂಜೆ 6.30ಕ್ಕೆ.

ಗೃಹಲಕ್ಷ್ಮಿ ಯೋಜನೆಯ 5 ವರ್ಷದ ಕಂತಿನ ಹಣ ಚಾಮುಂಡೇಶ್ವರಿ ದೇವಿಗೆ ಅರ್ಪಣೆ

ವೈಯಕ್ತಿಕವಾಗಿ 1.18 ಲಕ್ಷ ನಾಡಿನ ಅಧಿದೇವತೆಗೆ ಅರ್ಪಿಸಿದ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್







ಮೈಸೂರು, ನ.28(ಬಿಎಲ್‌ಯು)– ಗೃಹಲಕ್ಷ್ಮಿ ಯೋಜನೆಯ 5 ವರ್ಷಗಳ ಕಂತಿನ ಹಣವನ್ನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಮೈಸೂರಿನ ಚಾಮುಂಡಿಬೆಟ್ಟದ ಚಾಮುಂಡೇಶ್ವರಿ ದೇವಿಗೆ ಅರ್ಪಿಸಿದ್ದಾರೆ.



ತಿಂಗಳಿಗೆ ಎರಡು ಸಾವಿರ ರೂಪಾಯಿಯಂತೆ 59 ತಿಂಗಳ ಕಂತಿನ ಹಣ ಒಟ್ಟು 1.18 ಲಕ್ಷ ರೂ. ಅನ್ನು ಲಕ್ಷ್ಮಿ ಹೆಬ್ಬಾಳ್ಕರ್ ವೈಯಕ್ತಿಕವಾಗಿ ಚಾಮುಂಡೇಶ್ವರಿ ದೇವಸ್ಥಾನಕ್ಕೆ ಅರ್ಪಿಸಿದ್ದಾರೆ. ವಿಧಾನಸಭಾ ಚುನಾವಣೆಗೂ ಮುನ್ನ ಚಾಮುಂಡಿಬೆಟ್ಟಕ್ಕೆ ಭೇಟಿ ನೀಡಿದ್ದ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್, ಲಕ್ಷ್ಮಿ ಹೆಬ್ಬಾಳ್ಕರ್ ಗ್ಯಾರಂಟಿ ಯೋಜನೆಯ ಕಾರ್ಡ್‌ಗಳನ್ನು ದೇವಿಯ ಮುಂದಿಟ್ಟು ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದರೆ ಅವುಗಳನ್ನು ಜಾರಿಗೊಳಿಸುವುದಾಗಿ ವಾಗ್ದಾನ ಮಾಡುವುದರೊಂದಿಗೆ ಹರಕೆ ಕಟ್ಟಿಕೊಂಡಿದ್ದರು.

ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರ ಈಗಾಗಲೇ 4 ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿದೆ. ಆಗಸ್ಟ್ 30ರಂದು ಮೈಸೂರಿನಲ್ಲಿ ಗೃಹ ಲಕ್ಷ್ಮಿ ಯೋಜನೆಗೆ ಚಾಲನೆ ನೀಡುವ ಮೊದಲು ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್, ಲಕ್ಷ್ಮಿ ಹೆಬ್ಬಾಳ್ಕರ್ ಅವರು ಚಾಮುಂಡಿಬೆಟ್ಟಕ್ಕೆ ಭೇಟಿ ನೀಡಿ ಗೃಹ ಲಕ್ಷ್ಮಿ ಯೋಜನೆಯ 2 ಸಾವಿರ ರೂ.ನ ಮೊದಲ ಕಂತಿನ ಹಣವನ್ನು ಚಾಮುಂಡೇಶ್ವರಿಗೆ ಅರ್ಪಿಸಿದ್ದರು. ಪ್ರತಿ ತಿಂಗಳ ಕಂತಿನ ಹಣವನ್ನು ದೇವಿಗೆ ಅರ್ಪಿಸುವಂತೆ ಮಂಡ್ಯ ಶಾಸಕ ದಿನೇಶ್ ಗೂಳೀಗೌಡ ಅವರು ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಹಾಗೂ ಲಕ್ಷ್ಮಿ ಹೆಬ್ಬಾಳ್ಕರ್‌ಗೆ ಮನವಿ ಮಾಡಿದ್ದರು. ಈ ಹಿನ್ನೆಲೆಯಲ್ಲಿ ಲಕ್ಷ್ಮಿ ಹೆಬ್ಬಾಳ್ಕರ್ 59 ತಿಂಗಳ ಕಂತಿನ ಹಣ 1.18 ಲಕ್ಷ ರೂಪಾಯಿಯನ್ನು ವೈಯಕ್ತಿಕವಾಗಿ ತಾಯಿ ಚಾಮುಂಡೇಶ್ವರಿ ದೇವಿಗೆ ಅರ್ಪಿಸಿದ್ದಾರೆ. ಲಕ್ಷ್ಮಿ ಹೆಬ್ಬಾಳ್ಕರ್ ನೀಡಿರುವ ಹಣವನ್ನು ದಿನೇಶ್ ಗೂಳಿಗೌಡರು ದೇವಿಗೆ ಅರ್ಪಿಸಿದ್ದಾರೆ.

ಮೈಸೂರು ಸ್ಪೋರ್ಟ್ಸ್ ಕ್ಲಬ್‌ನಿಂದ ಮೈಸೂರು ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್ ಪುರಸ್ಕೃತ ಕೆ.ಬಿ.ಗಣಪತಿ ಹಾಗೂ ಜಾವಗಲ್ ಶ್ರೀನಾಥ್‌ಗೆ ಸನ್ಮಾನ



ಕಳೆದ ಅಕ್ಟೋಬರ್ 18ರಂದು ನಡೆದ ಮೈಸೂರು ವಿಶ್ವವಿದ್ಯಾನಿಲಯದ ಘಟಿಕೋತ್ಸವ ಸಮಾರಂಭದಲ್ಲಿ ಗೌರವ ಡಾಕ್ಟರೇಟ್ ಪುರಸ್ಕೃತರಾದ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ. ಕೆ.ಬಿ.ಗಣಪತಿಯವರು ಹಾಗೂ ಮಾಜಿ ಭಾರತೀಯ ಕ್ರಿಕೆಟ್ ಆಟಗಾರ ಜಾವಗಲ್ ಶ್ರೀನಾಥ್ ಅವರನ್ನು ಶ್ರೀ ಕಂಠೀರವ ನರಸಿಂಹರಾಜ ಸ್ಪೋರ್ಟ್ಸ್ (ಮೈಸೂರು ಸ್ಪೋರ್ಟ್ಸ್ ಕ್ಲಬ್) ವತಿಯಿಂದ ಸನ್ಮಾನಿಸಲಾಯಿತು. ಸಮಾರಂಭದಲ್ಲಿ ಹಾಜರಾಗಲು ಸಾಧ್ಯವಾಗದ ಜಾವಗಲ್ ಶ್ರೀನಾಥ್ ಅವರು ಕಳುಹಿಸಿದ ಸಂದೇಶದ ವಿಡಿಯೋ ತುಣುಕನ್ನು ಈ ವೇಳೆ ಪ್ರದರ್ಶಿಸಲಾಯಿತು. ಮೈಸೂರು ಸ್ಪೋರ್ಟ್ಸ್ ಕ್ಲಬ್‌ನಲ್ಲಿ ನಡೆದ ಅಭಿನಂದನಾ ಸಮಾರಂಭ ಮತ್ತು ದೀಪಾವಳಿ ದೀಪೋತ್ಸವವನ್ನು ಡಾ.ಕೆ.ಬಿ.ಗಣಪತಿ ಅವರು ದೀಪ ಬೆಳಗುವ ಮೂಲಕ ಉದ್ಘಾಟಿಸಿದರು. ಚಿತ್ರದಲ್ಲಿ (ಎಡದಿಂದ–ಮುಂದಿನ ಸಾಲು) ಡಾ.ವಿಶ್ವನಾಥ್ (ಗೌರವ ಕಾರ್ಯದರ್ಶಿ), ಶ್ರೀಮತಿ ಪವಿತ್ರ ಮಲ್ಲಿಕಾರ್ಜುನ, ಶ್ರೀಮತಿ ರ್‍ಯಾಲಿ ಗಣಪತಿ, ಡಾ. ಕೆ.ಬಿ.ಗಣಪತಿ, ಎಂ.ಸಿ.ಮಲ್ಲಿಕಾರ್ಜುನ (ಅಧ್ಯಕ್ಷ), ಎಸ್.ಕೆ.ದಿನೇಶ್ (ಗೌರವ ಖಜಾಂಚಿ) ಮತ್ತು ಎಂ.ಸಿ. ವಿಟ್ಠಲ್ (ಸಮಿತಿ ಸದಸ್ಯರು). (ನಿಂತಿರುವವರು ಎಡದಿಂದ–ಹಿಂದಿನ ಸಾಲು) ಗಫಾರ್ ಇಕ್ಬಾಲ್ ಮತ್ತು ಆರ್.ರೋಹಿತ್ (ಸಮಿತಿ ಸದಸ್ಯರು), ಆರ್.ಅಜಯ್‌ಕುಮಾರ್‌ಸಿಂಗ್ (ಉಪಾಧ್ಯಕ್ಷರು), ವಿ.ಎಂ.ಬ್ರಿಜೇಶ್ ಅರಸ್, ಆರ್.ಕರಣ್ (ಸಮಿತಿ ಸದಸ್ಯರು).



ಮೈಸೂರು ಮಹಾನಗರಪಾಲಿಕೆ ಮಾಜಿ ಸದಸ್ಯ ಸಿ.ಮಹದೇಶ್ ಅವರ 60ನೇ ಹುಟ್ಟುಹಬ್ಬದ ಪ್ರಯುಕ್ತ ವಾರ್ಡ್ ನಂ.19ರ ಅಭಿಮಾನಿಗಳಿಂದ ನವಚೇತನ ಬಸವೇಶ್ವರ ವಿಕಲಚೇತನ ಮಕ್ಕಳಿಗೆ ಕಣ್ಣಿನ ತಪಾಸಣೆ ಹಾಗೂ ಭೋಜನದ ವ್ಯವಸ್ಥೆ ಮಾಡಲಾಯಿತು. ಚಿತ್ರದಲ್ಲಿ ನಗರಪಾಲಿಕೆ ಮಾಜಿ ಸದಸ್ಯೆ ಭಾಗ್ಯ ಮಹದೇಶ್, ಟ್ರಸ್ಟಿನ ಸಂಸ್ಥಾಪಕ ಮರಿಗೌಡ, ಪಡುವಾರಹಳ್ಳಿ ಪಾಪಣ್ಣ, ಕೃಷ್ಣ, ಪುರುಷೋತ್ತಮ್, ಪ್ರದೀಪ್, ಕೃಷ್ಣೇಗೌಡಮೂರ್ತಿ, ಮಾದೇಶ, ರಮೇಶ್ ಇದ್ದರು.

ಪರೀಕ್ಷೆಗೆ ಏಕಾಗ್ರತೆ, ಸಮಯಪಾಲನೆ ಮುಖ್ಯ

ಶೈಕ್ಷಣಿಕ ಮನೋವಿಜ್ಞಾನ ತಜ್ಞ ಸಿ.ಎಸ್.ಶ್ರೀನಿವಾಸ್ ಕಿವಿಮಾತು



ಮೈಸೂರು,ನ.28(ಎಸ್‌ಬಿಡಿ)– ಪರೀಕ್ಷೆ ವೇಳೆ ಏಕಾಗ್ರತೆ, ಸಮಾಧಾನ ಹಾಗೂ ಸಮಯಪಾಲನೆ ಅತ್ಯಗತ್ಯ ಎಂದು ಶೈಕ್ಷಣಿಕ ಮನೋವಿಜ್ಞಾನ ತಜ್ಞ ಸಿ.ಎಸ್.ಶ್ರೀನಿವಾಸ್, ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ವಿಜಯ ವಿಠಲ ವಿದ್ಯಾಶಾಲೆಯಲ್ಲಿ 10ನೇ ತರಗತಿ ವಿದ್ಯಾರ್ಥಿಗಳಿಗಾಗಿ ಏರ್ಪಡಿಸಿದ್ದ ವಿಶೇಷ ಕಾರ್ಯಾಗಾರದಲ್ಲಿ ಇವರು, ಪರೀಕ್ಷಾ ಕೊಠಡಿಯಲ್ಲಿ ವಿದ್ಯಾರ್ಥಿಗಳ ತಪ್ಪುಗಳು ಹಾಗೂ ಅವುಗಳನ್ನು ನಿಯಂತ್ರಿಸುವ ಬಗ್ಗೆ ತಿಳಿಸಿಕೊಟ್ಟರು.

ಕಂಠಪಾಠದ ಮೂಲಕ ಪರೀಕ್ಷೆಯಲ್ಲಿ ಯಶಸ್ವಿಯಾಗಲು ಸಾಧ್ಯವಿಲ್ಲ. ಅಧ್ಯಯನ ಮಾಡಿದ್ದನ್ನು ವಿಮರ್ಶೆ ಮಾಡಿಕೊಳ್ಳುವ ಮೂಲಕ ಸ್ಮೃತಿಪಟಲದಲ್ಲಿ ದಾಖಲಿಸಿಕೊಳ್ಳಬೇಕು. ಇದಕ್ಕೆ ಪುನರಾವರ್ತನೆ ಸಹಕಾರಿಯಾಗುತ್ತದೆ. ಬೋರ್ಡ್ ಪರೀಕ್ಷೆ ಎಂಬುದನ್ನು ಮನಸ್ಸಿನಲ್ಲಿಟ್ಟುಕೊಂಡು ಓದುವುದಕ್ಕಿಂತ ವಿಷಯವನ್ನು ಅರ್ಥೈಸಿಕೊಳ್ಳುವುದು ಬಹಳ ಮುಖ್ಯ. ಪರೀಕ್ಷಾ ಕೊಠಡಿಯಲ್ಲಿ ಕುಳಿತಾಗ ಗೊಂದಲ ಮಾಡಿಕೊಳ್ಳದೆ ಸಮಾಧಾನದಿಂದ ಇರಬೇಕು. ತಾವು ಬರೆಯುವುದರ ಬಗ್ಗೆ ಏಕಾಗ್ರತೆ ಇರಬೇಕು. ಜೊತೆಗೆ ಸಮಯ ಪಾಲಿಸಬೇಕು ಎಂದು ಕಿವಿಮಾತು ಹೇಳಿದರು.

ವಿದ್ಯಾರ್ಥಿಗಳು ಬೋರ್ಡ್ ಪರೀಕ್ಷೆಗೆ ಹೇಗೆ ಓದಬೇಕು? ಓದಿದ್ದನ್ನು ನೆನಪಿಟ್ಟುಕೊಳ್ಳುವುದು ಹೇಗೆ? ಯಾವ ರೀತಿಯಲ್ಲಿ ಸಮಯ ಪಾಲಿಸಬೇಕು?. ಓದಿದ್ದನ್ನು ಪುನರಾವರ್ತನೆ ಮಾಡುವ ಕ್ರಮವೇನು?. ನೆನಪಿನಲ್ಲಿಟ್ಟುಕೊಳ್ಳಲು ಯಾವ ವಿಧಾನ ಅನುಸರಿಸಬೇಕು? ಎಂಬ ಹಲವು ವಿಚಾರಗಳನ್ನು ವಿದ್ಯಾರ್ಥಿಗಳಿಗೆ ತಿಳಿಸಿಕೊಟ್ಟರಲ್ಲದೆ, ಸರಿಯಾದ ಕ್ರಮದಲ್ಲಿ ಅಧ್ಯಯನ ಮಾಡಿದರೆ ಎಲ್ಲಾ ವಿದ್ಯಾರ್ಥಿಗಳೂ ಶೇ.85ಕ್ಕಿಂತ ಹೆಚ್ಚು ಅಂಕ ಪಡೆಯಬಹುದು ಎಂದು ವಿಶ್ವಾಸ ತುಂಬಿದರು. ಈ ಸಂದರ್ಭದಲ್ಲಿ ವಿದ್ಯಾಶಾಲೆಯ ಪ್ರಾಂಶುಪಾಲರಾದ ಎಸ್.ಎ.ವೀಣಾ ಸೇರಿದಂತೆ ಶಿಕ್ಷಕರು ಉಪಸ್ಥಿತರಿದ್ದರು.

ಡಿ.1ರಂದು 'ಅನುರಕ್ತೆ' ನಾಟಕ



ಮೈಸೂರು,ನ.28(ಜಿಎ)–ಮಳವಳ್ಳಿ ರಂಗಬಂಡಿ ತಂಡದ ವತಿಯಿಂದ ಶಶಿಕಾಂತ ಯಡಹಳ್ಳಿ ರಚಿತ ದೇವಯಾನಿ ಬದುಕಿನ ದುರಂತ ಗಾತೆ 'ಅನುರಕ್ತೆ' ನಾಟಕವು ಡಿ.1ರಂದು ಸಂಜೆ 6.30ಕ್ಕೆ ನಗರದ ಕಲಾಮಂದಿರದ ಆವರಣದಲ್ಲಿರುವ ಕಿರುರಂಗ ಮಂದಿರದಲ್ಲಿ ಪ್ರದರ್ಶನಗೊಳ್ಳಲಿದೆ ಎಂದು ವಿನ್ಯಾಸಕಾರರು ಮತ್ತು ನಿರ್ದೇಶಕ ಮಧು ಮಳವಳ್ಳಿ ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿ, ಈ ನಾಟಕವು ಏಕವ್ಯಕ್ತಿ ಪ್ರಸ್ತುತಿಯಾಗಿದ್ದು, ಉಮಾಶ್ರೀ ಮಧು ಮಳವಳ್ಳಿ ಅಭಿನಯಿಸುತ್ತಿದ್ದಾರೆ ಎಂದರು.

ನಾಟಕವನ್ನು ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯ ಕುಲಪತಿ ಪ್ರೊ.ನಾಗೇಶ್ ವಿ.ಬೆಟ್ಟಕೋಟೆ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಕನ್ನಡ–ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಪ್ರೀತಿ ನಾಗರಾಜ್, ಶಶಿಕಾಂತ ಯಡಹಳ್ಳಿ, ಪ್ರಸನ್ನಕುಮಾರ್ ಕೆರಗೋಡು, ಎಂ.ಎಲ್.ಮಧುಕರ್ ಭಾಗವಹಿಸಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಉಮಾಶ್ರೀ ಮಧು ಮಳವಳ್ಳಿ, ಶ್ರೀವಿದ್ಯಾ ಕಾಮತ್, ಗಣೇಶ್ ಅಮೀನ್‌ಗಡ ಉಪಸ್ಥಿತರಿದ್ದರು.

ಇಂದು ಕನ್ನಡ ರಾಜ್ಯೋತ್ಸವ

ಮೈಸೂರು,ನ.28(ಜಿಎ)–ಮೈಸೂರಿನ ಆಲನಹಳ್ಳಿ ಗಿರಿದರ್ಶಿನಿ ಬಡಾವಣೆಯಲ್ಲಿನ ಶಾಶ್ವತ ಸೇವಾ ಶಾಲೆ ವತಿಯಿಂದ ನ.29ರ ಸಂಜೆ 5ಕ್ಕೆ ಶಾಲಾವರಣದಲ್ಲಿ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಕನ್ನಡ ಶಿಕ್ಷಕ ರಮೇಶ್ ತಾಯೂರು ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮದಲ್ಲಿ ಕಳೆದ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಕನ್ನಡದಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಾದ ಭೂಮಿಕಾ ಪೈ, ಭೀಮನಗೌಡ ಪಾಟೀಲ್, ಅನುಪಮ ಹಿರೇಹೊಳಿ, ಯಶಸ್ ಗೌಡ ಅವರಿಗೆ ಪೂಜ್ಯ ಆಯಿ ಮಾತಾಜಿ ಪ್ರತಿಭಾ ಪುರಸ್ಕಾರ ನೀಡಿ ಸನ್ಮಾನಿಸಲಾಗುತ್ತಿದೆ ಎಂದರು. ಗೋಷ್ಠಿಯಲ್ಲಿ ಕಾರ್ಯದರ್ಶಿ ಚೌಧರಿ, ಕುಮಾರಸ್ವಾಮಿ ಉಪಸ್ಥಿತರಿದ್ದರು.

ನಗರ ಪ್ರದೇಶಗಳ ಸಂಚಾರ ವ್ಯವಸ್ಥೆಗೆ ಸಿಎಂ ಅಸಮಾಧಾನ

■ ಮುನಿಸಿಪಾಲಿಕಾ–2023 ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಅಧಿಕಾರಿಗಳು ತರಾಟೆಗೆ

■ ಸಂಚಾರ ಒತ್ತಡದಿಂದ ರೋಸಿ ಹೋಗಿರುವ ಜನರಿಗೆ ಮುಕ್ತಿ ನೀಡಲು ಸೂಚನೆ


ಬೆಂಗಳೂರು, ನ.28 (ಕೆಎಂಶಿ)–ನಗರ ಪ್ರದೇಶಗಳಲ್ಲಿನ ಸಂಚಾರ ವ್ಯವಸ್ಥೆ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಹಿರಂಗವಾಗಿಯೇ ಅಸಮಾಧಾನ ವ್ಯಕ್ತಪಡಿಸಿ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

ಅರಮನೆ ಮೈದಾನದಲ್ಲಿ ಆರಂಭವಾದ ಮೂರು ದಿನಗಳ 17ನೇ ಆವೃತ್ತಿಯ ಮುನಿಸಿಪಾಲಿಕಾ–2023 ಅಂತಾರಾಷ್ಟ್ರೀಯ ಸಮ್ಮೇಳನ ಮತ್ತು ಪ್ರದರ್ಶನ ಉದ್ಘಾಟಿಸಿ ಮಾತನಾಡಿದ ಅವರು, ಸಂಚಾರ ಒತ್ತಡದಿಂದ ಜನರು ನಗರ ಪ್ರದೇಶಗಳಲ್ಲಿ ರೋಸಿ ಹೋಗಿದ್ದಾರೆ.

ಜನರು ನಿತ್ಯ ಅನುಭವಿಸುತ್ತಿರುವ ಕಿರಿಕಿರಿ ತಪ್ಪಿಸಿದರೆ ಎಲ್ಲಾ ಮೂಲ ಸೌಲಭ್ಯ ನೀಡಿದಂತೆ. ಮೊದಲು ಈ ಒತ್ತಡ ತಪ್ಪಿಸಲು ಏನು ಕ್ರಮ ಕೈಗೊಳ್ಳುತ್ತೀರೋ ಕೈಗೊಳ್ಳಿ ನಿಮ್ಮ ಜತೆ ನಾವಿದ್ದೇವೆ ಎಂದರು.

ರಾಜ್ಯಾದ್ಯಂತ ನಗರ ಪ್ರದೇಶಗಳಲ್ಲಿ ಟ್ರಾಫಿಕ್ ಒತ್ತಡದಿಂದ ಜನ ಸಂಕಷ್ಟಕ್ಕೊಳಗಾಗಿದ್ದು, ಮೊದಲು ಇದನ್ನು ತಪ್ಪಿಸಬೇಕು. ಟ್ರಾಫಿಕ್ ಒತ್ತಡದಿಂದ ಜನ ಅನುಭವಿಸುತ್ತಿರುವ ಕಿರಿಕಿರಿ ತಪ್ಪಿಸುವುದು, ಮೂಲ ಸೌಕರ್ಯಗಳಿಗಾಗಿ ಪರದಾಡುವುದನ್ನು ತಪ್ಪಿಸುವುದು ಆದ್ಯತೆಯಾಗಬೇಕು ಎಂದು ಕಿವಿಮಾತು ಹೇಳಿದ್ದಾರೆ.

ನಗರ ಪ್ರದೇಶದ ಹಲವು ಪಟ್ಟಣಗಳ ಜನರಿಗೆ ಶುದ್ಧ ಕುಡಿಯುವ ನೀರು ಒದಗಿಸಲು ಇತ್ತೀಚೆಗೆ 9 ಸಾವಿರ ಕೋಟಿ ರೂ ನೀಡಲು ಸರ್ಕಾರ ನಿರ್ಧರಿಸಿದೆ. 53 ಪಟ್ಟಣಗಳಿಗೆ ಒಳಚರಂಡಿ ಸೌಲಭ್ಯ



ಕಲ್ಪಿಸಲು 1900 ಕೋಟಿ ರೂಪಾಯಿ ಮಂಜೂರು ಮಾಡಲಾಗಿದೆ. ಜನರ ಜೀವನಮಟ್ಟ ಇನ್ನಷ್ಟು ಸುಗಮಗೊಳಿಸಲು ಅಗತ್ಯ ಇರುವ ಎಲ್ಲಾ ವಲಯಗಳಿಗೂ ಸರ್ಕಾರ ಅಗತ್ಯ ಅನುದಾನವನ್ನು ಒದಗಿಸುತ್ತಿದೆ ಎಂದರು.

ಹಿಂದಿನ ಸರ್ಕಾರದಲ್ಲಿ 197 ಇಂದಿರಾ ಕ್ಯಾಂಟಿನ್ ತೆರೆದಿದ್ದು, ಈ ಬಾರಿ ನಾವು ಹೆಚ್ಚುವರಿಯಾಗಿ 188 ಇಂದಿರಾ ಕ್ಯಾಂಟೀನ್‌ಗಳನ್ನು ತೆರೆಯುತ್ತಿದ್ದೇವೆ. ಬೆಲೆ ಏರಿಕೆ ಹೆಚ್ಚಾಗಿದ್ದರೂ ಹಿಂದಿನ ದರದಲ್ಲೇ ಬಡವರು, ಮಧ್ಯಮ ವರ್ಗದವರಿಗೆ ಊಟ–ಉಪಾಹಾರದ ವ್ಯವಸ್ಥೆ ಕಲ್ಪಿಸಿದ್ದೇವೆ ಎಂದರು.

ದೇಶದಲ್ಲಿ ಬ್ರಾಂಡ್ ಬೆಂಗಳೂರನ್ನು ನಂಬರ್ ಒನ್ ಆಗಿಸಬೇಕಿದ್ದು, ಇದಕ್ಕಾಗಿ ಬ್ರ್ಯಾಂಡ್ ಬೆಂಗಳೂರು ಅಭಿಯಾನ ಹಮ್ಮಿಕೊಳ್ಳಲಾಗಿದೆ. ಬೆಂಗಳೂರು ವಿಜ್ಞಾನ–ತಂತ್ರಜ್ಞಾನ, ಮಾಹಿತಿ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಮುಂಚೂಣಿಯಲ್ಲಿದ್ದು, ಬೆಂಗಳೂರು ನಗರದ ಹಿರಿಮೆ ಗರಿಮೆಯನ್ನು ಇನ್ನಷ್ಟು ಎತ್ತರಕ್ಕೆ ಏರಿಸಲಾಗುವುದು ಎಂದು ಸಿದ್ದರಾಮಯ್ಯ ಹೇಳಿದರು.

> "2011ರ ಗಣತಿ ಪ್ರಕಾರ, ರಾಜ್ಯದ ಜನಸಂಖ್ಯೆಯ ಶೇಕಡಾ 38ರಷ್ಟು ಭಾಗ ನಗರ ಪ್ರದೇಶಗಳಲ್ಲಿದ್ದು, ಈಗ ಇನ್ನೂ ಹೆಚ್ಚಾಗಿದೆ. ಈ ಅಂಶವನ್ನು ಮನಸ್ಸಿನಲ್ಲಿಟ್ಟುಕೊಂಡು ಜನ ಅನುಭವಿಸುತ್ತಿರುವ ಟ್ರಾಫಿಕ್ ಒತ್ತಡವನ್ನು ನಿವಾರಿಸಲು ಕ್ರಮ ಕೈಗೊಳ್ಳಬೇಕು. ದೇಶ ಸುಸ್ಥಿರವಾಗಿ ಬೆಳೆಯಬೇಕಾದರೆ ನಗರ ಪ್ರದೇಶದ ಜೊತೆ ಗ್ರಾಮೀಣ ಭಾರತವೂ ಸುಸ್ಥಿರ ಬೆಳವಣಿಗೆ ಕಾಣಬೇಕು. ರಾಜ್ಯ ಸರ್ಕಾರ ನಗರಗಳ ಜತೆ ಗ್ರಾಮೀಣ ಪ್ರದೇಶದ ಶ್ರೇಯೋಭಿವೃದ್ಧಿಗೂ ಒತ್ತು ನೀಡಿದೆ. ರಾಜ್ಯದ 316 ನಗರಗಳಿಗೆ ಅಗತ್ಯದ ಎಲ್ಲಾ ನಾಗರಿಕ ಸವಲತ್ತುಗಳನ್ನು ನಮ್ಮ ಸರ್ಕಾರ ಒದಗಿಸುತ್ತಿದೆ. ರಾಜ್ಯದಲ್ಲಿ 2011ರ ಜನಗಣತಿ ಪ್ರಕಾರ ಶೇ.38ರಷ್ಟು ಮಂದಿ ನಗರ ಪ್ರದೇಶಗಳಲ್ಲಿ ನೆಲೆಸಿದ್ದಾರೆ. ಇವರೆಲ್ಲರಿಗೂ ಸಂಚಾರ ಒತ್ತಡದ ಕಿರಿಕಿರಿ ಇಲ್ಲದೇ ಸುಗಮ ಸಾರಿಗೆ ವ್ಯವಸ್ಥೆ, ಸುಗಮ ಜೀವನ, ಅಗತ್ಯ ರೀತಿಯಲ್ಲಿ ಕಸ ವಿಲೇವಾರಿ, ಒಳಚರಂಡಿ ವ್ಯವಸ್ಥೆ ಸೇರಿ ನಾಗರಿಕ ಸವಲತ್ತುಗಳನ್ನು ಒದಗಿಸುವುದು ಸವಾಲಿನ ಕೆಲಸ. ಆದರೆ ಇದನ್ನು ಒದಗಿಸುವುದು ಸರ್ಕಾರದ ಜವಾಬ್ದಾರಿ.
>
> –ಸಿದ್ದರಾಮಯ್ಯ, ಮುಖ್ಯಮಂತ್ರಿ

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾಡಿ, ನಗರ ಸ್ಥಳೀಯ ಸಂಸ್ಥೆಗಳಲ್ಲಿ ಉತ್ತಮ ಅಭ್ಯಾಸಗಳನ್ನು ರೂಢಿಸಿಕೊಳ್ಳುವ ಮೂಲಕ ಆರ್ಥಿಕವಾಗಿ ಸ್ವಾವಲಂಬನೆ ಸಾಧಿಸ ಬೇಕಾಗಿದೆ ಎಂದರು. ಈ ನಿಟ್ಟಿನಲ್ಲಿ ಬಿಬಿಎಂಪಿ ಸೇರಿದಂತೆ ನಗರ ಪಟ್ಟಣ ಪ್ರದೇಶಗಳಲ್ಲಿ ಆಸ್ತಿ ದಾಖಲೆಗಳನ್ನು ಮನೆ ಬಾಗಿಲಿಗೆ ತಲುಪಿಸುವ ಕಾರ್ಯಕ್ರಮ ರೂಪಿಸಿ ಜಾರಿಗೊಳಿಸಲಾಗುತ್ತಿದೆ. ಆಸ್ತಿ ದಾಖಲೆಗಳನ್ನು ಡಿಜಿಟಲೀಕರಣ ಮಾಡಿದರೆ ಹೆಚ್ಚಿನ ರೀತಿಯಲ್ಲಿ ಅನುಕೂಲವಾಗುವ ಜೊತೆಗೆ ನ್ಯಾಯಯುತ ಮಾರ್ಗದಲ್ಲಿ ತೆರಿಗೆ ವಿಧಿಸಲು ಸಾಧ್ಯವಾಗಲಿದೆ. ನಗರ ಸ್ಥಳೀಯ ಸಂಸ್ಥೆಗಳು ಈ ನಿಟ್ಟಿನಲ್ಲಿ ಹೆಚ್ಚಿನ ಮುತುವರ್ಜಿ ವಹಿಸಬೇಕು ಎಂದರು.

ಬೆಂಗಳೂರು ನಗರದಲ್ಲಿ ಆಸ್ತಿಗಳ ಡಿಜಿಟಲೀಕರಣಕ್ಕೆ ಕ್ರಮ ಕೈಗೊಂಡಿದ್ದು, ಮನೆ ಮನೆ ಬಾಗಿಲಿಗೆ ತೆರಳಿ ದಾಖಲೆಗಳನ್ನು ಸಂಗ್ರಹಿಸಲಾಗುತ್ತಿದೆ. ಆಸ್ತಿಗಳಿಗೆ ಶೀಘ್ರದಲ್ಲೇ ಪಿಐಡಿ ಸಂಖ್ಯೆ ನೀಡುತ್ತಿದ್ದು, ಇದರಿಂದ ವರಮಾನ ಸಂಗ್ರಹಣೆಗೆ ಸಹಕಾರಿಯಾಗಲಿದೆ. ಕಟ್ಟಡ ನಿರ್ಮಾಣಕ್ಕೆ ಅನುಮತಿ ನೀಡುವ ಬಗ್ಗೆ ರಾಜ್ಯದಲ್ಲಿರುವ ಕಾನೂನಿನಲ್ಲಿ ಬದಲಾವಣೆ ತರಲು ಉದ್ದೇಶಿಸಲಾಗಿದೆ. ಶೀಘ್ರದಲ್ಲೇ ನಗರಾಭಿವೃದ್ಧಿ ಮತ್ತು ಪೌರಾಡಳಿತ ಸಚಿವರ ಸಭೆ ಕರೆದು ಚರ್ಚಿಸಿ ಸೂಕ್ತ ನಿಯಮಗಳನ್ನು ರೂಪಿಸಲಾಗುವುದು. ಒಂದು ಮಹಡಿ ಎಂದು ಅನುಮತಿ ಪಡೆದು ನಾಲ್ಕು ಮಹಡಿ ನಿರ್ಮಿಸುತ್ತಿದ್ದು, ಇಂತಹ ನಡವಳಿಕೆಗಳಿಗೆ ಕಡಿವಾಣ ಹಾಕುತ್ತೇವೆ. ಸೂಕ್ತ ರೀತಿಯಲ್ಲಿ ತೆರಿಗೆ ವಸೂಲಿ ಮಾಡುತ್ತೇವೆ ಎಂದು ಹೇಳಿದರು.

ಬೆಂಗಳೂರು ನಗರದಲ್ಲಿ 12 ವರ್ಷಗಳಿಂದ ಕುಡಿಯುವ ನೀರಿನ ದರ ಏರಿಕೆ ಮಾಡಿಲ್ಲ. ನೂರಾರು ಕಿಲೋಮೀಟರ್ ದೂರದಿಂದ ನೀರನ್ನು ಪಂಪ್ ಮಾಡಿ ನೀರು ಪೂರೈಕೆ ಮಾಡಲಾಗುತ್ತಿದೆ. ಇದಕ್ಕೆ ಹೆಚ್ಚಿನ ಹಣ ವೆಚ್ಚವಾಗುತ್ತದೆ. ನಗರ ಪ್ರದೇಶಗಳಿಗೆ ಶುದ್ಧ ಕುಡಿಯುವ ನೀರು ಮತ್ತು ಗಾಳಿ ಒದಗಿಸುವುದು ನಮ್ಮ ಜವಾಬ್ದಾರಿಯಾಗಿದೆ.

ನಗರ ಪ್ರದೇಶಗಳನ್ನು ಹಸಿರುಮಯಗೊಳಿಸುವ, ಸರ್ಕಾರಿ ಸೇವೆಗಳನ್ನು ಡಿಜಿಟಲೀಕರಣಗೊಳಿಸುವ ಮೂಲಕ ಸುಗಮ ಜೀವನಕ್ಕೆ ಸರ್ಕಾರ ಹೆಚ್ಚಿನ ಒತ್ತು ನೀಡುತ್ತಿದೆ ಎಂದು ಡಿ.ಕೆ.ಶಿವಕುಮಾರ್ ಹೇಳಿದರು.

ಮಧ್ಯ ಪ್ರದೇಶದ ಗ್ವಾಲಿಯರ್‌ನಲ್ಲಿ ಕನ್ನಡ ರಾಜ್ಯೋತ್ಸವ



ಮೈಸೂರು, ನ.28– ಮಧ್ಯಪ್ರದೇಶದ ಗ್ವಾಲಿಯರ್ ನಗರದಲ್ಲಿ ಕನ್ನಡ ಬಳಗದ ವತಿಯಿಂದ ನ.26ರಂದು ಕನ್ನಡ ರಾಜ್ಯೋತ್ಸವವನ್ನು ಅದ್ದೂರಿಯಾಗಿ ಆಚರಿಸಲಾಯಿತು. ಗ್ವಾಲಿಯರ್‌ನ ಪ್ರತಿಷ್ಠಿತ ಸುರುಚಿ ಹೋಟೆಲ್‌ನಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಮೊದಲಿಗೆ ಕನ್ನಡ ಬಳಗದ ಮಹಿಳಾ ಸದಸ್ಯರು ತಾಯಿ ಭುವನೇಶ್ವರಿ ಫೋಟೋಗೆ ಪೂಜೆ ಸಲ್ಲಿಸಿದರು. ಬಳಿಕ ಮುದ್ದು ಮಕ್ಕಳು ಧ್ವಜಾರೋಹಣ ನೆರವೇರಿಸುವ ಮೂಲಕ ಕನ್ನಡ ಹಬ್ಬಕ್ಕೆ ಚಾಲನೆ ನೀಡಿದರು.


ಗ್ವಾಲಿಯರ್ ವಾಯು ನೆಲೆಯ ದೇಶಪ್ರೇಮಿ ಯೋಧರು ಬಿಡುವಿಲ್ಲದ ಕೆಲಸ ಕಾರ್ಯಗಳ ನಡುವೆಯೂ ಕಾರ್ಯಕ್ರಮದಲ್ಲಿ ಭಾಗಿಯಾಗಿ ತಾಯ್ನುಡಿ ಮೇಲಿನ ಪ್ರೀತಿಯನ್ನು ಮೆರೆದಿದ್ದು ವಿಶೇಷವಾಗಿತ್ತು. ಇದೇ ವೇಳೆ ನೃತ್ಯ, ಗಾಯನ, ನಾಟಕ ಇನ್ನಿತರ ಸಾಂಸ್ಕೃತಿಕ ಕಾರ್ಯಕ್ರಮಗಳು ನೆರೆದಿದ್ದ ನೂರಾರು ಕನ್ನಡಿಗರ ಮನಸೂರೆಗೊಂಡವು. ಅದೇ ದಿನ ಸಂಜೆ ಗ್ವಾಲಿಯರ್ ನಗರದ ಪ್ರಮುಖ ರಸ್ತೆಗಳಲ್ಲಿ ಬೈಕ್ ರ್‍ಯಾಲಿ ನಡೆಸಿ, ಕನ್ನಡ ಬಾವುಟದ ಮೆರವಣಿಗೆ ನಡೆಸಲಾಯಿತು.

ಡಿ.5ರಿಂದ ಸುದರ್ಶನ ಕ್ರಿಯೆ

ಮೈಸೂರು,ನ.28–ಶ್ರೀ ರವಿಶಂಕರ್ ಗುರೂಜಿಯವರ ಆರ್ಟ್ ಆಫ್ ಲಿವಿಂಗ್ ವತಿಯಿಂದ ಡಿ.5ರಿಂದ 9ರವರೆಗೆ ಆರೋಗ್ಯಕರ ಜೀವನ, ಧ್ಯಾನ, ಯೋಗ, ಪ್ರಾಣಾಯಾಮ, ಸುದರ್ಶನ ಕ್ರಿಯೆಯನ್ನು ಕಲಿಸುವ ಶಿಬಿರವನ್ನು 1/ಬಿ, ಲೋಕಹಿತಂ ಗುರುಕುಲ್, ಬುದ್ಧಮಾರ್ಗ, ಸಿದ್ದಾರ್ಥ ನಗರದಲ್ಲಿ ಬೆಳಗ್ಗೆ 6ರಿಂದ 8.30 ಹಾಗೂ ಸಂಜೆ 6ರಿಂದ 8–30ರವರೆಗೆ ಏರ್ಪಡಿಸಲಾಗಿದೆ. ಮಾಹಿತಿಗೆ 9480476825.

ಚಂದ್ರಶೇಖರಗೆ ಪಿಹೆಚ್.ಡಿ

ಮೈಸೂರು: ಡಾ.ಸಿದ್ದರಾಜು ಅವರ ಮಾರ್ಗದರ್ಶನದಲ್ಲಿ ಕೆ.ಚಂದ್ರಶೇಖರ ಗಾಂಧಿ ಅಧ್ಯಯನ ವಿಷಯದಲ್ಲಿ ಸಂಶೋಧಿಸಿ ಮಂಡಿಸಿದ ಮಹಾಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.



ಕನ್ನಡ ಮಾಧ್ಯಮದಲ್ಲಿ ಓದಿದವರಿಗೆ ಉದ್ಯೋಗ ಖಾತರಿ ನೀಡಿ

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕಿ ಪ್ರೊ.ಲೋಲಾಕ್ಷಿ ಸರ್ಕಾರಕ್ಕೆ ಆಗ್ರಹ

ಮೈಸೂರು,ನ.28(ಎಸ್‌ಪಿಎನ್)– ನಮ್ಮ ಭಾಷೆ (ಕನ್ನಡ) ಜನಸಾಮಾನ್ಯರ ಭಾಷೆಯಾಗಿ ಉಳಿಯಬೇಕಾದರೆ, ಅದು ಅನ್ನದ ಭಾಷೆಯಾಗಿ ಬದಲಾಯಿಸಲು ರಾಜ್ಯ ಸರ್ಕಾರ ಚಿಂತಿಸಬೇಕು ಎಂದು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕಿ ಪ್ರೊಎನ್.ಕೆ.ಲೋಲಾಕ್ಷಿ ಅಭಿಪ್ರಾಯಪಟ್ಟರು.

ಮೈಸೂರು ವಿಶ್ವವಿದ್ಯಾನಿಲಯ ಸಂಜೆ ಕಾಲೇಜು ಆವರಣದಲ್ಲಿ ನಡೆದ ಸುವರ್ಣ ಕರ್ನಾಟಕ 50 ಮತ್ತು 68ನೇ ಕನ್ನಡ ರಾಜ್ಯೋತ್ಸವದಲ್ಲಿ ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಕನ್ನಡ ಭಾಷೆ ಅನ್ನದ ಭಾಷೆಯಾಗಿ ಉಳಿದಿಲ್ಲ ಎಂಬ ಭಾವನೆ ಯುವಕರಲ್ಲಿ ಮೂಡುತ್ತಿದೆ. ಹಾಗಾಗಿ ರಾಜ್ಯ ಸರ್ಕಾರ ಮಧ್ಯ ಪ್ರವೇಶಿಸಿ ಕನ್ನಡ ಅನ್ನದ ಭಾಷೆ ಎಂದು ಯುವಕರಲ್ಲಿ ಭಾವನೆ ಮೂಡುವಂತೆ ಮಾಡುವುದು ಸರ್ಕಾರದ ಕೆಲಸ. ಈ ನಿಟ್ಟಿನಲ್ಲಿ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದವರಿಗೆ ಉದ್ಯೋಗದಲ್ಲಿ ಶೇ.25ರಷ್ಟು ಮೀಸಲಾತಿ ಜಾರಿಗೆ ನಿಟ್ಟಿನಲ್ಲಿ ಪ್ರಯತ್ನವಾಗಬೇಕು ಎಂದು ಆಗ್ರಹಿಸಿದರು.



ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್ ಮಾತನಾಡಿ, 68ನೇ ರಾಜ್ಯೋತ್ಸವ ಸಂಭ್ರಮ ಹಾಗೂ 'ಕರ್ನಾಟಕ' ಎಂಬ ಹೆಸರು ನಾಮಕರಣ ಮಾಡಿ, 50 ವರ್ಷ ಪೂರೈಸಿರುವ ಸಂಭ್ರಮದಲ್ಲಿದ್ದೇವೆ. ಆದರೂ ನಮ್ಮ ನೆಲ–ಜಲ ವಿಚಾರವಾಗಿ ಇನ್ನೂ ನೆರೆ ಹೊರೆಯವರಿಂದ ಸಾಕಷ್ಟು ಕಷ್ಟ ಅನುಭವಿಸುತ್ತಿದ್ದೇವೆ ಎಂದು ತಮ್ಮ ಬೇಸರ ಹೊರಹಾಕಿದರು.

ಅಲ್ಲದೆ, ಕಾವೇರಿ ನದಿ ನೀರು ಹಂಚಿಕೆಯಲ್ಲಿ ಕೇಂದ್ರ ಸರ್ಕಾರ, ತಮಿಳುನಾಡು ಹಾಗೂ ಕರ್ನಾಟಕ ರಾಜ್ಯದ ಜನಪ್ರತಿನಿಧಿಗಳು ಈ ಸಮಸ್ಯೆ ಬಗೆಹರಿಸಲು ಮುಕ್ತ ಮನಸ್ಸು ಹೊಂದಿಲ್ಲ. ಕನಿಷ್ಠ ಕೇಂದ್ರ ಸರ್ಕಾರವಾದರೂ ಈ ಸಮಸ್ಯೆಗೆ ನಿರ್ದಿಷ್ಟ ಸಮಯ ಮೀಸಲಿಟ್ಟು, ಮಾತುಕತೆ ಮೂಲಕವಾದರೂ ಸರಿಯೇ ಅಥವಾ ಕಾನೂನಿನ ಮೂಲಕವಾದರೂ ಈ ಸಮಸ್ಯೆ ಪರಿಹರಿಸಲು ಮುಂದಾಗುತ್ತಿಲ್ಲ. ಹಾಗಾಗಿ ಕಾಲೇಜು ಯುವಕರು ಇಂತಹ ಬಿಕ್ಕಟ್ಟಿನ ಬಗ್ಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ಗಮನ ಸೆಳೆಯಲು ಮುಂದಾಗಬೇಕು ಎಂದು ಮನವಿ ಮಾಡಿದರು. ಅತೀ ಹೆಚ್ಚು ಅಂಕಗಳಿಸಿದ ಕನ್ನಡ ಸ್ನಾತಕೋತ್ತರ ಪದವಿಯಲ್ಲಿ ಆರ್.ಪಿ.ಪ್ರಜ್ವಲ್, ಎ.ಎಸ್.ಶರತ್ ಕುಮಾರ್, ಪಿ.ಸುರೇಶ್, ವೈ.ಯೋಗೇಶ್ ಹಾಗೂ ಎಂ.ಕಾಂನ ಎಂ.ಎಸ್.ಸುನೀಲ್ ಕುಮಾರ್, ಎಸ್.ಅನುಷಾ, ಇತಿಹಾಸ ಎಂ.ಎ ಪದವಿಯಲ್ಲಿ ಜಿ.ಪಿ.ಸುನೀಲ್ ಕುಮಾರ್, ಎಸ್.ಡಿ.ಧನಲಕ್ಷ್ಮಿ ಹಾಗೂ ಕುಸ್ತಿಪಟು ಶಿವರಾಜ್ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ವಿವಿ ಸಂಜೆ ಕಾಲೇಜು ಪ್ರಾಂಶುಪಾಲ ಪ್ರೊ.ಎಸ್.ಮಹಾದೇವಮೂರ್ತಿ, ಕನ್ನಡ ವಿಭಾಗದ ಪ್ರಾಧ್ಯಾಪಕಿ ಪ್ರೊ.ಕೆ.ಸೌಭಾಗ್ಯವತಿ ಸೇರಿದಂತೆ ಇತರರಿದ್ದರು.

ನಕ್ಕರೆ ಅದೇ ಸ್ವರ್ಗ

ಆತ : "ಐ ಲವ್ ಟೂ ಮಚ್"
ಆಕೆ : "ಐ ಲವ್ ಟೂ. ಆದರೆ ವರದಕ್ಷಿಣೆ ವಿಷಯ ಎತ್ತಬಾರದು ಆಯ್ತಾ?"
ಆತ : "ಅಯ್ಯೋ? ವರದಕ್ಷಿಣೆ ವಿಷಯ ಅಲ್ಲ,
ಒಟ್ಟಾರೆ ಮದ್ವೆ ವಿಷಯಾನೇ ಎತ್ತೋಲ್ಲ ಬಿಡು!"

ಮೈಸೂರು ಮಿತ್ರ

ಬುಧವಾರ, 29 ನವೆಂಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಒಳ್ಳೆಯ ಸಮಾಜ ಕಾಣಬೇಕಾದರೆ ಪ್ರತಿಯೊಬ್ಬ ವ್ಯಕ್ತಿಯೂ ಮೊದಲಿಗೆ ಅನ್ಯರ ಒಳಿತಿಗಾಗಿ. ಆ ಬಳಿಕ ತನ್ನ ಒಳಿತಿಗಾಗಿ ದುಡಿಯುವ ಮನೋಭಾವವನ್ನು ರೂಢಿಸಿಕೊಳ್ಳುವುದು ಅಗತ್ಯ. – ಡಾ. ರಾಧಾಕೃಷ್ಣನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಪಕ್ಷ ಪಾಂಡವರಲ್ಲಿ, ಊಟ ಕೌರವರಲ್ಲಿ

ನಿಮ್ಮ ಪತ್ರಗಳು

ಶೀಘ್ರ ನಂದಿಗೆ ಹೋಗುವ ರಸ್ತೆ ಪೂರ್ಣಗೊಳಿಸಿ

ಮಾನ್ಯರೆ,



ಚಾಮುಂಡಿಬೆಟ್ಟದಲ್ಲಿ ನಂದಿಗೆ ಹೋಗುವ ರಸ್ತೆ, ಈಗ್ಗೆ 2 ವರ್ಷಗಳ ಹಿಂದೆ ಬಿದ್ದ ಮಳೆಯಿಂದ ಕುಸಿದುಬಿದ್ದಿತ್ತು. ಆದ ಕಾರಣ, ಆ ರಸ್ತೆಯನ್ನು ಎರಡೂ ಕಡೆಯಿಂದ ಬಂದ್ ಮಾಡಿದರು. ನಂತರದಲ್ಲಿ ಸಂಬಂಧಪಟ್ಟ ಇಲಾಖೆಯಿಂದ ರಸ್ತೆ ರಿಪೇರಿ ಮಾಡಲು ಗುತ್ತಿಗೆದಾರರೊಬ್ಬರಿಗೆ ಗುತ್ತಿಗೆ ನೀಡಲಾಯಿತು. ಆದರೆ ಗುತ್ತಿಗೆದಾರ ಕುಂಟುತ್ತಾ, ತೆವಳುತ್ತಾ ಕೆಲಸ ಮಾಡುತ್ತಿರುವುದರಿಂದ ಎರಡು ವರ್ಷವಾದರೂ ಕೆಲಸ ಮುಗಿಸಿ ರಸ್ತೆಯನ್ನು ಸಂಚಾರಕ್ಕೆ ತೆರೆದಿಲ್ಲ. ಈಗಲೂ ನಂದಿಯನ್ನು ನೋಡಲು ಬರುವವರು ತಾವರೆಕಟ್ಟೆಯಿಂದ ಬರಬೇಕು. ಅಥವಾ ಉತ್ತನಹಳ್ಳಿ ರಸ್ತೆ ಕಡೆಯಿಂದ ಬರಬೇಕಾಗಿದೆ. ಆದರೆ ಮೇಲ್ಕಂಡ ಎರಡೂ ರಸ್ತೆಗಳು ಏಕಮುಖ ಸಂಚಾರ ಹೊಂದಿರುವುದರಿಂದ ಮತ್ತು ರಸ್ತೆ ಕಡಿದಾಗಿರುವುದರಿಂದ ವಾಹನ ಚಲಾಯಿಸಲು ಕಷ್ಟವಾಗುತ್ತಿದೆ.

ಚಾಮುಂಡಿಬೆಟ್ಟದ ನಂದಿ ವಿಶ್ವಪ್ರಸಿದ್ಧವಾದ ತಾಣವಾಗಿದ್ದು, ದೇಶ ವಿದೇಶಗಳಿಂದ ಪ್ರವಾಸಿಗರು ಆಗಮಿಸಿ, ಮೈಸೂರು ಮಹಾರಾಜರಿಂದ ಸ್ಥಾಪಿಸಲ್ಪಟ್ಟ ಏಕಶಿಲಾ ವಿಗ್ರಹವನ್ನು ಕಣ್ತುಂಬಿಕೊಳ್ಳುತ್ತಾರೆ. ಹಾಗೆಯೇ ಭಕ್ತಿಯಿಂದ ಪೂಜಿಸುತ್ತಾರೆ. ಸ್ಥಳೀಯ ಮತ್ತು ಹೊರ ರಾಜ್ಯದ ಪ್ರವಾಸಿಗರು ಇಂದಿಗೂ ನಂದಿಯ ಬಳಿ ಸರಾಗವಾಗಿ ಸಾಗಲು ಸಾಧ್ಯವಾಗಿಲ್ಲ. ಚಾಮುಂಡಿಬೆಟ್ಟಕ್ಕೆ ಬರುವವರು ನಂದಿಯ ದರ್ಶನ ಸಿಗದೆ ನಿರಾಸೆಗೊಂಡು ಹೋಗುತ್ತಿದ್ದಾರೆ. ಆದುದರಿಂದ ಸಂಬಂಧಪಟ್ಟ ಇಲಾಖೆಯವರು, ಗುತ್ತಿಗೆದಾರನ ಮೇಲೆ ಒತ್ತಡ ಹಾಕಿ, ನಿಗದಿತ ಸಮಯದಲ್ಲಿ ಕೆಲಸ ಮುಗಿಸಿ, ಸದರಿ ರಸ್ತೆಯನ್ನು ಸಂಚಾರಕ್ಕೆ ಮುಕ್ತಗೊಳಿಸಬೇಕೆಂದು ಮನವಿ.

–ಬ್ಯಾಂಕ್ ಶಿವಕುಮಾರ್, ಜೆ.ಪಿ.ನಗರ, ಮೈಸೂರು.

ಮಕ್ಕಳ ಮೇಲಿನ ದೌರ್ಜನ್ಯ ತಡೆಗಟ್ಟಿ

ಮಾನ್ಯರೆ,

ಸರ್ಕಾರ ಆರರಿಂದ 14 ವರ್ಷದ ಒಳಗಿನ ಮಕ್ಕಳ ಶಿಕ್ಷಣಕ್ಕಾಗಿ ಕೋಟಿಗಟ್ಟಲೇ ಹಣವನ್ನು ಖರ್ಚು ಮಾಡುತ್ತಿದೆ. ಆದರೆ ಮಕ್ಕಳ ಮೇಲಿನ ದೌರ್ಜನ್ಯ ತಡೆಗಟ್ಟಲು ಸಾಧ್ಯವಾಗುತ್ತಿಲ್ಲ. ಬೆಳಗಾವಿಯಲ್ಲಿ 361 ಹದಿ ಹರೆಯದ ಬಾಲಕಿಯರು ಗರ್ಭಿಣಿ ಆಗಿರುವುದು ದೊಡ್ಡ ದುರಂತ ಹಾಗೂ ಇಡೀ ಸಮಾಜವೇ ತಲೆ ತಗ್ಗಿಸುವಂತಹ ಸಂಗತಿ. ಬೆಳಗಾವಿ ಜಿಲ್ಲೆಯಲ್ಲಿ ಉಸ್ತುವಾರಿ ಸಚಿವರ ತವರಲ್ಲೇ ಈ ಘಟನೆ ನಡೆದಿರುವುದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಇಲಾಖೆಗೆ ಸವಾಲಾಗಿದೆ.

ಮೈಸೂರು ನಗರದಲ್ಲಿ 900 ಹೆಣ್ಣು ಭ್ರೂಣ ಹತ್ಯೆ ನಡೆದಿರುವುದು ಕಳವಳಕಾರಿ ಸಂಗತಿ. 2 ವರ್ಷದಿಂದ ನಿರಂತರವಾಗಿ ಈ ಘಟನೆ ನಡೆದುಕೊಂಡು ಬಂದಿರುವುದು ತುಂಬಾ ಘೋರ. ಮೈಸೂರು, ಮಂಡ್ಯ, ರಾಮನಗರ, ಚಾಮರಾಜನಗರ, ಕೊಡಗು, ಹಾಸನ ಈ ಜಿಲ್ಲೆಗಳನ್ನೇ ಕೇಂದ್ರವಾಗಿಟ್ಟುಕೊಂಡು ದಂಧೆ ನಡೆಸುತ್ತಿದ್ದ 9 ವೈದ್ಯರು ಹಾಗೂ 8 ಮಂದಿ ಸಹಾಯಕರು ಪೊಲೀಸ್ ಬಂಧನಕ್ಕೆ ಒಳಗಾಗಿದ್ದಾರೆ.

ಸಮಾಜದಲ್ಲಿ ಈ ರೀತಿ ಘಟನೆಗಳು ಮೇಲಿಂದ ಮೇಲೆ ಕಂಡು ಬರುತ್ತಿದ್ದರೂ ಕೂಡ ಸಂಬಂಧಿಸಿದ ಇಲಾಖಾ ಅಧಿಕಾರಿಗಳು ಹಾಗೂ ಸಚಿವರು ಇದರ ಬಗ್ಗೆ ಗಮನ ವಹಿಸದೆ ಇರುವುದು ಹಾಗೂ ಜಾಣಕುರುಡು ಮೆರೆಯುತ್ತಿರುವುದು ಸಾಮಾನ್ಯವಾಗಿದೆ. ಇನ್ನಾದರೂ ಸರ್ಕಾರ ಹಾಗೂ ಅಧಿಕಾರಿಗಳು ಇದರ ಬಗ್ಗೆ ಗಮನವಹಿಸಿ ಬಾಲ್ಯ ವಿವಾಹ, ಹದಿಹರೆಯದ ಬಾಲಕಿಯರ ದೌರ್ಜನ್ಯ ಮತ್ತು ಭ್ರೂಣ ಹತ್ಯೆ ತಡೆಯುವುದರ ಕುರಿತು ಸೂಕ್ತ ಕ್ರಮ ಕೈಗೊಳ್ಳಬೇಕು.

–ಮಹಾಂತೇಶ್ ಬಯ್ಯಾಪುರ, ಪಾವಟೆ ನಗರ, ಧಾರವಾಡ

ಚಾ.ನಗರ ಹೆಚ್ಚುವರಿ ಜಿಲ್ಲಾಧಿಕಾರಿ ಮಂತ್ರ ಮಾಂಗಲ್ಯ ಮದುವೆ ಮಾದರಿ ನಡೆ

ಮಾನ್ಯರೆ.

ಇತ್ತೀಚಿನ ದಿನಗಳಲ್ಲಿ ವೈಭವದ, ಅದ್ದೂರಿತನ ಹಾಗೂ ಶ್ರೀಮಂತಿಕೆ ಮದುವೆಗಳು ಸರ್ವೆಸಾಮಾನ್ಯ. ಈ ವೈಭವದ ಮದುವೆಗಳಿಂದ ಕೆಲವು ಕುಟುಂಬಗಳು ಸಾಲದ ಸುಳಿಗೆ ಸಿಲುಕಿ ಸಾಲಗಾರರಾಗಿವೆ. ಇಂತಹ ಸಂದರ್ಭದಲ್ಲಿ ಚಾಮರಾಜನಗರದ ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ ಹಾಗೂ ಕಾನೂನು ವ್ಯಾಸಂಗ ಮಾಡುತ್ತಿರುವ ಎಂ.ಆರ್.ಹರೀಶ್ ಕುಮಾರ್ ಅವರು ಬುದ್ಧ, ಬಸವ, ಅಂಬೇಡ್ಕರ್, ಕುವೆಂಪು ಭಾವಚಿತ್ರಗಳಿಗೆ ಪುಷ್ಪಾರ್ಚನೆ ಮಾಡಿ ಅನಗತ್ಯ ವೆಚ್ಚಗಳಿಗೆ ಕಡಿವಾಣ ಹಾಕಿ ಸರಳವಾಗಿ ಮಂತ್ರ ಮಾಂಗಲ್ಯದ ಮೂಲಕ ಮದುವೆ ಮಾಡಿಕೊಂಡು ಸಮಾಜಕ್ಕೆ ಮಾದರಿಯಾಗಿದ್ದಾರೆ.



–ಪಿ.ಸಿ.ಕಂಗಾಣಿಸೋಮು, ಕ್ಯಾತಮಾರನಹಳ್ಳಿ, ಮೈಸೂರು.

ಕಾಂತರಾಜು ವರದಿ ಕೂಲಂಕುಷವಾಗಿ ಅಧ್ಯಯನ ಮಾಡಲು ಸಮಿತಿ ರಚಿಸಿ

ಮಾನ್ಯರೆ,

2015ರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ನೇಮಿಸಿದ್ದ ಎಚ್. ಕಾಂತರಾಜು ನೇತೃತ್ವದ ರಾಜ್ಯ ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ವರದಿ (ಜಾತಿ ಗಣತಿ ಹಾಗೂ ಸಾಮಾಜಿಕ–ಆರ್ಥಿಕ ಗಣತಿ) ಸ್ವೀಕಾರ–ತಿರಸ್ಕಾರ ವಿಚಾರ ಈಗ ಚರ್ಚೆಯ ವಸ್ತುವಾಗಿದೆ. ಒಂದಷ್ಟು ಸಮುದಾಯಗಳು ಪರವಾಗಿ, ಇನ್ನೊಂದಿಷ್ಟು ಸಮುದಾಯಗಳು ವಿರುದ್ಧವಾಗಿ ಟೀಕೆ–ಟಿಪ್ಪಣಿಗಳನ್ನು ಮಾಡುತ್ತಿವೆ. 2015ರಲ್ಲಿ ಅಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಸರ್ಕಾರ ರಚಿಸಿದ್ದ ಆಯೋಗ ಜಾತಿ ಗಣತಿ ಹಾಗೂ ಸಾಮಾಜಿಕ–ಆರ್ಥಿಕ ಗಣತಿ ನಡೆಸಲು 160 ಕೋಟಿ ರೂ.ಗಳನ್ನು ಖರ್ಚು ಮಾಡಿದೆ. ಆಯೋಗ ರಚಿಸಿ ಎಂಟು ವರ್ಷಗಳಾಗಿದೆ. ಅಂದಿನ ಅಂಕಿ–ಅಂಶಕ್ಕೂ ಇಂದಿನ ವಾಸ್ತವಕ್ಕೂ ತುಂಬಾ ವ್ಯತ್ಯಾಸಗಳಿವೆ. ಈ ನಿಟ್ಟಿನಲ್ಲಿ ಒಂದೊಮ್ಮೆ ರಾಜ್ಯ ಸರ್ಕಾರ ವರದಿಯನ್ನು ಸ್ವೀಕರಿಸಿದರೆ, ವರದಿಯನ್ನು ಕೂಲಂಕುಷವಾಗಿ ಅಧ್ಯಯನ ಮಾಡಲು ಸಮಿತಿಯೊಂದನ್ನು ರಚಿಸಬಹುದು. ಸಮಿತಿ ನೀಡುವ ವರದಿ ಆಧಾರದ ಮೇಲೆ ಅಂತಿಮವಾಗಿ ಜಾತಿ ಗಣತಿಯನ್ನು ಜಾರಿ ಮಾಡುವ, ಅಥವಾ ತಿರಸ್ಕಾರ ಮಾಡುವ ನಿರ್ಧಾರವನ್ನು ರಾಜ್ಯ ಸರ್ಕಾರ ಮಾಡಬಹುದು. ಪ್ರತ್ಯೇಕ ಲಿಂಗಾಯತ ಧರ್ಮದ ವಿಷಯದಲ್ಲಿ ಹಿಂದಿನ ಕಾಂಗ್ರೆಸ್ ಸರ್ಕಾರ ಚುನಾವಣೆ ಸಂದರ್ಭದಲ್ಲಿ ಕೈಸುಟ್ಟು ಕೊಂಡಿದೆ. ಇನ್ನೇನು ಲೋಕಸಭಾ ಚುನಾವಣೆ ಎದುರಾಗಲಿದ್ದು, ರಾಜ್ಯ ಸರ್ಕಾರ ಎಚ್ಚರಿಕೆಯ ಹೆಜ್ಜೆ ಇಡಬೇಕು.

–ಪ್ರಸಾದ್ ಜಿ.ಎಂ, ಮೈಸೂರು

ಸಂಸ್ಕೃತಿ ಚಿಂತನಾ



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು

ರಾಗಭಾರತೀ: ಒಂದು ಅವಲೋಕನ

ಶತಾವಧಾನಿ ಡಾ. ರಾ. ಗಣೇಶ್ ನಮ್ಮ ಕಾಲದ ವಿಸ್ಮಯ. ಸಾಹಿತ್ಯ ಲೋಕದಲ್ಲಿ ಅವರಷ್ಟು ಸಾಧನೆ ಮಾಡಿದ ಇನ್ನೊಬ್ಬರನ್ನು ನಾನು ಕಂಡಿಲ್ಲ. ಅವರ ಅಧ್ಯಯನ ಗಗನದಷ್ಟು ವಿಶಾಲ. ಅವರು ಮಾಡುವ ವಿಮರ್ಶೆ ಸಮುದ್ರದಷ್ಟು ಗಂಭೀರ. ಅವರ ಸಾಹಿತ್ಯ ಸೃಷ್ಟಿ ಹಿಮಾಲಯದಷ್ಟು ಉನ್ನತ. ಕವಿಗಳಲ್ಲಿ, ವಿದ್ವಾಂಸರಲ್ಲಿ ಸಾಮಾನ್ಯವಾಗಿ ಕಾಣಿಸುವ ಮಾತ್ಸರ್ಯ ಅವರ ಹೃದಯದಲ್ಲಿ ಅಣುವಿನಷ್ಟೂ ಇಲ್ಲ. ಗುಣಾನ್ವೇಷಿಗಳಾಗಿ ಅವರು ಎಲ್ಲರನ್ನೂ ಕಾಣುತ್ತಾರೆ. ದೋಷವನ್ನು ಕಂಡಾಗ ಮಾತ್ರ ಎತ್ತಿ ತೋರಿಸುತ್ತಾರೆ. ಸಾಹಿತ್ಯದ ನಾನಾ ಪ್ರಕಾರಗಳಲ್ಲಿ ಅವರ ಕೊಡುಗೆ ಆಶ್ಚರ್ಯಕರವೂ ಚಿರಸ್ಥಾಯಿಯೂ ಆಗಿದೆ. ಅಷ್ಟಾವಧಾನಗಳಲ್ಲಿ ಗಣೇಶರ ಪ್ರತ್ಯುತ್ಪನ್ನಮತಿತ್ವ, ಹಾಸ್ಯ ಪ್ರಜ್ಞೆ, ಅಪ್ರತಿಮಧಾರಣಾ ಶಕ್ತಿ ಶ್ರೋತೃಗಳಲ್ಲಿ ಬೆರಗನ್ನು ಮೂಡಿಸಿ ನಗುವಿನ ಹೊನಲನ್ನು ಉಕ್ಕಿಸುತ್ತದೆ. ಅವರು ಹಲವು ಶತವಾಧಾನಗಳನ್ನು ಮಾಡಿದ್ದಾರೆ. ಅವುಗಳನ್ನು ವೀಕ್ಷಿಸುವ ಅವಕಾಶ ನನಗೆ ದೊರಕಿಲ್ಲ.

ಅನೇಕರು ಅಷ್ಟಾವಧಾನವಷ್ಟೇ ಡಾ. ಗಣೇಶರ ವಿಶಿಷ್ಟತೆ ಎಂದುಕೊಂಡಿದ್ದಾರೆ. ಅವರ ಸಮಗ್ರ ವ್ಯಕ್ತಿತ್ವದ ಪರಿಚಯ ಎಷ್ಟೋ ಜನರಿಗಿಲ್ಲ. ಆ ಪರಿಚಯವನ್ನು ಮಾಡಿಸಲು ಶ್ರೀ ಬಿ.ಎನ್. ಶಶಿಕಿರಣ್ ಎಂಬ ತರುಣ ವಿದ್ವಾಂಸರು **ರಾಗಭಾರತೀ** ಎಂಬ ಗ್ರಂಥವನ್ನು ಹೊರತಂದಿದ್ದಾರೆ. ಇದು ಮಹತ್ತ್ವವನ್ನೂ ಬೃಹತ್ತ್ವವನ್ನೂ ಹೊಂದಿದೆ. (ವಿಶಾಲಾಕೃತಿಯ ಸುಮಾರು ಒಂದು ಸಾವಿರ ಪುಟಗಳು). ಇದರ ಉಪಶೀರ್ಷಿಕೆ 'ಶತಾವಧಾನಿ ಡಾ. ಆರ್. ಗಣೇಶ್ ಅವರ ಪ್ರಾತಿನಿಧಿಕ ಕನ್ನಡ ಬರಹಗಳ ಪರಿಚಯ'. ಬೆಂಗಳೂರಿನ ಅಯೋಧ್ಯಾ ಫೌಂಡೇಶನ್ ಈ ಗ್ರಂಥವನ್ನು ಬೆಳಕಿಗೆ ತಂದಿದ್ದಾರೆ. ಇದರಲ್ಲಿ ಕವಿತೆ, ಕಥೆ, ಕಾದಂಬರಿ, ಲಲಿತ ಪ್ರಬಂಧ, ವ್ಯಕ್ತಿ ಚಿತ್ರ, ಕಲೆ, ಕನ್ನಡ ಸಾಹಿತ್ಯ, ಅವಧಾನ, ಸಂಸ್ಕೃತ ಸಾಹಿತ್ಯ, ಕಾವ್ಯ ಮೀಮಾಂಸೆ, ಛಂದಃಶಾಸ್ತ್ರ, ಅಧ್ಯಾತ್ಮ, ಸಂಸ್ಕೃತಿ, ಮೌಲ್ಯ ಮೀಮಾಂಸೆ, ಪುರಾಣ, ಇತಿಹಾಸ ಎಂಬ ಅಧ್ಯಾಯಗಳಿವೆ. ಒಂದೊಂದೂ ಒಂದೊಂದು ಗಣಿ. ಕವಿತೆಯ ಅಧ್ಯಾಯದಲ್ಲಿರುವ ತ್ರಿಪುಟೀ ಎಂಬ ಕವಿತೆಯನ್ನು ನೋಡೋಣ.


ದೇಶ ಕಾಲಗಳಿಗೆ ದಾಂಪತ್ಯ ಸಂದಿರಲು
ಅಲ್ಲಿಗಿಲ್ಲಿಗೆಲ್ಲಿಗಲ್ಲಿಗಿಲ್ಲಿ,
ನಿನ್ನೆಗಿಂದು ನಾಳೆ, ಇಂದು ನಾಳೆಗೆ ನಿನ್ನೆ
ಸೋಡ ಚೀಟಿ ಕೊಟ್ಟ ಮೇಲೆ ಸೊನ್ನೆ.
ದ್ರವ್ಯಶಕ್ತಿಗಳಿಗೆ ಸಂದಿರ್ಪ ಸಂಬಂಧ
ಕಣತರಂಗಗಳಿಗೆ ನಂಟು–ಗಂಟು
ಕರಗಿ ನಿಂತ ಶಕ್ತಿ, ಸೆಟೆದು ಸುಳಿವ ದ್ರವ್ಯ
ಸೇರೆ ಸೂರೆಯಾಯ್ತು ಸಕಲ ಸೃಷ್ಟಿ.
ವ್ಯಕ್ತಿ–ವಸ್ತುಗಳಿಗೆ ವಾಂಛೆಯೊಂದೇ ಕೂಸು
ಮೂರು ಜನರ ಮನೆಗೆ ನೂರು ದೂರು
ಮುಪ್ಪು ಒಂದು ಮುಗಿಯಲೀ ಮುಪ್ಪುರಿಯ ತಪ್ಪು
ಮಾತು ಸೋತು ಸತ್ತು ಬದುಕು ಬೆಳಕು.

ಇಲ್ಲಿ ಆಧ್ಯಾತ್ಮಿಕ ಹಿನ್ನೆಲೆಯ ಶುದ್ಧ ಕನ್ನಡ ಪದಗಳಿವೆ. ಈ ಕವಿಯೇ ಆಧುನಿಕ ಆಂಗ್ಲ ಮಿಶ್ರಿತ ಕನ್ನಡದಲ್ಲಿ ಕವಿತೆಯನ್ನು ಬರೆಯುತ್ತಾರೆಂಬುದು ಸೋಜಿಗ. ಅವರ ಧೂಮದೂತದ ಒಂದು ಪದ್ಯ–

ಚಿತ್ರಮಂದಿರಗಳಗ್ರಭಾಗದಲಿ ಸರದಿ ಸಾಲು ನಿಂತು
ಕಟೌಟ್‌ಕಾಂತೆಯರ, ಸಿಟೌಟ್‌ಕಾಂತೆಯರ
ನಟತ್ಕಟಿಯನೆಂತು
ನೋಡಿ ನಡೆವೆ ನೀನಂತೆ ಸಾಂಗಷಾಪಿಂಗಿಗಾಗಿ
ತೂಗಿ ತೊನೆವ ಯುವ ಯುಗಲಗಳಿಗೆ
ನರ್ಮನಯನಾಂಜನಿಸು ಸಹಾಗಿ

ಹೀಗೆ ನಮ್ಮ ದೈನಿಕ ಭಾಷೆಯಲ್ಲಿ ಬರೆಯುವ ಡಾ. ಗಣೇಶ್ ಕುವೆಂಪು ಅವರ ಶೈಲಿಯಲ್ಲೂ ಬರೆಯಬಲ್ಲರೆಂಬುದಕ್ಕೆ ಭೀಮ–ದುರ್ಯೋಧನರ ಗದಾಯುದ್ಧ – ಮಹೋಪಮೆ ನಿದರ್ಶನವಾಗಿದೆ.

ಅದು ಮೇದಿನಿಯ ಪೂರ್ಣತಾರುಣ್ಯ ಕಾಲಮೆನೆ
ನದ–ನದೀ–ವನ–ವಿಪಿನ–ವಿದ್ಯಾಸಮೆಲ್ಲಮುಂ
ಗಿರಿ–ದರೀ–ವಿಸ್ತಾರಸಂನ್ಯಾಸಮೆಲ್ಲಮುಂ



ಬಹುನೂತ್ನವಿಧಿಯಿಂದೆ, ಮಹಿತರುದ್ರತೆಯಿಂದೆ
ಮೆರೆವ, ಮಾರ್ಮಲೆವ ದೇಶದ ವಾರ್ತೆ ಕಾಲದಾ
ವೈಚಿತ್ರ್ಯದೈಭವದೆ ದುರ್ದಮ್ಯಬಾರ್ಬರ್ಯ
ರೋಮಹರ್ಷಕ–ಭಾವಮರ್ಷಕ ಮಹಿಷ್ಮತೆಯ
ನಿಷ್ಠುರತೆಯಿಂ ಮೆರೆಯೆ;

ಇತ್ಯಾದಿ ಅವಧಾನದ ಪದ್ಯಗಳಲ್ಲಿ ಡಾ. ಗಣೇಶರು ಛಂದೋಬದ್ಧವಾದ ಪದ್ಯಗಳನ್ನು ದ್ವಿತೀಯಾಕ್ಷರಪ್ರಾಸವನ್ನಿಟ್ಟು ಪಂಪರನ್ನಾದಿಗಳ ಶೈಲಿಯಲ್ಲಿ ರಚಿಸುವುದನ್ನೂ ಸಹೃದಯರು ಕಂಡಿದ್ದಾರೆ. ರಥೋದ್ಧತಾಛಂದಸ್ಸಿನಲ್ಲಿ ಅವರು ರಚಿಸಿದ ಪದ್ಯವೊಂದನ್ನು ನೋಡಿರಿ–

ಬಾಣಪಂಚಕಮದಿರ್ಕೆ ಸುಗ್ಗಿಯೊಳ್
ಜಾಣನೀ ಸ್ಮರನಿದೀಗಳಾನುವಂ ।
ಶಾಣದೊಳ್ ಮಸೆದ ಕತ್ತಿಯಂತೆ ಸ–
ಪ್ರಾಣಮೆಂದೆಸೆವ ತಾಳೆಯಿರ್ಪುದಯ್॥

ಡಾ. ಗಣೇಶರು ಸಾಹಿತ್ಯ ಕೋವಿದರು ಮಾತ್ರವಲ್ಲ, ಸಂಗೀತ ಶಾಸ್ತ್ರ ವಿಚಕ್ಷಣರೂ ಆಗಿರುವುದರಿಂದ ಯಕ್ಷಗಾನ ಪ್ರಸಂಗಗಳನ್ನೂ ರಚಿಸಿದ್ದಾರೆ. ಅಲ್ಲಿ ನಾನಾ ರಾಗಗಳಿಂದ ರಸಿಕರನ್ನು ರಂಜಿಸುವ ರಸಮಯ ಕೀರ್ತನೆಗಳು ಅತ್ಯಾಕರ್ಷಕವಾಗಿವೆ. ಅವುಗಳ ತಾಳಗಳನ್ನೂ ರಾಗಗಳನ್ನೂ ಅವರು ನಿರ್ದೇಶಿರುವುದು ಕಲಾವಿದರಿಗೆ ಅನುಕೂಲವಾಗಿದೆಯೆಂದು ಬೇರೆ ಹೇಳಬೇಕಾಗಿಲ್ಲ. ಸಂಗೀತದ ಕೃತಿಗಳನ್ನೇ ಡಾ. ಗಣೇಶರು ಬರೆಯುವಾಗಲಂತೂ ಅವರ ವೈದುಷ್ಯ ಬಹುಮುಖವಾಗಿ ಅಭಿವ್ಯಕ್ತವಾಗಿದೆ. ಸಂಗೀತ ಸಾಹಿತ್ಯ ರಸಾಭಿಜ್ಞರು ಅವುಗಳನ್ನು ಕುರಿತು ಹೆಚ್ಚು ಹೇಳಬಲ್ಲರು.

ಕನ್ನಡ ಗದ್ಯವನ್ನೂ ಡಾ. ಗಣೇಶರು ವಿಶಿಷ್ಟ ಶೈಲಿಯಲ್ಲಿ ಬರೆಯುತ್ತಾರೆ. ನಾಲ್ಕು ಸಾಲುಗಳನ್ನು ಓದುತ್ತಿರುವಾಗಲೇ ಇದು ಶತಾವಧಾನಿಗಳ ಗದ್ಯ ಎಂದು ಯಾರಾದರೂ ಹೇಳಿ ಬಿಡಬಹುದು. ಪ್ರಸ್ತುತ ಪುಸ್ತಕದಲ್ಲಿರುವ ಶ್ಯಾಮಲಶಾರದೆಯ ನಾಲ್ಕು ವಾಕ್ಯಗಳನ್ನು ಓದೋಣ :

"ವಾತಾಪಿಪುರದ ಅರಮನೆಯ ಏಕಾಂತ ಮಂದಿರದ ಮೂಲೆಯಲ್ಲಿ ಸಮ್ರಾಜ್ಞಿ ವಿಜಯಾ ಭಟ್ಟಾರಿಕೆ ಆಲೋಚಿಸುತ್ತ ಕುಳಿತಿದ್ದಳು. ಮಧ್ಯ ವಯಸ್ಸಿನ ಅವಳ ಮುಖದ ಮೇಲೆ ಆ ಹೊತ್ತಿನ ಚಿಂತೆಯ ಗೆರೆಗಳಲ್ಲದೆ ಕಾಲನು ಮೂಡಿಸಿದ ಶಾಶ್ವತವಾದ ಗೆರೆಗಳೂ ಬೆರೆತು ಹೋಗಿದ್ದವು. ವಾತಾಯನದ ಮೂಲಕ ಅಂತಃಪುರದೊಳಗೆ ಸೋರುತ್ತಿದ್ದ ಅಪರಾಹ್ನದ ಸೂರ್ಯಕಾಂತಿ ಅವಳ ಒಡಲನ್ನು ಬೆಳಗಿತ್ತು. ಕೈಯಲ್ಲಿದ್ದ ಕಾಳಿದಾಸನ ರಘುವಂಶ ಮಹಾಕಾವ್ಯ. ಅವಳ ಆಲೋಚನೆಯ ಶತತಂತ್ರೀ ವೀಣೆಯನ್ನು ಮೀಟುತ್ತಲೇ ಇತ್ತು. ಆಗ ಅವಳು ಓದುತ್ತಿದ್ದುದು ಹದಿನಾರನೆಯ ಸರ್ಗ. ಶ್ರೀರಾಮನ ಮಗ ಕುಶನಿಗೆ ಇರುಳಿನಲ್ಲಿ ಕಾಣಿಸಿಕೊಂಡ ಅಯೋಧ್ಯಾ ನಗರದ ಅಧಿದೇವತೆ ಅವನಿಗೆ ತನ್ನ ದೀನಾವಸ್ಥೆಯನ್ನು ಬಣ್ಣಿಸುತ್ತಿದ್ದ ಹೃದಯವಿದ್ರಾವಕವಾದ ಕಥಾಭಾಗ."

ಇಂತಹ ಸುಭಗಮೃದುಲಲಲಿತ ಕನ್ನಡವನ್ನು ಬರೆಯಬಲ್ಲವರೆಷ್ಟು ಮಂದಿ ಇಂದು ಇದ್ದಾರೆ?

ಡಾ. ರಾ. ಗಣೇಶರು ಬರೆದಿರುವ ಬೃಹತ್ಕಾದಂಬರಿ 'ಮಣ್ಣಿನ ಕನಸು', ಇದು ಪ್ರತಿಜ್ಞಾಯೌಗಂಧರಾಯಣ, ಸ್ವಪ್ನವಾಸವದತ್ತ, ಮೃಚ್ಛಕಟಿಕ ಎಂಬ ಸಂಸ್ಕೃತ ನಾಟಕಗಳ ಕಥೆಗಳನ್ನಾಧರಿಸಿದ ಮನೋಜ್ಞ ಕಥಾನಕ. ಇಲ್ಲಿರುವ ಹಲವಾರು ಪಾತ್ರಗಳನ್ನೂ, ಹತ್ತಾರು ಸಂದರ್ಭಗಳನ್ನೂ ನುಡಿಗಡಣದ ಸೊಗಡನ್ನೂ ವರ್ಣಿಸುವುದಕ್ಕೆ ಬೇರೊಂದು ಲೇಖನವೇ ಬೇಕು. ಇಲ್ಲಿ ನಾನದನ್ನು ವಿವರಿಸಲು ಯತ್ನಿಸುವುದಿಲ್ಲ. ಈ ಬೃಹತ್ಕಾದಂಬರಿಯ ಒಂದು ಅಧ್ಯಾಯ ಇಲ್ಲಿದೆ.

ಲಲಿತ ಪ್ರಬಂಧಗಳೆಂಬ ವಿಭಾಗ ಸಾಹಿತ್ಯಲಾಲಿತ್ಯಕ್ಕೆ ಉತ್ತಮೋತ್ತಮ ಉದಾಹರಣೆಯಾಗಿದೆ. ಸೀರೆ ಪಂಚೆಗಳ ಸ್ವಾರಸ್ಯ ಎಂಬ ಪ್ರಬಂಧದಲ್ಲಿ ಡಾ. ಗಣೇಶ್ ತಿಳಿಸುವ ಸೂಕ್ಷ್ಮಾಂಶಗಳು ಗೃಹಸ್ಥರಾದ ನಮಗೇ ತಿಳಿಯವು. 'ರವಿ ಕಾಣದುದನ್ನೂ ಕವಿ ಕಂಡ' ಎಂಬ ಗಾದೆಯನ್ನಿಲ್ಲಿ ನೆನಪಿಸಿಕೊಳ್ಳಬೇಕು. ಉಪ್ಪಿಟ್ಟಿನ ಬಗೆಗೂ ಅವರು ರಸಮಯ ಪ್ರಬಂಧವನ್ನು ರಚಿಸಿದ್ದಾರೆ. ಅದು ಯಾರಿಗೂ ಇಷ್ಟವಾಗದ ತಿನಿಸು ಎಂದು ನಾನು ತಿಳಿದಿದ್ದೆ. ಆದರೆ ಈ ಪ್ರಬಂಧವನ್ನು ಓದಿದ ಮೇಲೆ ನನ್ನ ತಪ್ಪನ್ನು ತಿದ್ದಿಕೊಂಡಿದ್ದೇನೆ. ವ್ಯಕ್ತಿಚಿತ್ರ ಎಂಬ ಭಾಗದಲ್ಲಿ ಶೇಷಣ್ಣ ಶ್ರೌತಿ, ಎಸ್.ಪಿ. ಬಾಲಸುಬ್ರಹ್ಮಣ್ಯಂ, ಡಿವಿಜಿ ಅವರ ವ್ಯಕ್ತಿಚಿತ್ರಣಗಳಿವೆ. ಡಿವಿಜಿ ಅವರ ಬಗೆಗೆ ಡಾ. ಗಣೇಶ್ ಅವರು ಬರೆದಿರುವ **ಬ್ರಹ್ಮ ಪುರಿಯ ಭಿಕ್ಷುಕ** ಎಂಬ ಪುಸ್ತಕದಿಂದ ಅವರ ವ್ಯಕ್ತಿಚಿತ್ರಣದ ಭಾಗವನ್ನು ಸಂಗ್ರಹಿಸಿದ್ದಾರೆ.

ಕಲೆ ಎಂಬ ಭಾಗ ಚಿಂತನಶೀಲರಿಗೆ ಅತ್ಯಂತಾಕರ್ಷಕವಾಗಿದೆ. ಆಶುಕಲಾಕೌಶಲ, ರಣರಂಗದಿಂದ ರಸರಂಗದತ್ತ, ನನ್ನ ರಾಗನುರಾಗ, ಏಕವ್ಯಕ್ತಿ ಯಕ್ಷಗಾನ, ಭಾರತೀಯ ನೃತ್ಯಕ್ಕೆ ಶಾಸ್ತ್ರದ ಚೌಕಟ್ಟಿನ ಆವಶ್ಯಕತೆ ಎಂಬ ಪ್ರೌಢಪ್ರಬಂಧಗಳಿವೆ. ಇವುಗಳನ್ನು ಓದಿ ಅರಗಿಸಿಕೊಳ್ಳಲು ಆ ವಿಷಯಗಳ ಜ್ಞಾನದ ಆವಶ್ಯಕತೆ ಇದೆ. ಕನ್ನಡ ಸಾಹಿತ್ಯ ಎಂಬ ವಿಭಾಗದಲ್ಲಿ ಅದರ ವಿಶಾಲ ವ್ಯಾಪ್ತಿ, ಹಳಗನ್ನಡವನ್ನು ಹೇಗೆ ನೋಡಬೇಕು, ತೆಲುಗು ಭಾರತಗಳ ಹಿನ್ನೆಲೆಯಲ್ಲಿ ಪಂಪ ಭಾರತ, ಗೋವಿಂದ ಪೈಗಳ ಕಾವ್ಯ, ಡಿವಿಜಿ ಅವರ ತಾತ್ವಿಕ ನೇಪಥ್ಯ, ಬಿಡಿಮುತ್ತು ಮತ್ತು ಸುಭಾಷಿತ ಚಮತ್ಕಾರ, ಮಂದ್ರ : ಕಥಾತಂತ್ರ ಮತ್ತು ಭಾಷಾಶಿಲ್ಪ, ಜಾನ್ ಮಿಲ್ಟನ್ –ಎಂಬ ವಿದ್ವತ್ ಪ್ರಬಂಧಗಳಿವೆ.

ಗ್ರಂಥದ ಎರಡನೆಯ ಭಾಗದಲ್ಲಿ ಅವಧಾನಿ ಮತ್ತು ಅವಧಾನ ಕವಿತೆ ಎಂಬ ಲೇಖನವು ಅವಧಾನಿಗಳಾಗ ಬಯಸುವವರಿಗೆ ಕೈಪಿಡಿಯಾಗಿದೆ. **ಸಂಸ್ಕೃತ ಸಾಹಿತ್ಯ** ಎಂಬ ಭಾಗದಲ್ಲಿ ಡಾ. ಗಣೇಶರು ವಾಲ್ಮೀಕಿಯ ಮತ್ತು ವ್ಯಾಸರ ಕಾವ್ಯ ಸೌಂದರ್ಯದ ಬಗೆಗೆ ಬರೆದಿರುವ ಲೇಖನಗಳು ಕನ್ನಡಿಗರಿಗೆ ಮಾತ್ರವಲ್ಲ, ಸಂಸ್ಕೃತ ಪಂಡಿತರಿಗೂ ಕಣ್ತೆರೆಸುವ ಔಷಧಗಳಂತಿವೆ. ಕಾಳಿದಾಸ, ದಂಡಿ, ಜಯದೇವ ಮುಂತಾದ ಕವಿಗಳ ಕೃತಿಗಳನ್ನು ಎಲ್ಲ ಸಂಸ್ಕೃತ ತಜ್ಞರೂ ಬಲ್ಲವರೇ. ಆದರೂ ಅವುಗಳ ಬಗೆಗೆ ನೂತನ ಚಿಂತನ ಮಂಥನಗಳು ನಡೆಯಬೇಕು. ಅದಕ್ಕೆ ದಿಕ್ ಪ್ರದರ್ಶನ ಮಾಡುವ ಲೇಖನಗಳಿವೆ. ಅನುಷ್ಟುಪ್ ಶ್ಲೋಕದ ರಚನಾಶಿಲ್ಪ ಎಂಬ ಲೇಖನದಲ್ಲಿ ಡಾ. ಗಣೇಶರು ವೃತ್ತ ರತ್ನಾಕರದ ವ್ಯಾಖ್ಯಾನಗಳಿಂದ ಸಂಗ್ರಹಿಸಿರುವ ನೂತನ ಮಾಹಿತಿಗಳಿವೆ. ಅಧ್ಯಾತ್ಮ, ಸಂಸ್ಕೃತಿ, ಮೌಲ್ಯ ಮೀಮಾಂಸೆ ಎಂಬ ವಿಭಾಗದಲ್ಲಿ ಗಂಭೀರ ವೈಚಾರಿಕ ಲೇಖನಗಳಿವೆ. **ಅಷ್ಟ ಗ್ರಾಮ ಅಯ್ಯರ್ ಪಂಗಡ : ಒಂದು ಅಧ್ಯಯನ** ಎಂಬ ಲೇಖನವು ಸಮುದಾಯಾಧ್ಯಯನದ ಶ್ರೇಷ್ಠ ಉದಾಹರಣೆ.

ಡಾ. ಆರ್. ಗಣೇಶ್ ಅವರು ಅರುವತ್ತು ವರ್ಷಗಳಲ್ಲಿ ಸಂಪಾದಿಸಿರುವ ಸಾಹಿತ್ಯ ಸಿದ್ಧಿ ಅದ್ಭುತ, ಅಪಾರ, ಅಪೂರ್ವ ಎಂಬ ಭಾವನೆ ಈ ಪುಸ್ತಕವನ್ನು ಓದಿದವರಿಗೆ, ಇದರ ಅನುಬಂಧಗಳನ್ನು ಅವಲೋಕಿಸಿದವರಿಗೆ ಬರದಿರದು. ಇಂತಹ ಉತ್ತಮ ಸಾಹಿತ್ಯವನ್ನೋದುವ ಇಚ್ಛೆಯೂ ಶಕ್ತಿಯೂ ಕನ್ನಡಿಗರಿಗೆ ಉಂಟಾಗಲೆಂದು ಆಶಿಸುವುದು ಮಾತ್ರ ನಮ್ಮ ಬಯಕೆ.

ಪುಸ್ತಕದ ಆದಿಯಲ್ಲಿ ಕೊಟ್ಟಿರುವ ಪ್ರವೇಶಿಕೆಯಲ್ಲಿ ಬಿ.ಎನ್. ಶಶಿಕಿರಣ್ ಡಾ. ಆರ್. ಗಣೇಶರ ವಾಙ್ಮಯವೈಭವವನ್ನೂ ಪ್ರತಿಪಾದನ ವೈಶಿಷ್ಟ್ಯವನ್ನೂ ಕಾವ್ಯ ರಚನಾವೈದಗ್ಧ್ಯವನ್ನೂ ವಿಮರ್ಶನವೈಚಕ್ಷಣ್ಯವನ್ನೂ ಹೃದಯಂಗಮವಾಗಿ ತಿಳಿಸಿಕೊಟ್ಟಿದ್ದಾರೆ. ಈ ಸಂಪಾದಕರ ಸೂಕ್ಷೇಕ್ಷಿಕೆ ಪ್ರಶಂಸಾರ್ಹವಾಗಿದೆ. ಇವರ ಸ್ತುತ್ಯಕಾರ್ಯಕ್ಕೆ ನಮ್ಮ ನಮನಗಳು.

ರಾಗಭಾರತೀ ಎಂಬ ಹೆಸರು ಗ್ರಂಥಕ್ಕೆ ಅತ್ಯಂತ ಸೂಕ್ತವಾಗಿದೆ. ಏಕೆಂದರೆ 'ರಾಗ' ಎಂಬುದು ರಾ. ಗಣೇಶ ಎಂಬ ಹೆಸರಿನ ಸಂಕ್ಷಿಪ್ತ ರೂಪ. ಅವರ ಮಾತುಗಳನ್ನೇ ಇದರಲ್ಲಿ ಸಂಗ್ರಹಿಸಿರುವುದು. ಇದರ ಲೋಕಾರ್ಪಣೆ ಬೆಂಗಳೂರಿನಲ್ಲಿ 3.12.2023 ರಂದು ಆಗುತ್ತಿರುವುದು ಸಂಸ್ಕೃತಿಪ್ರಿಯರಿಗೆ ಸಂತಸದ ಸಂಗತಿ.

ದಸರಾ ವಸ್ತು ಪ್ರದರ್ಶನ; ಇಂಗ್ಲಿಷ್‌ನಲ್ಲಿರುವ ಸೆಲ್ಫಿ ಸ್ಪಾಟ್‌ನಲ್ಲಿ ಕನ್ನಡ ಬಳಸಲು ಸೂಚನೆ

ಮೈಸೂರು,ನ.28(ಪಿಎಂ)– ಮೈಸೂರು ದಸರಾ ವಸ್ತು ಪ್ರದರ್ಶನ ಆವರಣದಲ್ಲಿ ಇಂಗ್ಲಿಷ್‌ನಲ್ಲಿರುವ ಸೆಲ್ಫಿ ಸ್ಪಾಟ್‌ನಲ್ಲಿ ಪ್ರಧಾನವಾಗಿ ಕನ್ನಡ ಭಾಷೆ ಬಳಸಲು ಕ್ರಮ ಕೈಗೊಳ್ಳುವಂತೆ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಸಿಇಓ ಅವರಿಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಡಾ.ಸಂತೋಷ ಹಾನಗಲ್ಲ ಪತ್ರ ಮುಖೇನ ನಿರ್ದೇಶನ ನೀಡಿದ್ದಾರೆ. 'ಐ ಲವ್ ಮೈಸೂರು ದಸರಾ ಎಕ್ಸ್‌ಪೋ' ಎಂದು ಆಂಗ್ಲ ಭಾಷೆಯಲ್ಲಿ ಮಾತ್ರವೇ ಇರುವುದರ ವಿರುದ್ಧ ಚಿತ್ರಸಹಿತ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಿಗೆ ಮೈಸೂರಿನ ಕನ್ನಡಪರ ಹೋರಾಟಗಾರ ಅರವಿಂದ ಶರ್ಮ, ದೂರು (ಇ–ಮೇಲ್) ಸಲ್ಲಿಸಿದ್ದರು. ಈ ಸಂಬಂಧ ಕ್ರಮ ವಹಿಸಿರುವ ಕನ್ನಡ ಅಭಿವೃದ್ಧಿ ಪ್ರಾಧಿಕಾರವು, ಜರೂರು ಎಂದು ಪರಿಗಣಿಸಿ ಕೂಡಲೇ ಸದರಿ ಸೆಲ್ಫಿ ಸ್ಪಾಟ್‌ನಲ್ಲಿ ಕನ್ನಡ ಭಾಷೆಯನ್ನು ಪ್ರಧಾನವಾಗಿ ಬಳಸಲು ಕ್ರಮ ವಹಿಸುವಂತೆ ವಸ್ತು ಪ್ರದರ್ಶನ ಪ್ರಾಧಿಕಾರದ ಸಿಇಓ ಅವರಿಗೆ ತಿಳಿಸಿದೆ.



ಕರ್ನಾಟಕದ ರಾಜಾಭಾಷಾ ಅಧಿನಿಯಮ 1963ರ ಪ್ರಕಾರ ಹಾಗೂ ಸರ್ಕಾರದ ಸುತ್ತೋಲೆಗಳಂತೆ ಕನ್ನಡ ಭಾಷೆಯನ್ನು ರಾಜ್ಯದ ಎಲ್ಲಾ ಹಂತಗಳಲ್ಲಿ ಸಂಪೂರ್ಣವಾಗಿ ಅನುಷ್ಠಾನಗೊಳಿಸಲು ಸೂಚಿಸಲಾಗಿದೆ. ಕನ್ನಡವು ಕರ್ನಾಟಕದ ರಾಜ್ಯದ ರಾಜಭಾಷೆಯಾಗಿರಬೇಕು. ರಾಜ್ಯದಲ್ಲಿ ನೆಲ, ಜಲ, ವಿದ್ಯುತ್ ಇತ್ಯಾದಿ ಎಲ್ಲಾ ಸೌಕರ್ಯಗಳನ್ನು ರಾಜ್ಯ ಸರ್ಕಾರವು ನೀಡುತ್ತಿದ್ದು, ಸ್ಥಳೀಯ ಭಾಷೆಯ ಬೆಳವಣಿಗೆ ಕಾರ್ಯಕ್ಕೆ ಎಲ್ಲಾ ಇಲಾಖೆಗಳು ಕೈಜೋಡಿಸಿ ಭಾಷೆ ಬೆಳವಣಿಗೆಯನ್ನು ಮಾಡಬೇಕಿರುವುದು ನಮ್ಮ–ನಿಮ್ಮೆಲ್ಲರ ಕರ್ತವ್ಯ. ಕೂಡಲೇ ಪ್ರಧಾನವಾಗಿ ಕನ್ನಡ ಬಳಸಬೇಕೆಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಪತ್ರದಲ್ಲಿ ತಿಳಿಸಲಾಗಿದೆ.

ದ್ವಿಭಾಷಾ ಸೂತ್ರದ ಅರಿವಿಲ್ಲದೇ ಇರುವ ವಸ್ತು ಪ್ರದರ್ಶನ ಪ್ರಾಧಿಕಾರದ ಸಿಇಓ ಅವರಿಗೆ ಕೂಡಲೇ ನೋಟಿಸ್ ನೀಡಿ ಸದರಿ ಸೆಲ್ಫಿ ಸ್ಪಾಟ್‌ನಲ್ಲಿ ಕನ್ನಡ ಬಳಸಲು ಆದೇಶಿಸಬೇಕೆಂದು ಅರವಿಂದ ಶರ್ಮ ತಮ್ಮ ದೂರಿನಲ್ಲಿ ಆಗ್ರಹಿಸಿದ್ದರು.

ಈ ಕುರಿತಂತೆ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಸಿಇಓ ರಾಜೇಶ್ ಜಿ.ಗೌಡ, ಈ ಸಂಬಂಧ ಕನ್ನಡ ಪ್ರಧಾನವಾಗಿ ಬಳಸಲು ಕನ್ನಡ ಅಭಿವೃದ್ಧಿ ಪ್ರಾಧಿಕಾರದಿಂದ ಪತ್ರ (ಇ–ಮೇಲ್ ಮೂಲಕ) ಬಂದಿದೆ. ಮೈಸೂರು ದಸರಾ ವಿಶ್ವವಿಖ್ಯಾತ ಇರುವ ಹಿನ್ನೆಲೆಯಲ್ಲಿ ಮೈಸೂರು ದಸರಾ ವಸ್ತು ಪ್ರದರ್ಶನಕ್ಕೆ ಎಲ್ಲಾ ಭಾಗದಿಂದ ಜನ ಬರುತ್ತಾರೆ. ಹಾಗಾಗಿ ಇಂಗ್ಲಿಷ್ ಬಳಕೆ ಮಾಡಲಾಗಿದೆ ಎಂದು ತಿಳಿಸಿದರು. ಜೊತೆಗೆ ಇದು ಮಾಹಿತಿ ಒದಗಿಸುವ ಸ್ಥಳವಲ್ಲ. ಇದರ ಹೊರತಾಗಿ ಉಳಿದೆಡೆ ಕನ್ನಡಕ್ಕೆ ಆದ್ಯತೆ ನೀಡಿದ್ದೇವೆ. ಅದಾಗ್ಯೂ ಮತ್ತೊಂದು ಭಾಗದಲ್ಲಿ ಕನ್ನಡದ ಸೆಲ್ಫಿ ಸ್ಪಾಟ್ ನಿರ್ಮಾಣಕ್ಕೆ ಕ್ರಿಯಾ ಯೋಜನೆ ರೂಪಿಸಿ ಮುಂದಿನ ಸಾಲಿನಲ್ಲಿ ಅನುಷ್ಠಾನಗೊಳಿಸಲು ಕ್ರಮ ವಹಿಸುವುದಾಗಿ ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಶೀಘ್ರ ಪತ್ರ ಮುಖೇನ ಸ್ಪಷ್ಟೀಕರಣ ನೀಡಲಿದ್ದೇವೆ ಎಂದು ತಿಳಿಸಿದರು.

ಡಾ.ಜಯದೇವಿತಾಯಿ ಲಿಗಾಡೆಯಂತಹವರಿಂದ ಕನ್ನಡ ನಾಡು–ನುಡಿ ಇಂದು ಸುಭಿಕ್ಷವಾಗಿದೆ



ಮೈಸೂರು, ನ.28(ಎಸ್‌ಬಿಡಿ)– ಡಾ.ಜಯದೇವಿತಾಯಿ ಲಿಗಾಡೆ ಅವರಂತಹ ಕನ್ನಡದ ಕಟ್ಟಾಳುಗಳ ಬಗ್ಗೆ ಈಗಿನ ಮಕ್ಕಳಿಗೆ ತಿಳಿಸುವ ಅಗತ್ಯವಿದೆ ಎಂದು ಸಾಹಿತಿ ಬನ್ನೂರು ಕೆ.ರಾಜು ಹೇಳಿದರು.

ಮೈಸೂರಿನ ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿರುವ ಕೆಎನ್‌ಸಿ ಇನ್ನೊವೇಟಿವ್ ಗ್ಲೋಬಲ್ ಶಿಕ್ಷಣ ಸಂಸ್ಥೆಯಲ್ಲಿ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಹಾಗೂ ಸುವರ್ಣ ಕರ್ನಾಟಕ ಮಹೋತ್ಸವದಲ್ಲಿ ಪಾಲ್ಗೊಂಡು ಮಾತನಾಡಿದರು.

ಗಡಿನಾಡು ಕನ್ನಡಿಗರ ರಕ್ಷಣೆಗೆ ಟೊಂಕ ಕಟ್ಟಿದ್ದ ಡಾ.ಜಯದೇವಿತಾಯಿ ಲಿಗಾಡೆ ಅವರ ಕನ್ನಡ ಸೇವೆ ಅವಿಸ್ಮರಣೀಯ. ಮಹಾರಾಷ್ಟ್ರ ಸರ್ಕಾರದ ಅಧೀನದಲ್ಲಿದ್ದ 250 ಕನ್ನಡ ಶಾಲೆಗಳನ್ನು ಕುಂಟುನೆಪದಿಂದ ಮುಚ್ಚುವ ಹುನ್ನಾರ ನಡೆದಾಗ ಇವರು ನೂರಾರು ಕನ್ನಡ ಶಿಕ್ಷಕರನ್ನು ನೇಮಿಸಿಕೊಂಡು ಸ್ವಂತ ಹಣದಲ್ಲಿ ವೇತನ ನೀಡುವ ಮೂಲಕ ಕನ್ನಡ ಪ್ರೇಮದ ಜೊತೆಗೆ ಹೃದಯ ವೈಶಾಲ್ಯತೆ ಮೆರೆದರು. ಇವರಂತಹ ಸಹಸ್ರಾರು ವೀರ ಪುರುಷರು, ವೀರ ವನಿತೆಯರ ಹೋರಾಟ, ತ್ಯಾಗದ ಫಲವಾಗಿ ಕನ್ನಡ ನಾಡು–ನುಡಿ ಸುಭಿಕ್ಷ ಹಾಗೂ ಸುಭದ್ರವಾಗಿವೆ ಎಂದರು.

ಜಗತ್ತಿನಲ್ಲಿ ಎಷ್ಟೇ ಭಾಷೆಗಳಿದ್ದರೂ ಮಾತೃಭಾಷೆಯೇ ಅತ್ಯಂತ ಶ್ರೇಷ್ಠ. ಕಲಿಕೆ ಮಾಧ್ಯಮ ಯಾವುದಾದರೂ ಕನ್ನಡವೇ ಆತ್ಮವಾಗಿರಬೇಕು. ಅರಿವಿಗೆ ಅನ್ಯ ಭಾಷೆಗಳು ಸಹಕರಿಸಿದರೂ ಜೀವನಕ್ಕೆ ಮಾತೃಭಾಷೆಯೇ ಬೇಕು. ಭಾಷೆ ಉಳಿದರೆ ನಾಡು ಬೆಳಗುತ್ತದೆ. ಹೆಮ್ಮರವಾಗಿರುವ ಕನ್ನಡವನ್ನು ಯಾರೂ ಬೆಳೆಸುವ ಅಗತ್ಯವಿಲ್ಲ. ಬಳಸುವ ಮೂಲಕ ತಾಯ್ನುಡಿಯನ್ನು ಉಳಿಸಿಕೊಂಡರೆ ಸಾಕು ಎಂದು ಸಲಹೆ ನೀಡಿದರು. ಇದೇ ಸಂದರ್ಭದಲ್ಲಿ ಬನ್ನೂರು ಕೆ.ರಾಜು ಅವರನ್ನು ಸನ್ಮಾನಿಸಲಾಯಿತು. ಸಂಸ್ಥೆಯ ಅಧ್ಯಕ್ಷ ಡಾ.ಕೆ.ಎನ್.ಚಂದ್ರ ಶೇಖರ್, ಪ್ರಾಂಶುಪಾಲರಾದ ತೇಜಸ್ ಮತ್ತು ಜೋಸೆಫ್, ಉಪನ್ಯಾಸಕರಾದ ಕಾವ್ಯ, ಸುರಭಿ, ಲಾವಣ್ಯ ಮತ್ತಿತರರು ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಇಂದು ಸೇರಿ ಮುಂದಿನ 5 ಬುಧವಾರ ಮೈಸೂರು-ಚೆನ್ನೈ 'ವಂದೇ ಭಾರತ್' ವಿಶೇಷ ರೈಲು ಸೇವೆ ಲಭ್ಯ



ಮೈಸೂರು,ನ.28 (ಎಸ್‌ಬಿಡಿ)- ಮೈಸೂರು-ಚೆನ್ನೈ ನಡುವೆ ನಾಳೆ (ನ.29) ಸೇರಿ ಮುಂದಿನ ಐದು ಬುಧವಾರಗಳಂದು ವಿಶೇಷ 'ವಂದೇ ಭಾರತ್' ಎಕ್ಸ್‌ಪ್ರೆಸ್ ರೈಲು ಸಂಚರಿಸಲಿದೆ.

ಕ್ರಿಸ್‌ಮಸ್ ರಜೆ ಹಾಗೂ ಹೊಸ ವರ್ಷದ ಹಿನ್ನೆಲೆಯಲ್ಲಿ ಉಂಟಾಗುವ ಪ್ರಯಾಣಿಕರ ಅಧಿಕ ದಟ್ಟಣೆ ತಪ್ಪಿಸುವ ಉದ್ದೇಶದಿಂದ ನೈಋತ್ಯ ರೈಲ್ವೆ, ನ.29, ಡಿ.6, ಡಿ.13, ಡಿ.20 ಹಾಗೂ ಡಿ.27 ರಂದು ಚೆನ್ನೈ-ಮೈಸೂರು-ಚೆನ್ನೈ ಮಾರ್ಗದಲ್ಲಿ 'ವಂದೇ ಭಾರತ್' ಎಕ್ಸ್‌ಪ್ರೆಸ್ ವಿಶೇಷ ಸಂಚಾರವನ್ನು ಕಲ್ಪಿಸಿದೆ.

ರೈಲು ಸಮಯ: ಈ 5 ಬುಧವಾರಗಳಂದು ಬೆಳಗ್ಗೆ 5.50ಕ್ಕೆ ಚೆನ್ನೈನಿಂದ ಹೊರಡುವ ವಂದೇ ಭಾರತ್ ಎಕ್ಸ್‌ಪ್ರೆಸ್(ರೈಲು ನಂ.06037) ಕಾಟ್ಪಾಡಿ (ಬೆ.7.13ಕ್ಕೆ), ಬೆಂಗಳೂರಿನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ನಿಲ್ದಾಣ (ಬೆ.10.10)ದಲ್ಲಿ ನಿಲ್ಲಲಿದ್ದು, ಮಧ್ಯಾಹ್ನ 12.20ಕ್ಕೆ ಮೈಸೂರು ರೈಲ್ವೆ ನಿಲ್ದಾಣಕ್ಕೆ ಆಗಮಿಸಲಿದೆ. ಹಾಗೆಯೇ ಮಧ್ಯಾಹ್ನ 1.05ಕ್ಕೆ ಮೈಸೂರಿನಿಂದ ಹೊರಡುವ ರೈಲು (ನಂ.06038) ಬೆಂಗಳೂರು (ಮ.2.50ಕ್ಕೆ), ಕಾಟ್ಪಾಡಿ(ಸಂ.5.33ಕ್ಕೆ) ಮೂಲಕ ರಾತ್ರಿ 7.20ಕ್ಕೆ ಚೆನ್ನೈ ನಿಲ್ದಾಣ ತಲುಪಲಿದೆ. ಬೆಂಗಳೂರಿನಲ್ಲಿ 5 ನಿಮಿಷ ಹಾಗೂ ಕಾಟ್ಪಾಡಿ ನಿಲ್ದಾಣದಲ್ಲಿ 2 ನಿಮಿಷ ಮಾತ್ರ ನಿಲುಗಡೆ ನೀಡಲಾಗುತ್ತದೆ.

ಪ್ರಯಾಣಿಕರ ಅನುಕೂಲಕ್ಕಾಗಿ ದೈನಂದಿನ ವಂದೇ ಭಾರತ್ ಎಕ್ಸ್‌ಪ್ರೆಸ್ ಜೊತೆಗೆ ಐದು ಬುಧವಾರಗಳಂದು ವಿಶೇಷ ರೈಲು ಸಂಚಾರ ಕಲ್ಪಿಸಲಾಗಿದೆ. ಆರಾಮದಾಯಕ ಪ್ರಯಾಣಕ್ಕಾಗಿ ವಂದೇ ಭಾರತ್ ಎಕ್ಸ್‌ಪ್ರೆಸ್ ವಾರದ ವಿಶೇಷ ಸೇವೆಯನ್ನು ಸದುಪಯೋಗಪಡಿಸಿಕೊಳ್ಳುವಂತೆ ನೈಋತ್ಯ ರೈಲ್ವೆ ಮೈಸೂರು ವಿಭಾಗದ ಹಿರಿಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕ ಜೆ.ಲೋಹಿತೇಶ್ವರ, ಪ್ರಕಟಣೆಯಲ್ಲಿ ಕೋರಿದ್ದಾರೆ.

ಶಿಕ್ಷಕರು ನೈಜ ಸಂಗತಿ ತಿಳಿಸುವ ಪ್ರಯತ್ನ ಮಾಡಬೇಕು

ರಂಗ ತರಬೇತಿ ಶಿಬಿರ ಉದ್ಘಾಟಿಸಿದ ಹಿರಿಯ ರಂಗಕರ್ಮಿ ಸಿ.ಬಸವಲಿಂಗಯ್ಯ ಅಭಿಮತ



ಮೈಸೂರು ಕಲಾಮಂದಿರ ಆವರಣದ ತಾಲೀಮು ಕೊಠಡಿಯಲ್ಲಿ ಮೈಸೂರು ದೇಶಿರಂಗ ಸಾಂಸ್ಕೃತಿಕ ಸಂಸ್ಥೆ ವತಿಯಿಂದ ನಡೆದ ರಂಗ ತರಬೇತಿ ಶಿಬಿರವನ್ನು ಹಿರಿಯ ರಂಗಕರ್ಮಿ ಸಿ.ಬಸವಲಿಂಗಯ್ಯ ಉದ್ಘಾಟಿಸಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಎಂ.ಡಿ. ಸುದರ್ಶನ್, ಶಿಬಿರದ ನಿರ್ದೇಶಕ ಕೃಷ್ಣಜನಮನ ಚಿತ್ರದಲ್ಲಿದ್ದಾರೆ.

ಮೈಸೂರು, ನ.28(ಎಸ್‌ಪಿಎನ್)- ಕಾವ್ಯದ ಯಾವುದೇ ಒಳಕುರುಹುವಿನ ಸತ್ಯ ಹಾದಿಯನ್ನು ಶೋಧಿಸುವ ಚಾಕಚಕ್ಯತೆ ಆಧುನಿಕ ರಂಗಭೂಮಿಗಿದೆ ಎಂದು ಹಿರಿಯ ರಂಗಕರ್ಮಿ ಸಿ.ಬಸವಲಿಂಗಯ್ಯ ತಿಳಿಸಿದರು.

ಮೈಸೂರು ಕಲಾಮಂದಿರ ಆವರಣದ ತಾಲೀಮು ಕೊಠಡಿಯಲ್ಲಿ ಮೈಸೂರು ದೇಶಿರಂಗ ಸಾಂಸ್ಕೃತಿಕ ಸಂಸ್ಥೆ ವತಿಯಿಂದ ನಡೆದ ರಂಗ ತರಬೇತಿ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಗದ್ಯ-ಪದ್ಯಗಳಲ್ಲಿ ಏನಿದೆ, ಏನಿಲ್ಲ ಎಂಬುದನ್ನು ಶಿಕ್ಷಕರು ಶಾಲೆಯಲ್ಲಿ ತಿಳಿಸಿಕೊಡುವ ಪ್ರಯತ್ನ ಮಾಡಬೇಕು. ಆದರೆ, ಪ್ರಸ್ತುತ ಆ ಕಾರ್ಯ ಆಗುತ್ತಿಲ್ಲ. ಇದನ್ನು ತಪ್ಪು ಎಂದು ನಾನು ಭಾವಿಸಿದ್ದೇನೆ. ನಾನು ಚಿಕ್ಕವಯಸ್ಸಿನವನಾಗಿದ್ದಾಗ ಪುಣ್ಯಕೋಟಿ ಗೋವಿನ ಹಾಡನ್ನು ಕೇಳಿ ಆನಂದಿಸುತ್ತಿದ್ದೆ. ಸ್ವಲ್ಪ ದೊಡ್ಡವನಾದ ಮೇಲೆ (ಪದವಿ ಹಂತದಲ್ಲಿ) ಪುಣ್ಯಕೋಟಿ ಹಾಡಿನಲ್ಲಿ ಹಸುವನ್ನು ಹೀರೋ ಆಗಿ, ಹುಲಿಯನ್ನು ಕೆಟ್ಟ ಪಾತ್ರದಲ್ಲಿ ಅನಾಮಿಕ ಲೇಖಕರು ಬಿಂಬಿಸಿ ಬರೆದಿದ್ದಾರೆ ಏಕೆ ಎಂದು ನನಗೆ ನಾನೇ ಪ್ರಶ್ನೆ ಮಾಡಿಕೊಂಡೆ ಎಂದರು.

ನನ್ನ ಮನಸ್ಸಿನಲ್ಲಿ ಹುಟ್ಟಿಕೊಂಡ ಪ್ರಶ್ನೆ ಏನೆಂದರೆ, ಪುಣ್ಯಕೋಟಿ ಪದ್ಯದಲ್ಲಿ ಹುಲಿ ತನ್ನ ಸೀಮಾರೇಖೆಯನ್ನು ದಾಟಿ ಬಂದು ಹಸುವನ್ನು ಬೇಟೆಯಾಡಲು ಪ್ರಯತ್ನಿಸಲಿಲ್ಲ. ಆದರೆ, ಹಸು ತನ್ನ ಹಸಿವು ನೀಗಿಸಿಕೊಳ್ಳಲು ನಾಡಿನ ಸೀಮಾರೇಖೆಯನ್ನು ದಾಟಿ ಹೋಗಿದೆ. ಆ ಸಂದರ್ಭದಲ್ಲಿ ಹುಲಿಗೆ ತಾನಾಗಿಯೇ ಸಿಕ್ಕಿಹಾಕಿಕೊಂಡಿತು. ಪುಣ್ಯಕೋಟಿ, ಹುಲಿಯನ್ನು ಕಾಡಿ-ಬೇಡಿ ತನ್ನ ಕರುವಿಗೆ ಹಾಲು ಕುಡಿಸಿ ಬರುತ್ತೇನೆ ಎಂದು ಹುಲಿಯನ್ನು ನಂಬಿಸಿ, ಮನೆಗೆ ಹೋಗಿ ಬರುತ್ತದೆ. ಆ ಸಂದರ್ಭದಲ್ಲಿ ಹಸುವಿನ ಪ್ರಾಮಾಣಿಕತೆಯನ್ನು ಮೆಚ್ಚಿದ ಹುಲಿ, ಬೆಟ್ಟದಿಂದ ಹಾರಿ ತನ್ನ ಪ್ರಾಣ ಕಳೆದುಕೊಳ್ಳುವ ಪ್ರಸಂಗದಲ್ಲೂ ಹುಲಿಯೇ ದುಷ್ಟ ಪ್ರಾಣಿ ಎಂದು ಬಿಂಬಿಸಲಾಗಿದೆ ಎಂದು ತಿಳಿಸಿದರು.

ಆದರೆ, ನೈಜವಾಗಿ ಹೇಳುವುದಾದರೆ, ಇಲ್ಲಿ ಹುಲಿ ತನ್ನ ಸೀಮೆಯನ್ನು ದಾಟಿ, ಬೇಟೆಯಾಡಿಲ್ಲ. ಆದರೂ ಹುಲಿ ದುಷ್ಟ ಪ್ರಾಣಿ ಎಂದು ಬಿಂಬಿಸಿರುವುದು ಏಕೆ?. ಪ್ರಕೃತಿದತ್ತವಾಗಿರುವುದನ್ನೇ ಪುಣ್ಯಕೋಟಿಯಲ್ಲಿ ವಿವರಿಸಿದ್ದರೆ ಚೆನ್ನಾಗಿರುತ್ತಿತ್ತು. ಪುಣ್ಯಕೋಟಿ ಪದ್ಯದಲ್ಲಿ ಆದಷ್ಟು ಸಂಗತಿಗಳ ಒಳಕುರುಹುಗಳನ್ನು ಭೇದಿಸುವ ಏಕೈಕ ಮಾಧ್ಯಮ ಎಂದರೆ ಅದುವೆ ರಂಗಭೂಮಿ ಎಂದರು.

ಇತ್ತೀಚಿನ ದಿನಗಳಲ್ಲಿ ಕನ್ನಡ ಭಾಷೆ ಅಳಿವಿನಂಚಿನಲ್ಲಿದೆ ಎಂದು ಎಲ್ಲರೂ ರಾಜ್ಯೋತ್ಸವ ಸಂದರ್ಭದಲ್ಲಿ ಹೇಳುತ್ತಿದ್ದಾರೆ. ಆದರೆ, ಕರ್ನಾಟಕದಲ್ಲಿ ವಾಸಿಸುವ ಕನ್ನಡಿಗರ ಮನೆಯಲ್ಲಾದರೂ ಕನ್ನಡ ಮಾತನಾಡುವುದಿಲ್ಲವೇ ಎಂದು ಪ್ರಶ್ನಿಸಿದ ಅವರು, ಒಂದು ಭಾಷೆ ನಶಿಸುವುದು ಎಂತಹ ಸಂದರ್ಭದಲ್ಲಿ ಎಂದರೆ, ಅದು ಹಮಾಸ್ ಮತ್ತು ಇಸ್ರೇಲ್‌ನಲ್ಲಿ ನಡೆಯುತ್ತಿರುವ ಯುದ್ಧಗಳಲ್ಲಿ ಮಾತ್ರ ಎಂದು ಕೆಲವು ಘಟನೆಗಳನ್ನು ವಿವರಿಸಿ ತಿಳಿಸಿದರು.

ಇತ್ತೀಚೆಗೆ ಎಲ್ಲರೂ ಚಿಂತಕ ಎಂಬ ಪದನಾಮವನ್ನು ತಮ್ಮ ಹೆಸರಿನ ಹಿಂದೆ ಆಹ್ವಾನ ಪತ್ರಿಕೆಯಲ್ಲಿ ಹಾಕುತ್ತಾರೆ. ಆದರೆ, ಯಾವ ಕ್ಷೇತ್ರದಲ್ಲಿ ಎಂಬುದನ್ನು ಸ್ಪಷ್ಟವಾಗಿ ಮುದ್ರಿಸಬೇಕು. ಹಾಗೆಯೇ ಈ ಶಿಬಿರದ ಸಂಪನ್ಮೂಲ ವ್ಯಕ್ತಿಯಾದ ಡಾ.ಟಿ.ಎಸ್. ದಿನಮಣಿ ಅವರು, ಮಾನವಿಕ ವಿಷಯದಲ್ಲಿ ತಜ್ಞರಾಗಿದ್ದಾರೆ. ಹಾಗಾಗಿ ಅವರನ್ನು ಆ ಕ್ಷೇತ್ರದ ಚಿಂತಕಿ ಎಂದು ಸಂಬೋಧಿಸುತ್ತಾರೆ. ಇಂತಹ ನೈಜತೆಗಳನ್ನು ತಿಳಿದುಕೊಳ್ಳಲು ಯುವಕರಿಗೆ ಇಂತಹ ತರಬೇತಿ ಶಿಬಿರಗಳು ಅತ್ಯವಶ್ಯಕ ಎಂದರು.

ವಿವಿಧ ಕಾಲೇಜಿನ ಶಿಬಿರಾರ್ಥಿಗಳು ಈ ರಂಗ ತರಬೇತಿ ಶಿಬಿರದಲ್ಲಿ ಭಾಗವಹಿಸಿದ್ದಾರೆ. ಅವರಲ್ಲಿಯೂ ನಾನು ವಿದ್ಯಾರ್ಥಿಯಾಗಿದ್ದಾಗ ಮೂಡಿದಂತಹ ಪ್ರಶ್ನೆಗಳು, ನಿಮಗೂ ಮೂಡಲಿ. ರಂಗಭೂಮಿಯಲ್ಲಿ ಯುವಕರು ಹೆಚ್ಚು ಭಾಗವಹಿಸಿ, ಪ್ರಕೃತಿ ನೈಜತೆಗೆ ಅನುಗುಣವಾಗಿ ಬದುಕು ರೂಪಿಸಿಕೊಳ್ಳಲು ಕಲಿತುಕೊಳ್ಳುವಂತಾಗಬೇಕು ಎಂದ ಅವರು, ಇತ್ತೀಚೆಗೆ ವಿಜ್ಞಾನಿಯೊಬ್ಬ ಹೇಳಿದ ಮಾತು ನೆನಪಿಗೆ ಬರುತ್ತಿದೆ. ನಾನು ದೇವರನ್ನು ನಂಬುತ್ತೇನೆ. ಆದರೆ, ಆ ದೇವರನ್ನು ನಂಬುವ ಭಕ್ತರನ್ನು ನಂಬಲು ನನ್ನ ಮನಸ್ಸಿಗೆ ಸ್ವಲ್ಪ ಘಾಸಿಯಾಗುತ್ತದೆ ಎಂದು ತಿಳಿಸಿದ್ದ ಪ್ರಸಂಗವನ್ನು ವಿವರಿಸಿದರು. ಈ ವೇಳೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಶಿಬಿರದ ನಿರ್ದೇಶಕ ಕೃಷ್ಣಜನಮನ ಇನ್ನಿತರರು ಉಪಸ್ಥಿತರಿದ್ದರು.

ಸೋಲದೇವನಹಳ್ಳಿಯಲ್ಲಿ ಲೀಲಾವತಿ ಪಶು ವೈದ್ಯಕೀಯ ಆಸ್ಪತ್ರೆ ಉದ್ಘಾಟಿಸಿದ ಡಿಕೆಶಿ



ಬೆಂಗಳೂರು, ನ.28- ನೆಲಮಂಗಲದ ಸೋಲದೇವನಹಳ್ಳಿಯಲ್ಲಿರುವ ಹಿರಿಯ ಚಿತ್ರನಟಿ ಲೀಲಾವತಿ ಅವರ ನಿವಾಸಕ್ಕೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಂಗಳವಾರ (ನ.28) ಭೇಟಿ ನೀಡಿ, ಯೋಗಕ್ಷೇಮ ವಿಚಾರಿಸಿದರು.

ನಂತರ ಸೋಲದೇವನಹಳ್ಳಿಯಲ್ಲಿ ನೂತನವಾಗಿ ನಿರ್ಮಿಸಿರುವ ಲೀಲಾವತಿ ಪಶು ವೈದ್ಯಕೀಯ ಆಸ್ಪತ್ರೆಯನ್ನು ಉದ್ಘಾಟಿಸಿದರು. ಪಶು ವೈದ್ಯಕೀಯ ಆಸ್ಪತ್ರೆಯನ್ನು ನಿರ್ಮಾಣ ಮಾಡುವ ಮೂಲಕ ಲೀಲಾವತಿಯವರು ಹಾಗೂ ವಿನೋದ್ ರಾಜ್ ಅವರು ಸಮಾಜಕ್ಕೆ ಒಂದು ದೊಡ್ಡ ಸಂದೇಶ ನೀಡಿದ್ದಾರೆ ಎಂದು ಡಿಕೆಶಿ ಹೇಳಿದರು.

ಶ್ರೀಮಂತರು ಹಲವಾರು ರೀತಿಯಲ್ಲಿ ದಾನ, ಧರ್ಮ ಮಾಡಿರುವುದನ್ನು ನಾವು ನೋಡಿದ್ದೇವೆ. ಆದರೆ ಲೀಲಾವತಿಯವರು ಮೂಕ ಪ್ರಾಣಿಗಳಿಗಾಗಿ ಆಸ್ಪತ್ರೆಯೊಂದನ್ನು ನಿರ್ಮಿಸಿ ತೋರಿದ ಸಾಮಾಜಿಕ ಕಳಕಳಿ ಇದೆಲ್ಲವನ್ನು ಮೀರಿದ್ದು.

60 ವರ್ಷಗಳ ಕಾಲ ಕಲಾ ಸೇವೆ ಮಾಡಿರುವ ಲೀಲಾವತಿಯವರು, ಇಂದು ಸಾಮಾಜಿಕ ಸೇವೆಯ ಮೂಲಕ ಎಲ್ಲರಿಗೂ ಮಾದರಿಯಾಗಿದ್ದಾರೆ. ಪಶುಗಳ ಚಿಕಿತ್ಸೆಗಾಗಿ ಕಟ್ಟಿರುವ ಈ ಆಸ್ಪತ್ರೆ ಯಶಸ್ವಿಯಾಗಿ ಮುನ್ನಡೆಯಲಿ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಈ ಸಂದರ್ಭದಲ್ಲಿ ಶುಭ ಹಾರೈಸಿದರು.

ಶಾಸಕ ತನ್ವೀರ್ ಸೇಠ್‌ರಿಂದ ಮೊಯಿನುದ್ದಿನ್ ಪಾಷಾ ಅವರ 'ಸುಕನ್ವರನ್ ಇ-ಮೈಸೂರ್' ಪುಸ್ತಕ ಬಿಡುಗಡೆ



ಮೈಸೂರು,ನ.28(ಆರ್‌ಕೆ)-ಅಂಜುಮಾನ್ ಇ-ಹದೀಖತುಲ್ ಅದಬ್ ವತಿಯಿಂದ ಮೈಸೂರಿನ ಎನ್.ಆರ್. ಮೊಹಲ್ಲಾದ ಶಿವಾಜಿ ರಸ್ತೆಯಲ್ಲಿರುವ ಅರಾಫತ್ ಫಂಕ್ಷನ್ ಹಾಲ್‌ನಲ್ಲಿ ಏರ್ಪಡಿಸಿದ್ದ ಸಮಾರಂಭದಲ್ಲಿ ಶಾಸಕ ತನ್ವೀರ್ ಸೇಠ್ ಅವರು ಮೊಯಿನುದ್ದಿನ್ ಪಾಷಾ ಅವರ 'ಸುಕನ್ವರನ್ ಇ-ಮೈಸೂರ್' ಎಂಬ ಉರ್ದು ಭಾಷೆಯ ಪುಸ್ತಕವನ್ನು ಬಿಡುಗಡೆಗೊಳಿಸಿದರು.

ನಂತರ ಮಾತನಾಡಿದ ಅವರು, ಮೈಸೂರು ಸಾಹಿತ್ಯ ಚಟುವಟಿಕೆಗಳು ಹಾಗೂ ಪ್ರವಾಸಿ ತಾಣಗಳ ಹಬ್ ಆಗಿದ್ದು, ನಾವು ಮಾತೃಭಾಷೆಯಾದ ಉರ್ದು ಬೆಳೆಸಿ, ರಕ್ಷಿಸಬೇಕಾಗಿದೆ. ಲೇಖಕ ಮೊಯಿನುದ್ದಿನ್ ಪಾಷಾ ಅವರು ಉರ್ದು ಶಿಕ್ಷಣ ಸಂಸ್ಥೆಗಳ ಬಗ್ಗೆ ಬರೆಯಬೇಕು ಎಂದರು.

ಶಿಕ್ಷಣದಿಂದ ಮಾತ್ರ ಎಲ್ಲಾ ಸಮಸ್ಯೆಗೆ ಪರಿಹಾರ ಸಿಗುತ್ತದೆಯಾದ್ದರಿಂದ ಯುವ ಪೀಳಿಗೆಗೆ ಶಿಕ್ಷಣ ಪಡೆಯುವಂತೆ ಪ್ರೇರೇಪಿಸಬೇಕು. ಆ ಮೂಲಕ ಸಮುದಾಯ ಮತ್ತು ಸಮಾಜದಲ್ಲಿ ಉತ್ತಮ ವಾತಾವರಣ ನಿರ್ಮಿಸಲು ಎಲ್ಲರೂ ಕೈಜೋಡಿಸಬೇಕೆಂದು ಶಾಸಕರು ನುಡಿದರು.

ಮೈಸೂರು ವಿಶ್ವವಿದ್ಯಾನಿಲಯದ ಉರ್ದು ವಿಭಾಗದ ಮಾಜಿ ಮುಖ್ಯಸ್ಥ ಪ್ರೊ. ಎಸ್. ಮಸೂದ್ ಸಿರಾಜ್ ಮಾತನಾಡಿ, ನಮ್ಮ ಹಿರಿಯರು ಸಲ್ಲಿಸಿದ ಸೇವೆಯನ್ನು ಮರೆಯ ಬಾರದು. ಉರ್ದು ಭಾಷೆ ರಕ್ಷಣೆಗಾಗಿ ಮಕ್ಕಳಿಗೆ ಶಿಕ್ಷಣ ನೀಡಬೇಕು. ಮೊಯಿನುದ್ದಿನ್ ಪಾಷಾ ಅವರು ಆರು ಪುಸ್ತಕಗಳನ್ನು ಬರೆಯಲು ಸಲ್ಲಿಸಿದ ಶ್ರಮ ಶ್ಲಾಘನೀಯ ಎಂದು ತಿಳಿಸಿದರು.


'ಸ್ಟಾರ್ ಆಫ್ ಮೈಸೂರ್' ಅಂಕಣಕಾರ ಡಾ. ಕೆ.ಜಾವೀದ್ ನಯೀಮ್ ಅವರು 82 ವರ್ಷದ ಕಲಾವಿದ ಅಬ್ಬಾಸ್ ಶರೀಫ್ ಅವರನ್ನು ಈ ಸಂದರ್ಭ ಸನ್ಮಾನಿಸಿದರು. ಅಂಜುಮಾನ್ ಇ-ಹದೀಖತುಲ್ ಅದಬ್ ಅಧ್ಯಕ್ಷ ಡಾ.ಮೊಹಮದ್ ಸಲಾಹುದ್ದಿನ್, ನಗರಪಾಲಿಕೆ ಸದಸ್ಯ ಬಷೀರ್ ಅಹಮದ್, ಮುಸ್ಲಿಂ ಕೋ-ಆಪರೇಟಿವ್ ಬ್ಯಾಂಕ್ ನಿರ್ದೇಶಕರಾದ ಡಾ.ಸುರಯ್ಯ, ತರನ್ನುಮ್, ಮೊಹಮದ್ ಅಬ್ದುಸ್ ಸಲಾಂ, ಫೈಜಾನ್ ಇ-ಉರ್ದು ಅದಬ್ ಅಧ್ಯಕ್ಷ ಮೊಮಿನ್ ಮುಖ್ತಾರ್, ಮೊಹಮದ್ ಅನೀಸ್ ಗೌರಿ, ಸೈಯ್ಯದ್ ಶಫಿ ಅಹಮದ್, ಅಮೀರ್ ಅಹಮದ್ ಅಮೀರ್ ಹಾಗೂ ಇತರರು ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

ಎನ್‌ಟಿಟಿ ನೇರ ಪರೀಕ್ಷೆಗಾಗಿ ಅರ್ಜಿ ಆಹ್ವಾನ

ಮೈಸೂರು,ನ.28-ರಾಷ್ಟ್ರೀಯ ಕಂಪ್ಯೂಟರ್ ಸಾಕ್ಷರತಾ ಸಮಿತಿ, ಮೈಸೂರು ವತಿಯಿಂದ 2023-24 ನೇ ಸಾಲಿನ ಎನ್‌ಟಿಟಿ (ನರ್ಸರಿ ಟೀಚರ್ ಟ್ರೈನಿಂಗ್) ಎಂಟಿಟಿ(ಮಾಂಟೆಸರಿ ಟೀಚರ್ ಟ್ರೈನಿಂಗ್) ಹಾಗೂ ಡಿಎನ್‌ಟಿಟಿ(ಡಿಪ್ಲೋಮಾ ಇನ್ ನರ್ಸರಿ ಟೀಚರ್ ಟ್ರೈನಿಂಗ್)ನ ನೇರ ಪರೀಕ್ಷೆಗಳಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಏಪ್ರಿಲ್ 2024ರಲ್ಲಿ ನಡೆಯಲಿರುವ ಸದರಿ ಪರೀಕ್ಷೆಗಳಲ್ಲಿ ಮಕ್ಕಳ ಮಾನಸಿಕ ಬೆಳವಣಿಗೆ, ಪೌಷ್ಟಿಕಾಂಶಗಳು, ಪೂರ್ವ ಪ್ರಾಥಮಿಕ ಶಿಕ್ಷಣ, ಕಂಪ್ಯೂಟರ್ ಶಿಕ್ಷಣ, ಸಾಮಾನ್ಯ ಜ್ಞಾನ ಕುರಿತ ಪರೀಕ್ಷೆಗಳಿರುತ್ತವೆ. ಎಸ್‌ಎಸ್‌ಎಲ್‌ಸಿ, ಪಿಯುಸಿ, ಪದವಿ ವಿದ್ಯಾರ್ಹತೆ ಹೊಂದಿರುವ 18ರಿಂದ 55ರ ವಯೋಮಾನದ ಎಲ್ಲಾ ವರ್ಗದ ಆಸಕ್ತರು ಇದರ ಫಲಾನುಭವಿಗಳಾಗಿರುತ್ತಾರೆ. ಪರೀಕ್ಷಾ ಕ್ರಮ, ನೋಂದಾವಣಾ ದಿನಾಂಕ, ಅರ್ಜಿ ಹಾಗೂ ಮಾಹಿತಿಗಾಗಿ 8310306882, 9964790442 ಸಂಪರ್ಕಿಸಿ.

ವಿವಿಧ ಸೌಲಭ್ಯಗಳಿಗೆ ಅರ್ಜಿ ಆಹ್ವಾನ

ಮೈಸೂರು, ನ.28-ಮೆಟ್ರಿಕ್ ನಂತರದ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ ಹಿಂದುಳಿದ ವರ್ಗಗಳ ಹಾಗೂ ಪ್ರವರ್ಗ-1ರ ಅರೆಅಲೆಮಾರಿ, ಅಲೆಮಾರಿ ವಿದ್ಯಾರ್ಥಿಗಳಿಂದ 2023-24ನೇ ಸಾಲಿನ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಮೂಲಕ ನೀಡಲಾಗುತ್ತಿರುವ ಮೆಟ್ರಿಕ್ ನಂತರದ "ವಿದ್ಯಾರ್ಥಿ ವೇತನ" 'ಶುಲ್ಕ ವಿನಾಯಿತಿ' 'ವಿದ್ಯಾಸಿರಿ-ಊಟ ಮತ್ತು ವಸತಿ ಸಹಾಯ ಯೋಜನೆ' ಸೌಲಭ್ಯಗಳಿಗೆ ಆನ್ ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿಯನ್ನು https://ssp.postmatric.karnataka.gov.in ಮೂಲಕ ಸಲ್ಲಿಸಬಹುದಾಗಿದ್ದು, ಅರ್ಜಿ ಸಲ್ಲಿಸಲು 2024ರ ಜನವರಿ 10 ಕೊನೆಯ ದಿನ. ಹೆಚ್ಚಿನ ಮಾಹಿತಿಗಾಗಿ ಇಲಾಖೆಯ ಜಾಲತಾಣ bcwdhelpline@gmail.com ಮತ್ತು ಸಹಾಯವಾಣಿ ಸಂಖ್ಯೆ 8050770005 ಅನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ವರುಣ ಕ್ಷೇತ್ರದ ಮೆಲ್ಲಹಳ್ಳಿಯಲ್ಲಿ ಮಂಗಳವಾರ ನಡೆದ ಕನ್ನಡ ರಾಜ್ಯೋತ್ಸವದಲ್ಲಿ ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಕಾಂಗ್ರೆಸ್ ಯುವ ಮುಖಂಡ ರವಿ ಎನ್.ಗೌಡ ಮೆಲ್ಲಹಳ್ಳಿ, ಸ್ಥಳೀಯ ಮುಖಂಡರಾದ ಗುತ್ತಿಗೆದಾರ ಅನುಕುಮಾರ್‌ಗೌಡ, ಹರೀಶ್, ಶರತ್, ಚೇತನ್, ಚಂದನ್ ಮತ್ತಿತರರು ಉಪಸ್ಥಿತರಿದ್ದರು.

ಇಂದು ಮಂತ್ರ ಮಾಂಗಲ್ಯ ಪದ್ಧತಿಯಂತೆ ಚಿತ್ರನಟಿ ಪೂಜಾ ಗಾಂಧಿ ಮದುವೆ



ಬೆಂಗಳೂರು,ನ.28-ಮುಂಗಾರು ಮಳೆ ಸಿನಿಮಾ ಮೂಲಕ ಕನ್ನಡ ಚಿತ್ರರಂಗಕ್ಕೆ ಪ್ರವೇಶಿಸಿದ ನಟಿ ಪೂಜಾ ಗಾಂಧಿ, ಮೂಲತಃ ಬೆಂಗಾಲಿ ಕುಟುಂಬದವರು. ಅವರಿಗೆ ಕಂಕಣ ಭಾಗ್ಯ ಕೂಡಿ ಬಂದಿದೆ. ತಾವು ಪ್ರೀತಿಸಿದವರೊಂದಿಗೆ ಹಸೆಮಣೆ ಏರಲು ಸಜ್ಜಾಗಿದ್ದಾರೆ.

ಮುಂಗಾರು ಮಳೆ, ಕೃಷ್ಣ, ಮಿಲನ, ಗೋಕುಲ, ಬುದ್ಧಿವಂತ, ಅಭಿನೇತ್ರಿ, ಟಾಟಾ ಬಿರ್ಲಾ ಹೀಗೆ ಸಾಕಷ್ಟು ಕನ್ನಡ ಸಿನಿಮಾಗಳಲ್ಲಿ ನಟಿಸಿ ಕನ್ನಡಿಗರ ಮನ ಗೆದ್ದಿರುವ ನಟಿ ಪೂಜಾ ಗಾಂಧಿ ಕನ್ನಡ ಕಲಿತು ಕನ್ನಡಿಗರ ಪ್ರೀತಿಗೆ ಪಾತ್ರರಾಗಿದ್ದಾರೆ. ನಟಿಯಾಗಿದ್ದ ಸಂದರ್ಭ ಪೂಜಾ ಗಾಂಧಿ ರಾಜಕೀಯಕ್ಕೂ ಎಂಟ್ರಿ ಕೊಟ್ಟಿದ್ದರು. ಇದೀಗ ಕನ್ನಡಿಗನ ಕೈ ಹಿಡಿದು ಕರ್ನಾಟಕದ ಸೊಸೆ ಆಗಲು ಉತ್ತರ ಭಾರತದ ಬೆಡಗಿ ರೆಡಿ ಆಗಿದ್ದಾರೆ.

ಪೂಜಾ ಗಾಂಧಿ ಕೈ ಹಿಡಿಯಲಿರುವವರ ಬೆಂಗಳೂರಿನ ಲಾಜಿಸ್ಟಿಕ್ ಕಂಪನಿ ಓನರ್ ವಿಜಯ್. ನಾಳೆ (ಬುಧವಾರ) ಬೆಂಗಳೂರಿನ ಯಲಹಂಕದಲ್ಲಿ ಮಂತ್ರ ಮಾಂಗಲ್ಯ ಪದ್ಧತಿಯಂತೆ ಮದುವೆ ನಡೆಯಲಿದೆ. ವಿಜಯ್ ಅವರೇ ನಟಿ ಪೂಜಾ ಗಾಂಧಿಯವರಿಗೆ ಕನ್ನಡ ಕಲಿಸಿದ್ದು ಎಂಬ ಮಾಹಿತಿಯೂ ಇದೆ.

ಡಿಕೆಶಿ ವಿರುದ್ಧ ಸಿಬಿಐ ತನಿಖೆ ವಾಪಸ್: ಕೋರ್ಟ್ ಮೆಟ್ಟಿಲೇರಿದ ಶಾಸಕ ಯತ್ನಾಳ್



ಬೆಂಗಳೂರು, ನ.28- ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿರುದ್ಧದ ಸಿಬಿಐ ತನಿಖೆ ಅನುಮತಿ ವಾಪಸ್ ಪಡೆಯಲು ಮುಂದಾಗಿರುವ ರಾಜ್ಯ ಸರ್ಕಾರದ ಕ್ರಮ ವನ್ನು ಪ್ರಶ್ನಿಸಿ ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

ಸರ್ಕಾರದ ನಡೆಯನ್ನು ಪ್ರಶ್ನಿಸಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಹೈಕೋರ್ಟ್‌ಗೆ ಮಧ್ಯಂತರ ಅರ್ಜಿ ಸಲ್ಲಿಸಿದ್ದಾರೆ. ಹೈಕೋರ್ಟ್ ವಿಚಾರಣೆಯನ್ನು ನಿಷ್ಪಲಗೊಳಿಸಲು ಯತ್ನಿಸಲಾಗುತ್ತಿದೆ. ಸಿಬಿಐ ತನಿಖೆ ಬಹುತೇಕ ಮುಕ್ತಾಯದ ಹಂತದಲ್ಲಿದೆ. ಈ ಹಂತದಲ್ಲಿ ಸರ್ಕಾರದ ಕ್ರಮ ಕಾನೂನುಬಾಹಿರವಾಗಿದೆ. ಸಿಬಿಐ ತನಿಖೆಯನ್ನು ಮೊಟಕುಗೊಳಿಸುವ ಉದ್ದೇಶ ಹೊಂದಿದ್ದು, ಈ ಮೂಲಕ ನ್ಯಾಯಾಂಗದ ಕಾರ್ಯನಿರ್ವಹಣೆಯಲ್ಲಿ ಹಸ್ತಕ್ಷೇಪದ ಯತ್ನ ನಡೆದಿದೆ. ಹೀಗಾಗಿ ಸರ್ಕಾರದ ಕ್ರಮಕ್ಕೆ ಸೀಮಿತವಾಗಿ ತಮ್ಮ ವಾದ ಆಲಿಸಲು ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಮನವಿ ಮಾಡಿದ್ದಾರೆ.

ಆದಾಯ ಮೀರಿ ಆಸ್ತಿ ಗಳಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಡಿಕೆ ಶಿವಕುಮಾರ್ ವಿರುದ್ಧ ತನಿಖೆಗೆ ನಡೆಸಲು ಹಿಂದಿನ ಬಿಜೆಪಿ ಸರ್ಕಾರ ಸಿಬಿಐಗೆ ಅನುಮತಿ ನೀಡಿತ್ತು ಆದರೆ ಇದೀಗ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರವಿದ್ದು ಡಿಸಿಎಂ ಡಿ.ಕೆ. ಶಿವಕುಮಾರ್ ವಿರುದ್ಧದ ಪ್ರಕರಣ ಸಂಬಂಧ ಸಿಬಿಐ ತನಿಖೆಗೆ ನೀಡಿದ್ದ ಅನುಮತಿ ವಾಪಸ್ ಪಡೆಯಲು ನಿರ್ಧರಿಸಿದೆ.

ಕಾಂಗ್ರೆಸ್ ಹಿರಿಯ ನಾಯಕ ಹಾಗೂ ಪ್ರಸ್ತುತ ಕರ್ನಾಟಕ ಡಿಸಿಎಂ ಆಗಿರುವ ಡಿ.ಕೆ. ಶಿವಕುಮಾರ್ ವಿರುದ್ಧದ ಅಕ್ರಮ ಆಸ್ತಿ ಗಳಿಕೆ ಪ್ರಕರಣವನ್ನು ತನಿಖೆಗೆ ನಡೆಸಲು ಹಿಂದಿನ ಬಿಜೆಪಿ ಸರ್ಕಾರ ಸಿಬಿಐಗೆ ಅನುಮತಿ ನೀಡಿತ್ತು. ಆದರೆ ಇದೀಗ ರಾಜ್ಯದಲ್ಲಿ ಆಡಳಿತಾರೂಢ ಕಾಂಗ್ರೆಸ್ ಸರ್ಕಾರ ಡಿಕೆ ಶಿವಕುಮಾರ್ ವಿರುದ್ಧದ ಪ್ರಕರಣವನ್ನು ಸಿಬಿಐ ತನಿಖೆಯಿಂದ ವಾಪಸ್ ಪಡೆಯಲು ನಿರ್ಧರಿಸಿದೆ. ನ.23ರಂದು ರಾಜ್ಯ ಸಚಿವ ಸಂಪುಟದಲ್ಲಿ ಈ ಕುರಿತು ನಿರ್ಣಯ ಕೈಗೊಳ್ಳಲಾಗಿತ್ತು.

ಅಕ್ರಮ ಆಸ್ತಿ ಗಳಿಕೆ ಪ್ರಕರಣವನ್ನು ಸಿಬಿಐಗೆ ಹಸ್ತಾಂತರಿಸುವ ನಿರ್ಧಾರ ಕಾನೂನಿಗೆ ವಿರುದ್ಧವಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ ನೀಡಿದ್ದು, ಅಂದಿನ ಬಿಜೆಪಿ ಸರ್ಕಾರ ಸ್ಪೀಕರ್‌ನಿಂದ ಒಪ್ಪಿಗೆ ಪಡೆಯುವ ಬಗ್ಗೆ ತಲೆಕೆಡಿಸಿಕೊಂಡಿರಲಿಲ್ಲ ಎಂದಿದ್ದಾರೆ. ಆದರೆ, ಮಾಜಿ ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಟೀಕೆಗೆ ತಿರುಗೇಟು ನೀಡಿದ್ದು, ಆ ಸಮಯದಲ್ಲಿ ಅವರ ಒಪ್ಪಿಗೆ ಅಗತ್ಯವಿಲ್ಲ ಎಂದು ಸಮರ್ಥಿಸಿಕೊಂಡಿದ್ದಾರೆ.

ನ್ಯಾಯಾಲಯದ ಮೊರೆ ಹೋಗಲು ಎಲ್ಲರಿಗೂ ಹಕ್ಕಿದೆ

ಯತ್ನಾಳ್ ಮೇಲ್ಮನವಿಗೆ ಸಿಎಂ ಪ್ರತಿಕ್ರಿಯೆ



ಬೆಂಗಳೂರು, ನ.28 (ಕೆಎಂಶಿ)-ಸರ್ಕಾರದ ತೀರ್ಮಾನವನ್ನು ಪ್ರಶ್ನಿಸಿ ನ್ಯಾಯಾಲಯದ ಮೊರೆ ಹೋಗಲು ಎಲ್ಲರಿಗೂ ಹಕ್ಕಿದೆ. ಆದರೆ ಅಂತಿಮ ತೀರ್ಮಾನ ನ್ಯಾಯಾಲಯದ್ದೇ ಆಗಿರುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ವಿರುದ್ಧ ಸಿಬಿಐ ತನಿಖೆಗೆ ಅನುಮತಿ ವಾಪಸ್ ಪಡೆದಿರುವುದಕ್ಕೆ ಶಾಸಕ ಬಸವರಾಜ ಯತ್ನಾಳ್ ಅವರು ಉಚ್ಚನ್ಯಾಯಾಲಯದಲ್ಲಿ ದಾವೆ ಹೂಡಿರುವ ಬಗ್ಗೆ ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡುತ್ತಾ ರಾಜ್ಯ ಸರ್ಕಾರ ಡಿ.ಕೆ.ಶಿವಕುಮಾರ್ ಅವರ ವಿರುದ್ಧ ತನಿಖೆಗೆ ನೀಡಿರುವ ಅನುಮತಿ ಕಾನೂನುಬಾಹಿರವಾಗಿದ್ದು, ಆದೇಶ ವಾಪಸ್ಸು ಪಡೆದಿದೆ ಎಂದರು.

ಪಟ್ಟಿ ಅಂತಿಮವಾಗಿಲ್ಲ: ನಿಗಮ ಮಂಡಳಿಗಳ ಅಧ್ಯಕ್ಷ ಸ್ಥಾನದ ನೇಮಕಾತಿ ಬಗ್ಗೆ ಗೃಹ ಸಚಿವರು ಅಸಮಾಧಾನಗೊಂಡಿರುವ ಬಗ್ಗೆ ಪ್ರತಿಕ್ರಿಯೆ ನೀಡಿ, ಅಧ್ಯಕ್ಷರ ನೇಮಕಾತಿಯಲ್ಲಿ ಯಾರ ಅಭಿಪ್ರಾಯವನ್ನು ಪಡೆಯಲಾಗಿಲ್ಲ. ಆಯ್ಕೆ ಪ್ರಕ್ರಿಯೆ ಇನ್ನೂ ಪ್ರಾಥಮಿಕ ಹಂತದಲ್ಲಿದೆ. ಆಯ್ಕೆ ಪಟ್ಟಿ ಇನ್ನೂ ಅಂತಿಮವಾಗಿಲ್ಲದಿರುವುದರಿಂದ ಈ ಬಗ್ಗೆ ಪ್ರತಿಕ್ರಿಯೆ ನೀಡುವುದು ಸರಿಯಲ್ಲ ಎಂದರು.

ಗುಣಮಟ್ಟದ ಹಾಲು: ಶಾಲೆಗಳಿಗೆ ಗುಣಮಟ್ಟದ ಹಾಲಿನ ಪೂರೈಕೆಯಾಗುತ್ತಿಲ್ಲ ಎಂದು ಆರೋಪದ ಹಿನ್ನೆಲೆಯಲ್ಲಿ ಉತ್ತರಿಸುತ್ತಾ, ಸರ್ಕಾರ ಕೆಎಂಎಫ್‌ನ ನಂದಿನಿ ಗುಣಮಟ್ಟದ ಹಾಲನ್ನು ಪೂರೈಸುತ್ತಿದೆ ಎಂದರು. ತೆಲಂಗಾಣದಲ್ಲಿ ಕರ್ನಾಟಕದ ಸಾಧನೆ ಬಗ್ಗೆ ಮಾಡಿದ ಪ್ರಚಾರದ ಬಗ್ಗೆ ಕೇಂದ್ರ ಚುನಾವಣಾ ಆಯೋಗ ಆಕ್ಷೇಪಿಸಿರುವ ಬಗ್ಗೆ ಪ್ರತಿಕ್ರಿಯೆ ನೀಡಿ, ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರದ ಸಾಧನೆಗಳ ಪ್ರಚಾರಕ್ಕೆ ಕೇಂದ್ರ ಚುನಾವಣಾ ಆಯೋಗ ಆಕ್ಷೇಪ ವ್ಯಕ್ತಪಡಿಸಿದ್ದು, ಪ್ರಚಾರವನ್ನು ಕೈಬಿಡಲಾಗಿದೆ ಎಂದರು.

ಉತ್ತರಕಾಶಿ ಸುರಂಗದಿಂದ ಕಾರ್ಮಿಕರ ಸುರಕ್ಷಿತ ರಕ್ಷಣೆ; ಮೈಸೂರಲ್ಲಿ ಸಂಭ್ರಮ



ಮೈಸೂರು, ನ.28(ಎಸ್‌ಬಿಡಿ)- ಉತ್ತರಾಖಂಡದ ಉತ್ತರಕಾಶಿ ಜಿಲ್ಲೆಯ ಸಿಲ್ಕ್ಯಾರ ಸುರಂಗದಲ್ಲಿ ಸಿಲುಕಿದ್ದ ಕಾರ್ಮಿಕರ ರಕ್ಷಣಾ ಕಾರ್ಯಾಚರಣೆ ಯಶಸ್ವಿಯಾದ ಹಿನ್ನೆಲೆಯಲ್ಲಿ ಮೈಸೂರಿನಲ್ಲಿ ಸಂಭ್ರಮಾಚರಿಸಲಾಯಿತು.

ನಗರದ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತ(ಮೆಟ್ರೋಪೋಲ್ ಸರ್ಕಲ್)ದಲ್ಲಿ 'ಟೀಂ ಮೈಸೂರು' ಸದಸ್ಯರು ಒಗ್ಗೂಡಿ, 41 ಕಾರ್ಮಿಕರ ರಕ್ಷಣಾ ಕಾರ್ಯದಲ್ಲಿ ಭಾಗಿಯಾಗಿದ್ದ ಎಲ್ಲರಿಗೂ ಜೈಕಾರ ಹಾಕಿ, ಸಾರ್ವಜನಿಕರಿಗೆ ಸಿಹಿ ಹಂಚಿ ಸಂಭ್ರಮಿಸಿದರು.

ಈ ವೇಳೆ ವಕೀಲ ಗೋಕುಲ್ ಗೋವರ್ಧನ್ ಮಾತನಾಡಿ, 17 ದಿನಗಳಿಂದ ಸುರಂಗದಲ್ಲಿ ಸಿಲುಕಿದ್ದ ಎಲ್ಲಾ ಕಾರ್ಮಿಕರೂ ಸುರಕ್ಷಿತವಾಗಿದ್ದಾರೆ. ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್, ಎನ್‌ಡಿಎಂಎ, ಎನ್‌ಹೆಚ್‌ಎಐ ತಂಡಗಳೊಂದಿಗೆ ಹಲವು ಅಧಿಕಾರಿಗಳು ಹಾಗೂ ಕಾರ್ಮಿಕರು ನಿರಂತರ ಪರಿಶ್ರಮದೊಂದಿಗೆ ಆಪತ್ತಿನಲ್ಲಿದ್ದವರನ್ನು ರಕ್ಷಿಸಿದ್ದಾರೆ. ಇದಕ್ಕೆ ವಿದೇಶದ ಆರ್ನಾಲ್ಡ್ ಡಿಕ್ಸ್ ತಂಡ ಸಹಕಾರ ನೀಡಿದೆ. ಸುರಂಗದಲ್ಲಿ ಸಿಲುಕಿದ್ದವರಿಗೆ ಪುನರ್ಜನ್ಮ ದೊರೆತಿದ್ದು, ಅವರ ಕುಟುಂಬದವರ ಕಣ್ಣೀರು ನಿಂತಿದೆ. ಭಾರತೀಯರ ಪ್ರಾರ್ಥನೆ ಫಲಿಸಿದೆ. ಸಾವು ಗೆದ್ದು ಬಂದಿರುವ ಕಾರ್ಮಿಕರಿಗೆ ತಾಯಿ ಚಾಮುಂಡೇಶ್ವರಿ ಹೆಚ್ಚಿನ ಆಯುರಾರೋಗ್ಯ ಕರುಣಿಸಲಿ ಎಂದು ಪ್ರಾರ್ಥಿಸಿದರು.

ತಂಡದ ಯಶ್ವಂತ್, ಕಿರಣ್ ಜೈರಾಮ್ ಗೌಡ, ಹಿರಿಯಣ್ಣ, ಆನಂದ್, ಲಿಂಗರಾಜು, ಹುಣಸೂರು ಮಂಜು, ದಾಮೋದರ್, ಮುರಳಿ, ಕೃಷ್ಣ, ರಾಘವೇಂದ್ರ, ಸುಮಂತ್ ಅಭಿಷೇಕ್, ಹೇಮಂತ್ ಮತ್ತಿತರರು ಸಂಭ್ರಮಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಮಠ-ಮಾನ್ಯಗಳು ಒಂದು ಜಾತಿಗೆ ಸೀಮಿತವಾಗಿರಬಾರದು

● ಮಾಜಿ ಮೇಯರ್ ಪುರುಷೋತ್ತಮ್ ಅಭಿಮತ ● ಬ್ರಾಹ್ಮಣ, ಲಿಂಗಾಯತ, ಒಕ್ಕಲಿಗರಷ್ಟೇ ದೇಶ ಆಳಬೇಕಾ?: ಪ್ರೊ. ಮಹೇಶ್ ಚಂದ್ರಗುರು



ಮೈಸೂರು,ನ.28(ಜಿಎ)-ಮಠ, ಮಾನ್ಯಗಳು ಜಾತ್ಯಾತೀತವಾಗಿ ಇರಬೇಕು. ಒಂದು ಜಾತಿಗೆ ಸೀಮಿತವಾಗಿ ಇರಬಾರದು. ಜಾತಿ ಗಣತಿಯ ವರದಿಯನ್ನು ಸ್ವಾಮೀಜಿಗಳು ವಿರೋಧ ಮಾಡುವುದು ಖಂಡನೀಯ ಎಂದು ಮಾಜಿ ಮೇಯರ್ ಪುರುಷೋತ್ತಮ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೆಲವೇ ಧರ್ಮ, ಜಾತಿಗಳು ಎಲ್ಲವನ್ನೂ ಹಿಡಿದಿಟ್ಟುಕೊಂಡಿದ್ದಾರೆ. ಸುರಕ್ಷತೆ, ಶಿಕ್ಷಣ, ಅಭಿವೃದ್ಧಿ ಹೀಗೆ ಪ್ರತಿಯೊಂದನ್ನು ಜಾತಿಗಣತಿ ಒಳಗೊಂಡಿದೆ. ಇದಾಗಿಯೂ ಕೆಲವು ರಾಜಕೀಯ ಮುಖಂಡರು ಕಾಂತರಾಜು ವರದಿಯನ್ನು ವಿರೋಧ ಮಾಡುತ್ತಿದ್ದಾರೆ. ಅವರೊಟ್ಟಿಗೆ ಬಲಾಢ್ಯವಾದ ವರ್ಗಗಳು ವಿರೋಧ ಮಾಡುತ್ತಿವೆ. ಮಠಗಳು ಜಾತ್ಯಾತೀತವಾಗಿ ಇರಬೇಕು. ಆದರೆ, ಕೆಲವು ಮಠಗಳು ಇದನ್ನು ಮರೆತು ಮಾತನಾಡುತ್ತಿರುವುದು ವಿಷಾದನೀಯ. ಯಾವುದೇ ಕಾರಣಕ್ಕೂ ಕಾಂತರಾಜು ವರದಿ ಜಾರಿಗೆ ಹಿಂದೇಟು ಹಾಕಬಾರದು. ಹಾಗೊಂದು ವೇಳೆ ಸರ್ವೆ ಸರಿಯಾಗಿ ಆಗಿರದಿದ್ದರೆ ಶೀಘ್ರಗತಿಯಲ್ಲಿ ಮರು ಸರ್ವೇ ನಡೆಸಿ ವರದಿ ಜಾರಿಗೊಳಿಸಬೇಕೆಂದು ಒತ್ತಾಯಿಸಿದರು.

ನಿವೃತ್ತ ಪ್ರಾಧ್ಯಾಪಕ ಪ್ರೊ.ಮಹೇಶ್ ಚಂದ್ರಗುರು ಮಾತನಾಡಿ, ಎಲ್ಲರಿಗೂ ಸಾಮಾಜಿಕ ನ್ಯಾಯ ಸಿಗಬೇಕಾದರೆ ಜಾತಿ ಗಣತಿ ಜಾರಿಗೊಳಿಸಬೇಕು. ಬ್ರಾಹ್ಮಣ, ಲಿಂಗಾಯತ ಹಾಗೂ ಒಕ್ಕಲಿಗರು ಮಾತ್ರವೇ ಈ ದೇಶವನ್ನು ಆಳಬೇಕೇ ಎಂದು ಪ್ರಶ್ನಿಸಿದ ಅವರು, ಮೋದಿ ಹೇಳುತ್ತಾರೆ ದೇಶದಲ್ಲಿ ಶೇ.80ರಷ್ಟು ಹಿಂದೂಗಳಿದ್ದಾರೆ ಎಂದು. ಆದರೆ, ಈಗ ಹೆಚ್ಚಾಗಿ ಇರುವುದು ಹಿಂದುಗಳಲ್ಲ, ಹಿಂದುಳಿದವರಿದ್ದಾರೆ. ಆದ್ದರಿಂದ 90ರ ದಶಕದಲ್ಲಿ ಜರುಗಿದ ಮಂಡಲ ಚಳುವಳಿ ಈಗ ಮತ್ತೆ ದೇಶದಾದ್ಯಂತ ಜರುಗಬೇಕಿದೆ. ಇದಕ್ಕಾಗಿ ರೈತರು, ಕೂಲಿ ಕಾರ್ಮಿಕರೆಲ್ಲರೂ ಒಗ್ಗೂಡಿ ನಮಗೆ ಸಿಗಬೇಕಾದ ಪಾಲನ್ನು ಕೇಳುವ ಕೆಲಸ ಮಾಡಬೇಕಿದೆ ಎಂದರು.

ಮಠಾಧೀಶರಿಗೆ ಯಾಕೆ ಬೇಕು ರಾಜಕೀಯ. ಮಠಾಧೀಶರು ಆಡಳಿತ, ಅಂತಸ್ತು ಹಾಗೂ ಅಧಿಕಾರಕ್ಕೆ ಹತ್ತಿರವಾಗಿದ್ದಾರೆ. ಡಿ.ಕೆ.ಶಿವಕುಮಾರ್ ಅವರು ಒಕ್ಕಲಿಗರ ಅಭ್ಯರ್ಥಿಯಾಗಿ ಸ್ಪರ್ಧಿಸಲಿ ಅವರಿಗೆ ಠೇವಣಿ ಸಿಗುವುದಿಲ್ಲ. ಶಾಮನೂರು ಶಿವಶಂಕರಪ್ಪನವರಿಗೆ ವಯಸ್ಸಾಗಿದ್ದು, ಮಾತಿಗೂ ಮನಸ್ಸಿಗೂ ಸ್ಥಿಮಿತ ಕಳೆದುಕೊಂಡಿದ್ದು, ಅವರಿಗೆ ಕಡ್ಡಾಯವಾಗಿ ರಜೆ ಕೊಟ್ಟು ಕಳುಹಿಸಬೇಕಿದೆ. ದೇವೇಗೌಡರು ರಾಜಕೀಯದ ಇಳಿ ವಯಸ್ಸಿನಲ್ಲಿ ಕೋಮುವಾದಿಗಳೊಂದಿಗೆ ಸೇರಿಕೊಂಡಿದ್ದಾರೆ. ಇದರಿಂದ ಅವರು ಪಡೆದುಕೊಳ್ಳುವುದಕ್ಕಿಂತ ಕಳೆದುಕೊಳ್ಳುವುದೇ ಹೆಚ್ಚಾಗಲಿದೆ ಎಂದು ಹೇಳಿದರು.

ಕಾಂತರಾಜು ವರದಿ ಪ್ರಕಾರ ವೀರಶೈವ, ಒಕ್ಕಲಿಗರು ಹಾಗೂ ಬ್ರಾಹ್ಮಣರು ಒಗ್ಗೂಡಿದರೂ ಶೇ.25ರಷ್ಟು ಜನಸಂಖ್ಯೆ ದಾಟಲ್ಲಾ. ಇನ್ನೂ ಹಿಂದುಳಿದ ವರ್ಗ ಮೊದಲು, ಪರಿಶಿಷ್ಟ ಪಂಗಡ ಮೊದಲಾದವರು 2ನೇ ಸ್ಥಾನದಲ್ಲಿದ್ದಾರೆ. ಸದರಿ ವರದಿಯನ್ನು ನಾನು ನೋಡಿದ್ದೇನೆ. ಈ ವರದಿ ಜಾರಿಯಾದರೆ, ಸಮಾಜದ ಕಟ್ಟಕಡೆಯ ವ್ಯಕ್ತಿಗೂ ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕವಾಗಿ ಸ್ಥಾನಮಾನ ದೊರೆಯಲಿದ್ದು, ಆದ್ದರಿಂದ ವರದಿ ಜಾರಿಯಾಗಬೇಕೆಂದು ಆಗ್ರಹಿಸಿದರು. ಸುದ್ದಿಗೋಷ್ಠಿಯಲ್ಲಿ ಅಹಿಂದ ಜವರಪ್ಪ, ಸೋಮಯ್ಯ ಮಲೆಯೂರು, ವಿಷಕಂಠ, ಸಿದ್ದಸ್ವಾಮಿ ಉಪಸ್ಥಿತರಿದ್ದರು.

ಮೈಸೂರು ಮಿತ್ರ ಬುಧವಾರ 29 ನವೆಂಬರ್ 2023

ಕಾಮಗಾರಿ ನಿರ್ವಹಣೆ ಸರಿಯಾಗಿ ಮಾಡದಿದ್ದರೇ ಕ್ರಮ

ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಚೆಲುವರಾಯಸ್ವಾಮಿ ಎಚ್ಚರಿಕೆ



ನಾಗಮಂಗಲ, ನ.28– ರಸ್ತೆ ಕಾಮಗಾರಿಯ ವಾರ್ಷಿಕ ನಿರ್ವಹಣೆಯನ್ನು ಸರಿಯಾಗಿ ಮಾಡದಿದ್ದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಲು ಹಿಂಜರಿಯುವುದಿಲ್ಲ ಎಂದು ಜಿಲ್ಲಾ ಉಸ್ತುವಾರಿ ಸಚಿವ ಚೆಲುವರಾಯಸ್ವಾಮಿ ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರ ನಂದಕುಮಾರ್ ಅವರಿಗೆ ಎಚ್ಚರಿಕೆ ನೀಡಿದರು.

ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ಮಂಗಳವಾರ ನಡೆದ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಈ ಬಾರಿ ಹೆಚ್ಚು ಗುಣಮಟ್ಟದಲ್ಲಿ ರಸ್ತೆ ನಿರ್ವಹಣೆ ಮಾಡುತ್ತೇವೆಂದು ಗುತ್ತಿಗೆ ಪಡೆದಿರುವವರು ಏನಾದರೂ ವ್ಯತ್ಯಾಸ ಮಾಡಿರುವುದು ಕಂಡು ಬಂದಲ್ಲಿ ಕ್ರಮ ತೆಗೆದುಕೊಳ್ಳಲಾಗುವುದು. ನಿಮ್ಮ ಇಲಾಖೆ ವ್ಯಾಪ್ತಿಯ ಎಲ್ಲಾ ರಸ್ತೆಗಳ ಎರಡು ಬದಿಗಳಲ್ಲಿ ಗಿಡಗಂಟಿಗಳನ್ನು ತೆರವುಗೊಳಿಸಬೇಕು. ಕಾಲಕಾಲಕ್ಕೆ ರಸ್ತೆಗಳನ್ನು ಮುಚ್ಚಿ ಸರಿಯಾಗಿ ನಿರ್ವಹಣೆ ಮಾಡಬೇಕು. ಇಲ್ಲದಿದ್ದಲ್ಲಿ ನಾನು ಸುಮ್ಮನಿರುವುದಿಲ್ಲ ಎಂದು ತಿಳಿಸಿದರು.

ನಾಗಮಂಗಲ, ಬೆಳಗೊಳ ರಸ್ತೆ ಕಾಮಗಾರಿ ಇನ್ನೂ ಮುಗಿದಿಲ್ಲ. ಗುತ್ತಿಗೆದಾರರಿಗೆ ನೋಟಿಸ್ ನೀಡಿ, ಇಲ್ಲದಿದ್ದರೇ ಕೆಲಸ ಬೇಗ ಮುಗಿಸಿ ಎಂದು ತಾಕೀತು ಮಾಡಿ. ಕಳೆದ ಬಾರಿ ಮಂಗಳವಳ್ಳಿ ರಸ್ತೆ ಅಭಿವೃದ್ಧಿಗೆ ಅನುದಾನ ಬಂದಿದ್ದು, ಆ ಕಾಮಗಾರಿಗೆ ಚಾಲನೆ ನೀಡಬೇಕು ಮತ್ತು ಬಂಡೇನಹಳ್ಳಿ, ಮಂಗಳವಳ್ಳಿ ಮುಂತಾದ ಕಾಮಗಾರಿಗಳಿಗೆ ಟೆಂಡರ್ ಮುಗಿದಿದೆ. ಅದನ್ನು ಶೀಘ್ರ ಪ್ರಾರಂಭಿಸಿ. ಪಟ್ಟಣದ ಪ್ರಾಸಿ ಬಂಗಲೆ ಹಳೆಯದಾಗಿದ್ದು, ಅದನ್ನು ಕೆಡವಿ ನೂತನ ಕಟ್ಟಡ ನಿರ್ಮಿಸಲು ಪ್ರಸ್ತಾವನೆ ಸಲ್ಲಿಸಿ ಎಂದು ನಂದಕುಮಾರ್ ಅವರಿಗೆ ಸೂಚನೆ ನೀಡಿದರು. ಅನಾಮಧೇಯ ವ್ಯಕ್ತಿಯೊಬ್ಬ ಬರೆದ ಪತ್ರದಿಂದ ಚಾಕೇನಹಳ್ಳಿ ಗ್ರಾಮದ ಬಡವರೊಬ್ಬರ ಪಡಿತರ ಚೀಟಿಯನ್ನು ವಜಾ ಮಾಡಿದ್ದು ಸರಿಯಿಲ್ಲ ಆದ್ದರಿಂದ ಅವರ ಪಡಿತರ ಚೀಟಿಯನ್ನು ಮತ್ತೆ ಚಾಲನೆ ಮಾಡಬೇಕೆಂದು ಆಹಾರ ಇಲಾಖೆಯ ಅನಿಲ್‌ಗೆ ಸೂಚಿಸಿದರು.

ಗೈರಾದ ಅಧಿಕಾರಿಗಳಿಗೆ ನೋಟಿಸ್: ಸಭೆಗೆ ಸಹಕಾರ ಇಲಾಖೆ, ಅಬ್ಕಾರಿ ಇಲಾಖೆ, ಸಬ್‌ರಿಜಿಸ್ಟ್ರಾರ್ ಮುಂತಾದ ಇಲಾಖೆಯ ಅಧಿಕಾರಿಗಳು ಗೈರಾಗಿದ್ದು, ಇದರಿಂದ ಸಿಡಿಮಿಡಿಗೊಂಡ ಸಚಿವರು, ಗೈರಾದವರಿಗೆ ನೋಟಿಸ್ ಜಾರಿಗೊಳಿಸಿ ಎಂದು ತಾಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಚಂದ್ರಮೌಳಿ ಅವರಿಗೆ ಸೂಚಿಸಿದರು. ಸಭೆಯಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿ ಡಾ.ಹೆಚ್.ಎಲ್.ನಾಗರಾಜ್, ನಂದೀಶ್ ಮುಂತಾದವರಿದ್ದರು.

ಮುಂಜಾನೆ ಅಪಘಾತಗಳಿಗೆ ನಿದ್ರೆ ಮಂಪರು ಕಾರಣ



ಕಿಕ್ಕೇರಿ, ನ.28– ಮಧ್ಯರಾತ್ರಿ 12 ಗಂಟೆಯಿಂದ ಮುಂಜಾನೆ 5 ಗಂಟೆವರೆಗೆ ನಡೆಯುವ ಅಪಘಾತಗಳಿಗೆ ನಿದ್ರೆ ಮಂಪರು ಕಾರಣವಾಗಿದ್ದು, ಆದ್ದರಿಂದ ವಾಹನ ಚಾಲಕರು ಎಚ್ಚರಿಕೆ ವಹಿಸಬೇಕು ಎಂದು ಇನ್ಸ್‌ಪೆಕ್ಟರ್ ರೇವತಿ ಹೇಳಿದರು.

ಇಲ್ಲಿನ ಏಪಿಎಂಸಿ ಬಳಿ ರಾಷ್ಟ್ರೀಯ ರಸ್ತೆ ಸುರಕ್ಷಾ ಸಪ್ತಾಹ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮೊಬೈಲ್ ಗೀಳು, ಹೆಲ್ಮೆಟ್ ಇಲ್ಲದೆ ವೇಗವಾಗಿ ವಾಹನ ಚಲಾಯಿಸುವುದರಿಂದ ಅಪಘಾತ ಹೆಚ್ಚುತ್ತಿವೆ. ನಾವು ಕುಟುಂಬಗಳಿಗೆ ಆಸರೆಯಾಗಿದ್ದೇವೆ ಎಂಬುದನ್ನು ಮರೆಯದೆ ಸುರಕ್ಷತಾ ನಿಯಮ ಪಾಲಿಸಿ ವಾಹನ ಚಲಾಯಿಸಬೇಕು ಎಂದು ತಿಳಿಸಿದರು.

ಯುವ ಪೀಳಿಗೆ ಮೊಬೈಲ್ ಇಲ್ಲದೆ ಬದುಕಿಲ್ಲವಾಗಿದೆ. ಶೋಕಿಗಾಗಿ ಮೊಬೈಲ್, ವ್ಹೀಲಿಂಗ್ ಮಾಡುವ ಚಟಕ್ಕೆ ದಾಸರಾಗಿದ್ದಾರೆ. ನಿಗದಿತ ಸ್ಥಳಕ್ಕೆ ಬೇಗ ಸೇರಬೇಕು ಎಂದು ಅವಸರದಿಂದ ವಾಹನ ಚಲಾಯಿಸುವುದು ಬೇಡ. ಪಕ್ಕದ ರಸ್ತೆಗೆ ಹೋಗಬೇಕಾದರೂ ಮರೆಯದೆ ಹೆಲ್ಮೆಟ್ ಧರಿಸಬೇಕು. ಅಪಘಾತದಲ್ಲಿ ಮೊದಲು ಜೀವಹೋಗುವುದು ತಲೆಗೆ ಪೆಟ್ಟು ಆದ್ದರಿಂದ ಉದಾಸೀನ ಬೇಡ. ಕೇಶವಿನ್ಯಾಸ ಹಾಳಾಗಲಿದೆ. ಕೂದಲು ಉದುರಲಿದೆ ಎಂಬ ಭ್ರಮೆ ಬಿಟ್ಟು ಹೆಲ್ಮೆಟ್ ಧರಿಸಿ ಎಂದರು.

ಹಗಲು ವೇಳೆ ಅಜಾಗರೂಕತೆ ಅಪಘಾತಕ್ಕೆ ಕಾರಣವಾದರೆ, ರಾತ್ರಿ ಹಾಗೂ ಮುಂಜಾನೆ ತೂಕಡಿಕೆಯು ವಾಹನ ಚಾಲನೆ ಅಪಾಯಕರ. ರಸ್ತೆ ಸುರಕ್ಷತೆ ನಿಯಮ ಪಾಲಿಸಿ ತಮ್ಮ ಜೀವರಕ್ಷಿಸಿಕೊಳ್ಳಬೇಕು ಎಂದು ತಿಳಿಸಿದರು.

ಇದೇ ವೇಳೆ ಪೊಲೀಸ್ ಸಿಬ್ಬಂದಿ ರಮೇಶ್, ಮೂರ್ತಿ, ಹೇಮಂತ್, ಸುನೀಲ್ ಮುಂತಾದವರು ಉಪಸ್ಥಿತರಿದ್ದರು.

ಜಾತಿ ಗಣತಿ ವರದಿ ಜಾರಿಗೆ ಆಗ್ರಹಿಸಿ

ಡಿ.1,ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಕೆ



ಕೆ.ಆರ್.ಪೇಟೆ, ನ.28– ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಪೂರಕವಾಗಿರುವ ಜಾತಿ ಗಣತಿ ವರದಿಯನ್ನು ಈ ಬಾರಿಯ ಬೆಳಗಾವಿ ಚಳಿಗಾಲದ ಅಧಿವೇಶನದಲ್ಲಿ ಯಥಾವತ್ ಜಾರಿಗೊಳಿಸುವಂತೆ ಒತ್ತಾಯಿಸಿ ವಿಧಾನಪರಿಷತ್ ಸದಸ್ಯ ಕೆ.ಪಿ.ನಂಜುಂಡಿ ನೇತೃತ್ವದಲ್ಲಿ ಡಿ.1 ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಸಾಂಕೇತಿಕ ಧರಣಿ ನಡೆಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಲಾಗುವುದು ಎಂದು ತಾಲೂಕು ವಿಶ್ವಕರ್ಮ ಕುಶಲ ಕೈಗಾರಿಕಾ ಸಹಕಾರ ಸಂಘದ ಅಧ್ಯಕ್ಷ ಕೆ.ಎನ್.ಕುಮಾರಸ್ವಾಮಿ ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ತಾಲೂಕು ವಿಶ್ವಕರ್ಮ ಮಹಾಸಭಾ ಪದಾಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ಹಿಂದುಳಿದ ವರ್ಗಗಳ ಬಗ್ಗೆ ಮಾಜಿ ಸಿಎಂ ಡಿ.ದೇವರಾಜ ಅರಸು ಅವರಷ್ಟೇ ಕಾಳಜಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಹೊಂದಿದ್ದಾರೆ. ಅಹಿಂದ ವರ್ಗಗಳ ಅಭಿವೃದ್ಧಿ ಹರಿಕಾರ ಸಿದ್ದರಾಮಯ್ಯ ಅವರು 2013ರಲ್ಲಿ ಜಾತಿಗಣತಿ ಮಾಡಿಸಿ ವರದಿ ಮಂಡಿಸುವ ವೇಳೆಗೆ ಲೋಕಸಭಾ ಚುನಾವಣೆ ಘೋಷಣೆಯಾದ ಹಿನ್ನೆಲೆಯಲ್ಲಿ ವರದಿ ಯಥಾವತ್ ಜಾರಿ ಸಾಧ್ಯವಾಗಿರಲಿಲ್ಲ. ಈಗ ಸಿದ್ದರಾಮಯ್ಯ ಮತ್ತೊಮ್ಮೆ ಮುಖ್ಯಮಂತ್ರಿಯಾಗಿರುವುದು ಹಿಂದುಳಿದ ವರ್ಗಗಳಿಗೆ ಸಂತಸದ ವಿಚಾರ ಎಂದ ಅವರು, ಹಿಂದುಳಿದ ವರ್ಗಗಳಿಗೆ ಜನಸಂಖ್ಯೆಗೆ ಅನುಗುಣವಾಗಿ ಅಭಿವೃದ್ಧಿಗೆ ಅನುದಾನ ನೀಡಲು ಜಾತಿಗಣತಿ ಅವಕಾಶ ಕಲ್ಪಿಸಿಕೊಡುತ್ತದೆ. ಹೀಗಾಗಿ ಸಿಎಂ ಸಿದ್ದರಾಮಯ್ಯ ಬೆಳಗಾವಿ ಚಳಿಗಾಲದ ಅಧಿವೇಶನದಲ್ಲಿ ಜಾತಿಗಣತಿ ವರದಿ ಜಾರಿಗೊಳಿಸುವ ಮೂಲಕ ವಿಶ್ವಕರ್ಮ ಸೇರಿದಂತೆ ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಅವಕಾಶ ಕಲ್ಪಿಸಿಕೊಡಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಸಚಿವ ಸಂಪುಟದ ಎಲ್ಲಾ ಸಚಿವರನ್ನು ಒತ್ತಾಯಿಸಿದರು.

ಈ ವೇಳೆ ತಾಲೂಕು ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾ ಅಧ್ಯಕ್ಷ ಹೆಚ್.ಎ.ರಮೇಶ್, ಉಪಾಧ್ಯಕ್ಷ ರೂಪೇಶಾಚಾರ್, ವಿಶ್ವಕರ್ಮ ಯುವ ಮಿಲನ್ ಜಿಲ್ಲಾಧ್ಯಕ್ಷ ಡಿ.ವಿ.ಮೋಹನ್, ರಂಗಸ್ವಾಮಿ, ನಾಗರಾಜು, ರುಕ್ಮಾಂಗದಾಚಾರ್, ರವಿ, ಆರ್.ಕೆ.ಮೂರ್ತಾಚಾರ್, ಟಿಎಪಿಸಿಎಂಎಸ್ ರವಿಕುಮಾರ್, ಗೋವಿಂದಾಚಾರ್, ರಂಗಾಚಾರ್, ಗುರುಮೂರ್ತಾಚಾರ್, ಕಾಳಿಕಾಂಬ ರಾಜು, ತಮ್ಮಯ್ಯಚಾರ್, ಕಾಂತರಾಜು, ಮಂಜಾಚಾರ್, ಗೋಪಾಲ್, ಲೋಕೇಶ್ ವಿಶ್ವಕರ್ಮ ಇತರರಿದ್ದರು.

ಡಿ.5, 6ರಂದು ವಿ.ಸಿ.ಫಾರಂನಲ್ಲಿ ಕೃಷಿ ಮೇಳ

ಮಂಡ್ಯ, ನ.28– ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರು, ವಲಯ ಕೃಷಿ ಸಂಶೋಧನಾ ಕೇಂದ್ರ, ಕೃಷಿ ಮಹಾವಿದ್ಯಾಲಯ ಮತ್ತು ಕೃಷಿ ವಿಜ್ಞಾನ ಕೇಂದ್ರ, ವಿ.ಸಿ.ಫಾರಂ ಅವರ ಸಂಯುಕ್ತಾಶ್ರಯದಲ್ಲಿ ಕರ್ನಾಟಕ ರಾಜ್ಯ ಕೃಷಿ, ತೋಟಗಾರಿಕೆ, ರೇಷ್ಮೆ, ಅರಣ್ಯ, ಪಶುಸಂಗೋಪನೆ, ಮೀನುಗಾರಿಕೆ ಇಲಾಖೆ ಇವರ ಸಹಯೋಗದೊಂದಿಗೆ ಡಿ.5 ಮತ್ತು 6ರಂದು ವಿ.ಸಿ.ಫಾರಂನಲ್ಲಿ ಕೃಷಿ ಮೇಳ ಆಯೋಜಿಸಲಾಗಿದೆ.

ಆದಿಚುಂಚನಗಿರಿ ಮಠದ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಸಾನ್ನಿಧ್ಯದಲ್ಲಿ, ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿರವರು ಕೃಷಿ ಮೇಳ ಉದ್ಘಾಟಿಸಲಿದ್ದಾರೆ. ಶಾಸಕ ದರ್ಶನ್ ಪುಟ್ಟಣ್ಣಯ್ಯ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಂಸದೆ ಸುಮಲತಾ, ಎಂಎಲ್‌ಸಿಗಳಾದ ಮರಿತಿಬ್ಬೇಗೌಡ, ಮಧು ಜಿ.ಮಾದೇಗೌಡ, ದಿನೇಶ್ ಗೂಳಿಗೌಡ, ಶಾಸಕರಾದ ಪಿ.ಎಂ.ನರೇಂದ್ರಸ್ವಾಮಿ, ಎ.ಬಿ.ರಮೇಶ್ ಬಂಡಿಸಿದ್ದೇಗೌಡ, ಪಿ.ರವಿಕುಮಾರ್, ಕೆ.ಎಂ.ಉದಯ್, ಹೆಚ್.ಟಿ ಮಂಜು ಭಾಗವಹಿಸಲಿದ್ದಾರೆ.

ಡಿ.3, ವಿಶ್ವ ವಿಕಲಚೇತನರ ದಿನಾಚರಣೆ

ಮಂಡ್ಯ, ನ.28– ಜಿಲ್ಲಾಡಳಿತ, ಜಿಪಂ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಂಯುಕ್ತಾಶ್ರಯದಲ್ಲಿ ವಿಶ್ವ ವಿಕಲಚೇತನರ ದಿನಾಚರಣೆಯನ್ನು ಡಿ.3ರಂದು ಬೆಳಗ್ಗೆ 10.30ಕ್ಕೆ ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಉದ್ಘಾಟಿಸಲಿದ್ದಾರೆ. ಶಾಸಕರಾದ ಪಿ.ರವಿಕುಮಾರ್ ಅಧ್ಯಕ್ಷತೆ ವಹಿಸಲಿದ್ದಾರೆ. ಸಂಸದೆ ಸುಮಲತಾ, ಎಂಎಲ್‌ಸಿಗಳಾದ ಮರಿತಿಬ್ಬೇಗೌಡ, ಮಧು.ಜಿ ಮಾದೇಗೌಡ, ದಿನೇಶ್ ಗೂಳಿಗೌಡ, ಶಾಸಕರಾದ ಪಿ.ಎಂ ನರೇಂದ್ರಸ್ವಾಮಿ, ಎ.ಬಿ ರಮೇಶ್ ಬಂಡಿಸಿದ್ದೇಗೌಡ, ದರ್ಶನ್ ಪುಟ್ಟಣ್ಣಯ್ಯ, ಕೆ.ಎಂ ಉದಯ್, ಹೆಚ್.ಟಿ.ಮಂಜು ಸೇರಿದಂತೆ ಇನ್ನಿತರರು ಭಾಗವಹಿಸಲಿದ್ದಾರೆ.

ಅಂಕಮ್ಮ ನಿಧನ



ಚಿನಕುರಳಿ, ನ.28–ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅವರ ಚಿಕ್ಕಮ್ಮ ಹಾಗೂ ದೇವೇಗೌಡರ ಪತ್ನಿ ಅಂಕಮ್ಮ(85) ಮಂಗಳವಾರ ನಿಧನರಾದರು. ಮೃತರು ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಬುಧವಾರ ಬೆಳಗ್ಗೆ 10 ಗಂಟೆಗೆ ಗ್ರಾಮದ ಹೊರವಲಯದ ಮೃತರ ಜಮೀನಿನಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಹೊಸಕೋಟೆ ಡೇರಿ ನಿರ್ದೇಶಕರಿಗೆ ಸನ್ಮಾನ



ಪಾಂಡವಪುರ, ನ.28– ತಾಲೂಕಿನ ಹೊಸಕೋಟೆ ಹಾಲು ಉತ್ಪಾದಕರ ಸಹಕಾರ ಸಂಘದ ಆಡಳಿತ ಮಂಡಳಿಗೆ ಆಯ್ಕೆಯಾದ ರೈತ ಸಂಘ ಮತ್ತು ಕಾಂಗ್ರೆಸ್ ಬೆಂಬಲಿತ ನಿರ್ದೇಶಕರನ್ನು ಶಾಸಕ ದರ್ಶನ್ ಪುಟ್ಟಣ್ಣಯ್ಯ ಹಾಗೂ ಮನ್‌ಮುಲ್ ನಿರ್ದೇಶಕ ಕಾಡೇನಹಳ್ಳಿ ರಾಮಚಂದ್ರು ಅಭಿನಂದಿಸಿದರು.

ಹೊಸಕೋಟೆ ಡೇರಿಯ ನಿರ್ದೇಶಕರ ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ 11 ಸ್ಥಾನದಲ್ಲೂ ರೈತ ಸಂಘ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳಾದ ಎಚ್.ಆರ್.ಆನಂದ್, ಜವರೇಗೌಡ, ಎಚ್.ಬಿ.ದೇವರಾಜು, ಎಚ್.ಆರ್.ನಾರಾಯಣಗೌಡ, ಎಚ್.ಸಿ.ರಾಜೇಗೌಡ, ಶಿವಣ್ಣ, ಸೋಮಶೇಖರ್, ಪ್ರೇಮಕುಮಾರಿ, ಪದ್ಮಮ್ಮ, ರತ್ನಮ್ಮ, ಎಚ್.ಎಸ್.ಹಾಳಯ್ಯ ಅವರು ಆಯ್ಕೆಯಾಗಿದ್ದಾರೆ.

ಶಾಸಕ ದರ್ಶನ್ ಪುಟ್ಟಣ್ಣಯ್ಯ ಮಾತನಾಡಿ, ನೂತನ ನಿರ್ದೇಶಕರು ಗ್ರಾಮದ ಜನತೆ, ಯುವಕರು ಒಗ್ಗಟ್ಟಿನಿಂದ ಡೇರಿಯಲ್ಲಿ ಒಳ್ಳೆಯ ಕೆಲಸ ಮಾಡಬೇಕು. ಸಂಘವನ್ನು ದೊಡ್ಡ ಮಟ್ಟಕ್ಕೆ ಬೆಳೆಸಬೇಕೆಂಬ ಉದ್ದೇಶದಿಂದ ರೈತ ಸಂಘ–ಕಾಂಗ್ರೆಸ್ ಬೆಂಬಲಿತ ನಿರ್ದೇಶಕರನ್ನು ಆಯ್ಕೆ ಮಾಡಲಾಗಿದೆ. ಒಗ್ಗಟ್ಟಿನಿಂದ ಕೆಲಸ ಮಾಡಿ ಸಂಘವನ್ನು ಅಭಿವೃದ್ಧಿಪಡಿಸಬೇಕು ಎಂದು ಸಲಹೆ ನೀಡಿದರು.

ಇದೇ ವೇಳೆ ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ದಯಾನಂದ್ ಬಾಬು, ಮುಖಂಡ ಸುರೇಶ್, ಡೇರಿ ಕಾರ್ಯದರ್ಶಿ ಎಚ್.ಎಂ.ರಮೇಶ್, ಸಿಬ್ಬಂದಿ, ಗ್ರಾಮದ ಮುಖಂಡರು ಹಾಜರಿದ್ದರು.

ಕುದುರಗುಂಡಿ ಮಲ್ಲಯ್ಯನ ನಗರದಲ್ಲಿ ಯುವಕನ ಹತ್ಯೆ

ಮದ್ದೂರು, ನ.28–ಯುವಕನನ್ನು ಹತ್ಯೆ ಮಾಡಿರುವ ಘಟನೆ ತಾಲೂಕಿನ ಕುದುರಗುಂಡಿ ಮಲ್ಲಯ್ಯನ ನಗರ ಗ್ರಾಮದಲ್ಲಿ ಸೋಮವಾರ ನಡೆದಿದೆ.



ಕುದುರಗುಂಡಿ ಗ್ರಾಮದ ಚಿಕ್ಕಲಿಂಗೇಗೌಡರ ಪುತ್ರ ಹಾಗೂ ಗಾರೆ ಕೆಲಸಗಾರ ಶಿವಾನಂದ (19) ಹತ್ಯೆಯಾದ ಯುವಕ. ತಂದೆ ಚಿಕ್ಕಲಿಂಗೇಗೌಡ ಹಾಗೂ ತಾಯಿ ಪದ್ಮಾ ಬೆಂಗಳೂರಿನಲ್ಲಿ ವಾಸವಾಗಿದ್ದಾರೆ. ಇದರಿಂದ ಶಿವಾನಂದ ಕಳೆದ ಆರು ತಿಂಗಳಿನಿಂದ ತನ್ನ ಸ್ನೇಹಿತ ಮಹೇಶ್ ನೊಂದಿಗೆ ಬಾಡಿಗೆ ಮನೆಯಲ್ಲಿ ವಾಸವಾಗಿದ್ದ. ಆದರೆ, ನಾನು ಹಾಗೂ ನಮ್ಮ ಅಣ್ಣ ಶಿವಾನಂದ, ತಾಯಿ–ತಂದೆಯೊಂದಿಗೆ ಇರಲು ಬೆಂಗಳೂರಿಗೆ ಹೋಗುತ್ತೇವೆ ಎಂದು ತಿಳಿದು ಕುಪಿತಗೊಂಡ ಮಹೇಶ್, ನನ್ನ ಸಹೋದರ ಶಿವಾನಂದನನ್ನು ಸೋಮವಾರ ಹತ್ಯೆ ಮಾಡಿದ್ದಾನೆ ಎಂದು ತಂಗಿ ಚೈತ್ರಾ ಮದ್ದೂರು ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಹತ್ಯೆಯ ಬಗ್ಗೆ ಹಲವು ಸಂಶಯಗಳಿದ್ದು, ಈ ಬಗ್ಗೆ ಇನ್ನೂ ನಿಖರವಾದ ಮಾಹಿತಿ ತಿಳಿದು ಬಂದಿಲ್ಲ. ಸಿಪಿಐಗಳಾದ ಶಿವಕುಮಾರ್, ವೆಂಕಟೇಗೌಡ ಸ್ಥಳ ಪರಿಶೀಲಿಸಿ, ಸ್ನೇಹಿತ ಮಹೇಶ್‌ನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.

ಒಂದನೇ ಪುಟದಿಂದ

ಟಾಸ್ಕ್‌ಫೋರ್ಸ್ ರಚನೆ

ಸ್ಕ್ಯಾನಿಂಗ್ ಸೆಂಟರ್‌ಗಳಲ್ಲಿ ಸ್ಕ್ಯಾನ್ ಮಾಡುವ ವೇಳೆ ತಂದೆ–ತಾಯಿ ಹೊರತುಪಡಿಸಿ ಯಾರಿಗೂ ಕೂಡ ಒಳಗೆ ಪ್ರವೇಶ ನೀಡುವಂತಿಲ್ಲ. ಇದು ಸೇರಿದಂತೆ ಸರ್ಕಾರದ ನಿಯಮಗಳನ್ನು ಪಾಲನೆ ಮಾಡಲಾಗುತ್ತಿದೆಯೇ ಎಂದು ಟಾಸ್ಕ್‌ಫೋರ್ಸ್ ಪರಿಶೀಲನೆ ನಡೆಸಲಿದೆ ಎಂದು ಡಾ.ರಾಜೇಂದ್ರ ತಿಳಿಸಿದರು.

ನಾಳೆಯೇ ಟಾಸ್ಕ್ ರಚನೆಗೊಳ್ಳಲಿದ್ದು, ನಾಳೆಯಿಂದಲೇ ಕಾರ್ಯಾಚರಣೆಗಿಳಿಯಲಿದೆ ಎಂದು ಈ ವೇಳೆ ಸ್ಪಷ್ಟಪಡಿಸಿದರು. ಟ್ರೇಡ್ ಲೈಸೆನ್ಸ್ ಇಲ್ಲದೇ ಕ್ಲಿನಿಕ್, ಆಸ್ಪತ್ರೆಗಳನ್ನು ನಡೆಸುತ್ತಿದ್ದರೆ ಅವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಇದೇ ವೇಳೆ ಎಚ್ಚರಿಸಿದರು. ಮೈಸೂರಿನ ಉದಯಗಿರಿ ಹಾಗೂ ರಾಜ್‌ಕುಮಾರ್ ರಸ್ತೆಯ ಎರಡು ಆಸ್ಪತ್ರೆಗಳಲ್ಲಿ ಭ್ರೂಣ ಹತ್ಯೆ ನಡೆಯುತ್ತಿತ್ತು ಎಂದು ತಿಳಿದು ಬಂದಿದೆ. ಇದರಲ್ಲಿ ಅಧಿಕಾರಿಗಳು ಭಾಗಿಯಾಗಿದ್ದಾರೋ ಅಥವಾ ಅಧಿಕಾರಿಗಳ ನಿರ್ಲಕ್ಷ್ಯತನದಿಂದ ಕೃತ್ಯ ನಡೆದಿದೆಯೋ ಎಂಬುದು ತನಿಖೆ ವೇಳೆ ತಿಳಿದು ಬರಲಿದೆ. ಮೈಸೂರು ಮಾತ್ರವಲ್ಲದೆ ಮಂಡ್ಯ ಹಾಗೂ ಬೆಂಗಳೂರಿನಲ್ಲಿ ಕೂಡ ಇದರ ಜಾಲ ವ್ಯಾಪಿಸಿದ್ದು, ಪೊಲೀಸರು ತನಿಖೆ ನಡೆಸುತ್ತಿದ್ದಾರೆ ಎಂದು ಹೇಳಿದರು.

ಬಹಳಷ್ಟು ಕಡೆ ಆಯುರ್ವೇದ ಹಾಗೂ ಪೈಲ್ಸ್ ಚಿಕಿತ್ಸೆ ನೀಡುತ್ತೇವೆಂದು ಬೋರ್ಡ್ ಹಾಕಿರುತ್ತಾರೆ. ಆದರೆ ಆಯುರ್ವೇದದ ಬದಲು ಅಲೋಪತಿ ಚಿಕಿತ್ಸೆ ಕೊಡುತ್ತಿರುತ್ತಾರೆ. ಸದ್ಯಕ್ಕೆ ಖಾಯಿಲೆ ವಾಸಿ ಆಗಬೇಕೆಂಬ ಧಾವಂತದಲ್ಲಿರುವ ಸಾಮಾನ್ಯ ಜನರಿಗೆ ಇದರ ಬಗ್ಗೆ ಮಾಹಿತಿ ಇರುವುದಿಲ್ಲ. ಇಂತಹವರ ಬಳಿ ಚಿಕಿತ್ಸೆ ಪಡೆಯುವವರ ಆರೋಗ್ಯದ ಮೇಲೆ ಪರಿಣಾಮ ಉಂಟಾಗಲಿದೆ ಎಂದು ಡಾ.ರಾಜೇಂದ್ರ ಆತಂಕ ವ್ಯಕ್ತಪಡಿಸಿದರು.

ಈ ಹಿನ್ನೆಲೆಯಲ್ಲಿ ನಗರ ಪಾಲಿಕೆಯಿಂದ ಗ್ರಾಮ ಪಂಚಾಯಿತಿ ತನಕ ಪ್ರತಿಯೊಂದು ಸಣ್ಣ ಕ್ಲಿನಿಕ್‌ಗೂ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ಮಾಡಬೇಕು ಎಂದು ಡಾ.ರಾಜೇಂದ್ರ ತಾಕೀತು ಮಾಡಿದರು. ಬಹಳಷ್ಟು ಜನರು ದೂರ ಶಿಕ್ಷಣದಲ್ಲಿ ಪದವಿ ಸರ್ಟಿಫಿಕೇಟ್ ಪಡೆದು ತಾವು ಡಾಕ್ಟರ್‌ಗಳೆಂದು ಚಿಕಿತ್ಸೆ ನೀಡುತ್ತಿರುತ್ತಾರೆ. ಆದರೆ ಇಂತಹವರು ನೀಡುವ ಚಿಕಿತ್ಸೆಯಿಂದ ಜನರ ಆರೋಗ್ಯದ ಮೇಲೆ ಮಾರಕ ಪರಿಣಾಮ ಬೀರುತ್ತದೆ ಎಂದು ಹೇಳಿದರು.

ಫ್ಲೆಕ್ಸ್ ತೆರವು: ಮೈಸೂರು ನಗರದಲ್ಲಿ ಯಾರಿಗೂ ಫ್ಲೆಕ್ಸ್ ಅಳವಡಿಸಲು ಅವಕಾಶ ನೀಡಬೇಡಿ. ಒಂದು ವೇಳೆ ಫ್ಲೆಕ್ಸ್ ಅಳವಡಿಸಿದ್ದರೆ ಅಂತಹವರಿಗೆ ದಂಡ ವಿಧಿಸಿ, ಕೂಡಲೇ ಫ್ಲೆಕ್ಸ್ ತೆರವು ಮಾಡಿ ಎಂದು ಜಿಲ್ಲಾಧಿಕಾರಿ ಡಾ. ರಾಜೇಂದ್ರ ಅವರು ಇದೇ ವೇಳೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಈ ಬಾರಿ ಎಸ್‌ಎಸ್‌ಎಲ್‌ಸಿಯಲ್ಲಿ ಟಾಪ್ 5ರೊಳಗೆ ಬರಲೇಬೇಕು

ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶದಲ್ಲಿ ಮೈಸೂರು ಜಿಲ್ಲೆ ಟಾಪ್ 5ರೊಳಗೆ ಬರಲೇಬೇಕು ಎಂದು ಜಿಲ್ಲಾಧಿಕಾರಿ ಡಾ.ರಾಜೇಂದ್ರ, ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ತಾಕೀತು ಮಾಡಿದ್ದಾರೆ.

ಕಳೆದ ಬಾರಿ ಮೈಸೂರು ಜಿಲ್ಲೆ 16ನೇ ಸ್ಥಾನದಲ್ಲಿತ್ತು. ಆದರೆ ಈ ಬಾರಿ ಟಾಪ್ 5ರೊಳಗೆ ಬರಬೇಕು. ಹಾಗೆಂದು ಕಾಪಿ ಮಾಡಿಸಬೇಡಿ ಎಂದು ಹಾಸ್ಯ ಚಟಾಕಿ ಹಾರಿಸಿದ ಡಾ.ರಾಜೇಂದ್ರ, ಗುಣಮಟ್ಟದಲ್ಲಿ ರಾಜೀ ಆಗುವುದು ಬೇಡ. ನ್ಯಾಯ ಮಾರ್ಗದಲ್ಲೇ ಉತ್ತಮ ಫಲಿತಾಂಶ ತನ್ನಿರಿ ಎಂದರು. ಅನುತ್ತೀರ್ಣರಾಗಿರುವ ಹಾಗೂ ಓದಿನಲ್ಲಿ ಹಿಂದಿರುವ ವಿದ್ಯಾರ್ಥಿಗಳನ್ನು ಗುರುತಿಸಿ. ಅವರಿಗೆ ಕನಿಷ್ಠ 10 ಪೂರ್ವ ಸಿದ್ಧತಾ ಪರೀಕ್ಷೆ ನಡೆಸಬೇಕು ಎಂದು ಸಲಹೆ ನೀಡಿದರು. ಇನ್ನು ಹಾಸ್ಟೆಲ್‌ಗಳಲ್ಲಿ ವಾರ್ಡನ್‌ಗಳು ಕೂಡ ಈ ಬಗ್ಗೆ ಗಮನಹರಿಸಬೇಕು. ವಿದ್ಯಾರ್ಥಿಗಳನ್ನು ಮನೆಗೆ ಕಳುಹಿಸದೆ ಹಾಸ್ಟೆಲ್‌ನಲ್ಲೇ ಅವರ ಓದಿನ ಬಗ್ಗೆ ಮುತುವರ್ಜಿ ವಹಿಸಬೇಕು ಎಂದು ಸೂಚನೆ ನೀಡಿದರು.

ಭ್ರೂಣಹತ್ಯೆ ಶಂಕೆ

ಮೈಸೂರಿನ ಖಾಸಗಿ ಆಸ್ಪತ್ರೆಯೊಂದರ ವೈದ್ಯ ಡಾ. ಚಂದನ್ ಬಲ್ಲಾಳ್, ಆತನ ಪತ್ನಿ ಮೀನಾ, ಮೈಸೂರಿನ ಖಾಸಗಿ ಆಸ್ಪತ್ರೆಯ ರಿಸೆಪ್ಷನಿಸ್ಟ್ ರಿಜ್ಮಾ, ಲ್ಯಾಬ್ ಟೆಕ್ನಿಶಿಯನ್ ನಿಸಾರ್ ಎಂಬಾತನನ್ನು ಬಂಧಿಸಲಾಗಿದೆ, ಇನ್ನು, ಈ ಪ್ರಕರಣದಲ್ಲಿ ಮೊನ್ನೆಯೇ ಮೈಸೂರಿನ ಉದಯಗಿರಿಯ ಖಾಸಗಿ ಆಸ್ಪತ್ರೆ, ರಾಜ್‌ಕುಮಾರ್ ರಸ್ತೆಯ ಆಯುರ್ವೇದಿಕ್ ಡೇ ಕೇರ್ ಸೆಂಟರನ್ನು ಜಪ್ತಿ ಮಾಡಲಾಗಿದೆ ಎಂದು ಹೇಳಿದ್ದಾರೆ.

ಮಂಡ್ಯದ ಆಲೆಮನೆಯಲ್ಲಿ ಭ್ರೂಣಗಳ ಹತ್ಯೆ ಮಾಡಿರುವುದು ಪತ್ತೆಯಾಗಿದ್ದು, ಮೂರು ತಿಂಗಳಲ್ಲಿ 242 ಭ್ರೂಣ ಹತ್ಯೆ ಮಾಡಿದ್ದಾರೆ. ಪ್ರತಿ ಭ್ರೂಣ ಹತ್ಯೆಗೆ 25ರಿಂದ 30,000 ರೂ ಪಡೆದಿದ್ದಾರೆ. ಪತ್ತೆಗೆ 25ರಿಂದ 30,000 ರೂ. ಹಾಗೂ ಹತ್ಯೆಗೆ ಮತ್ತೆ 30,000 ರೂ. ಸೇರಿದಂತೆ ಒಟ್ಟು 60,000 ರೂ. ಪ್ಯಾಕೇಜ್ ರೀತಿಯಲ್ಲಿ ದಂಧೆ ನಡೆಸುತ್ತಿದ್ದರು. ಈ ಕುರಿತು ತನಿಖೆ ಮುಂದುವರಿಸಿದ್ದೇವೆ. ಇನ್ನೂ ಇಬ್ಬರು ಮಧ್ಯವರ್ತಿಗಳು ಸಿಗಬೇಕಿದೆ. ಅವರು ಸಿಕ್ಕಮೇಲೆ ಇತರೆ ಮಾಹಿತಿಗಳು ಲಭ್ಯವಾಗಲಿದೆ ಎಂದು ತಿಳಿಸಿದ್ದಾರೆ

ಮೂರು ತಿಂಗಳಲ್ಲಿ 242 ಭ್ರೂಣ ಹತ್ಯೆ ಮಾಡಲಾಗಿದ್ದು, ಆರೋಪಿಗಳೇ ಒಪ್ಪಿಕೊಂಡಂತೆ ಎರಡು ವರ್ಷಗಳಿಂದ ಭ್ರೂಣ ಹತ್ಯೆ ಮಾಡುತ್ತಿದ್ದಾರೆ. ಇದರ ಲೆಕ್ಕದಂತೆ ಒಂದು ವರ್ಷಕ್ಕೆ ಕನಿಷ್ಠ 1,000 ಭ್ರೂಣ ಹತ್ಯೆ ಮಾಡುತ್ತಿದ್ದಾರೆ. ಎರಡು ವರ್ಷಕ್ಕೆ 2,000 ಭ್ರೂಣ ಹತ್ಯೆ ಮಾಡಿರುವ ಶಂಕೆ ಇದೆ. ಪೊಲೀಸರ ತನಿಖೆಯಲ್ಲಿ ಮೂರು ವರ್ಷದಿಂದ ಕೃತ್ಯವೆಸಗಿರುವುದು ಗೊತ್ತಾಗಿದೆ. ಅಲ್ಲಿಗೆ 3,000 ದಷ್ಟು ಭ್ರೂಣ ಹತ್ಯೆ ಮಾಡಿರುವ ಸಾಧ್ಯತೆ ಇದೆ.

ಇನ್ನು ಈ ಪ್ರಕರಣದ ತನಿಖೆಯಲ್ಲಿ ತಮಗೆ ಎರಡು ಸ್ಕ್ಯಾನಿಂಗ್ ಮಷಿನ್‌ಗಳನ್ನು ವಶಕ್ಕೆ ಪಡೆಯಲಾಗಿದೆ. ಈ ಪೈಕಿ ಒಂದು ಕೆಟ್ಟಿದ್ದು, ಮತ್ತೊಂದು ಚೆನ್ನಾಗಿದೆ.

ಸಾಮಾನ್ಯವಾಗಿ ಇಂತಹ ಸ್ಕ್ಯಾನಿಂಗ್ ಮಷಿನ್‌ಗಳು ಮತ್ತು ಸಲಕರಣೆಗಳನ್ನು ಪಡೆಯಬೇಕೆಂದರೆ ಡಿಎಚ್‌ಒ ಅವರ ಅನುಮತಿ ಪಡೆಯುವುದು ಅಗತ್ಯವಿರುತ್ತದೆ. ಅಧಿಕಾರಿಗಳೂ ಕೂಡ ಇದರಲ್ಲಿ ಶಾಮೀಲಾಗಿದ್ದಾರೆಯೇ ಎಂಬ ಪ್ರಶ್ನೆಗೆ ಉತ್ತರಿಸಿದ ದಯಾನಂದ್ ಅವರು, ಈ ಸಾಧ್ಯತೆಗಳೂ ಕೂಡ ಇವೆ, ಅದರ ಬಗ್ಗೆ ಮುಂದಿನ ತನಿಖೆಯಲ್ಲಿ ತಿಳಿದುಬರಲಿದೆ ಎಂದರು. ಸದ್ಯ ಪೊಲೀಸರ ಅತಿಥಿಯಾಗಿರುವ ವೀರೇಶ್ ಹಾಗೂ ಸಿದ್ದೇಶ್ ಎಂಬುವವರು ಮೂಲತಃ ಹೊನ್ನಾಳಿಯವರಾಗಿದ್ದು ಈ ಹಿಂದೆ ಅವರು ಕಿಡ್ನಾಪ್ ಕೇಸ್ ಒಂದರಲ್ಲಿ ಆರೋಪಿಯಾಗಿದ್ದರು ಎಂದು ತಿಳಿಸಿದ್ದಾರೆ. ಸದ್ಯಕ್ಕೆ ಕಳೆದ ಮೂರು ತಿಂಗಳ ಮಾಹಿತಿ ಮೊದಲ ಹಂತದ ತನಿಖೆಯಲ್ಲಿ ಲಭಿಸಿದ್ದು, ಈ ಕುರಿತು ತನಿಖೆ ನಡೆಯುತ್ತಿದೆ. ಎಲ್ಲಾ ಆರೋಪಿಗಳನ್ನೂ ಪೊಲೀಸ್ ಕಸ್ಟಡಿಗೆ ತೆಗೆದುಕೊಳ್ಳಲಾಗಿದ್ದು ವಿಚಾರಣೆ ನಡೆಯುತ್ತಿದೆ ಮತ್ತು ಕೆಲ ಪೋಷಕರನ್ನೂ ಕೂಡ ತನಿಖೆ ಮಾಡಲಿದ್ದೇವೆ ಎಂದು ಹೇಳಿದ್ದಾರೆ.

ಆಲೆಮನೆಗೆ ಭೇಟಿ; ಪರಿಶೀಲನೆ

ಸುನೀಲ್ ಕುಮಾರ್, ಉಪವಿಭಾಗಾಧಿಕಾರಿ ಶಿವಮೂರ್ತಿ, ತಹಶೀಲ್ದಾರ್ ಶಿವಕುಮಾರ್ ಬಿರಾದಾರ್, ಡಿಎಚ್‌ಓ ಡಾ.ಮೋಹನ್ ನೇತೃತ್ವದಲ್ಲಿ ಪರಿಶೀಲಿಸಿ, ಭ್ರೂಣ ಪತ್ತೆ ಹೇಗೆಲ್ಲಾ ನಡೆಯುತ್ತಿತ್ತು ಎಂಬುದರ ಬಗ್ಗೆ ಸ್ಥಳೀಯರಿಂದ ಮಾಹಿತಿ ಪಡೆಯಲಾಯಿತು. ನಂತರ ಆಲೆಮನೆಯ ಮಾಲೀಕರು ಹಾಗೂ ಸಿಬ್ಬಂದಿ ಪ್ರಕರಣದಲ್ಲಿ ಭಾಗಿಯಾಗಿದ್ದಾರಾ? ಎಂಬ ಬಗ್ಗೆ ಮಾಹಿತಿ ಸಂಗ್ರಹಿಸಿ, ಬಳಿಕ ಇಲಾಖೆಗೆ ವರದಿ ಕೊಡುವುದಾಗಿ ಅಧಿಕಾರಿಗಳು ಸ್ಪಷ್ಟಪಡಿಸಿದರು.

ಕರಾಳ ದಂಧೆ ಬಗ್ಗೆ ಕಾರ್ಮಿಕರ ಮಾಹಿತಿ: ಭ್ರೂಣ ಲಿಂಗ ಪತ್ತೆ ಹಾಗೂ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕರಾಳ ದಂಧೆ ಬಗ್ಗೆ ಸ್ಥಳೀಯ ಕಾರ್ಮಿಕರು ಅಧಿಕಾರಿಗಳ ಮುಂದೆ ಮಾಹಿತಿ ಬಿಚ್ಚಿಟ್ಟರು. ಪ್ರತಿ ಶನಿವಾರ, ಭಾನುವಾರ ಗರ್ಭಿಣಿಯರು ಸ್ಕ್ಯಾನಿಂಗ್‌ಗೆ ಬರುತ್ತಿದ್ದರು. ಗರ್ಭಿಣಿಯರನ್ನು ವೀಕೆಂಡ್‌ನಲ್ಲಿ ಕರೆತಂದು ದಂಧೆ ಮಾಡುತ್ತಿದ್ದರು ಎಂದು ಆಲೆಮನೆಯಲ್ಲಿ ಕೆಲಸ ಮಾಡುತ್ತಿದ್ದ ಬಿಹಾರ ಮೂಲದ ಕಾರ್ಮಿಕರು ಅಧಿಕಾರಿಗಳಿಗೆ ವಿವರ ನೀಡಿದರು.

ಗರ್ಭಿಣಿಯರನ್ನು ಕರೆತಂದು ಭ್ರೂಣ ಲಿಂಗ ಪತ್ತೆ ಮಾಡುತ್ತಿದ್ದ ಗ್ಯಾಂಗ್ ಬಗ್ಗೆ ಮಾಹಿತಿ ನೀಡಿದ ಕಾರ್ಮಿಕರು, ಗರ್ಭಿಣಿಯರ ಜೊತೆಯೇ ಲ್ಯಾಬ್ ಟೆಕ್ನಿಷಿಯನ್‌ಗಳು ಬರುತ್ತಿದ್ದರು. ಗರ್ಭಿಣಿಯರೊಂದಿಗೆ ಸ್ಕ್ಯಾನಿಂಗ್ ಮಿಷನ್ ತರುತ್ತಿದ್ದ ಖತರ್ನಾಕ್ ಗ್ಯಾಂಗ್, ಇಷ್ಟೊಂದು ಮಹಿಳೆಯರು ಯಾಕೆ ಬಂದಿದ್ದಾರೆ ಎಂದು ನಾವು ಪ್ರಶ್ನಿಸಿದರೆ ಸಮರ್ಪಕ ಉತ್ತರ ಕೊಡುತ್ತಿರಲಿಲ್ಲ. ಇದಕ್ಕೂ ಆಲೆಮನೆಗೂ ಸಂಬಂಧ ಇಲ್ಲ ಎಂದು ಹೇಳುತ್ತಿದ್ದರು ಎಂದು ಅಧಿಕಾರಿಗಳಿಗೆ ಆಲಮನೆಯ ಕಾರ್ಮಿಕರು ತಿಳಿಸಿದರು.

ಸ್ಥಳೀಯರಿಂದ ಮಾಹಿತಿ ಪಡೆಯಲಾಗಿದೆ

ನಮಗೆ ಕಳೆದ ಎರಡು ದಿನಗಳ ಹಿಂದೆ ಈ ಬಗ್ಗೆ ಮಾಹಿತಿ ಬಂದಿತ್ತು. ಇಂದು ಕಂದಾಯ, ಆರೋಗ್ಯ ಇಲಾಖೆಯ ಅಧಿಕಾರಿಗಳೊಂದಿಗೆ ಬಂದು ಆಲೆಮನೆಯನ್ನು ಪರಿಶೀಲನೆ ಮಾಡಿದ್ದೇವೆ. ಎಲ್ಲಾ ಯಂತ್ರಗಳನ್ನು ಬೆಂಗಳೂರಿನ ಬೈಯ್ಯಪ್ಪನಹಳ್ಳಿ ಠಾಣೆ ಪೊಲೀಸರು ತೆಗೆದುಕೊಂಡು ಹೋಗಿದ್ದಾರೆ ಎಂದು ಮಂಡ್ಯ ಉಪವಿಭಾಗಾಧಿಕಾರಿ ಶಿವಮೂರ್ತಿ ತಿಳಿಸಿದರು.

ಇಲ್ಲಿನ ಸ್ಥಳೀಯರಿಂದ ಮಾಹಿತಿ ಪಡೆದಿದ್ದೇವೆ. ಎಲ್ಲಾ ವರದಿಯನ್ನು ಜಿಲ್ಲಾಧಿಕಾರಿಗೆ ನೀಡುತ್ತೇವೆ. ನಂತರ ಅವರ ಸೂಚನೆ ಮೇರೆಗೆ ಆಲೆಮನೆ ಸೀಜ್ ಮಾಡಲಾಗುವುದು. ಜಿಲ್ಲೆಯಾದ್ಯಂತ ಇಂತಹ ಘಟನೆಗಳು ಎಲ್ಲೆಲ್ಲಿ ನಡೆಯುತ್ತಿವೆ ಎಂಬುದರ ಬಗ್ಗೆ ಪರಿಶೀಲನೆ ನಡೆಸಿ, ಕಟ್ಟುನಿಟ್ಟಿನ ಕ್ರಮವನ್ನು ವಹಿಸುತ್ತಿದ್ದೇವೆ ಎಂದು ಹೇಳಿದರು. ಆಲೆಮನೆ, ಶೆಡ್‌ಗಳು ಸೇರಿದಂತೆ ಸುತ್ತಮುತ್ತ ಪರಿಶೀಲಿಸಲಾಗಿದೆ. ಇದರಲ್ಲಿ ಯಾರನ್ನು ರಕ್ಷಣೆ ಮಾಡುವ ಪ್ರಶ್ನೆಯೇ ಇಲ್ಲ. ಕಾನೂನು ಕ್ರಮ ಕೈಗೊಳ್ಳಲಾಗುವುದು. ಜಿಲ್ಲೆಯಲ್ಲಿ ಇಂತಹ ಘಟನೆ ನಡೆಯದಂತೆ ಕ್ರಮ ವಹಿಸಲಿದ್ದು, ಟಾಸ್ಕ್‌ಫೋರ್ಸ್ ಸಮಿತಿ ರಚಿಸಲಾಗುವುದು ಎಂದರು.

ಈ ಸಂಬಂಧ ಬೆಂಗಳೂರಿನ ಬೈಯ್ಯಪ್ಪನಹಳ್ಳಿ ಪೊಲೀಸ್ ಠಾಣೆಯಿಂದ ವರದಿ ತರಿಸಿಕೊಳ್ಳಲಾಗುವುದು. ಜಿಲ್ಲಾಧಿಕಾರಿ ಡಾ.ಕುಮಾರ್ ಈ ಬಗ್ಗೆ ಸಮಗ್ರ ಮಾಹಿತಿ ಕಲೆಹಾಕಲು ತಂಡ ರಚನೆ ಮಾಡಿದ್ದಾರೆ ಎಂದರು. ಡಿಎಚ್‌ಓ ಡಾ.ಮೋಹನ್ ಮಾತನಾಡಿ, ಮೂವರು ಸ್ಥಳೀಯ ಆರೋಪಿಗಳು ಭಾಗಿಯಾಗಿರುವ ಬಗ್ಗೆ ಮಾಹಿತಿ ಇದೆ. ಸಾರ್ವಜನಿಕರು ಇಂತಹ ಕೃತ್ಯ ಕಂಡು ಬಂದರೆ ಮಾಹಿತಿ ನೀಡಿ, ತಪ್ಪಿತಸ್ಥರ ವಿರುದ್ಧ ಮುಲಾಜಿಲ್ಲದೇ ಕ್ರಮ ಕೈಗೊಳ್ಳುತ್ತೇವೆ ಎಂದು ಹೇಳಿದರು.



ಅನಾರೋಗ್ಯದಿಂದಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ವಿಧಾನಪರಿಷತ್ ಮಾಜಿ ಸದಸ್ಯರಾದ ಸಂದೇಶ್ ನಾಗರಾಜು ಅವರನ್ನು ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಭೇಟಿಯಾಗಿ, ಆರೋಗ್ಯ ವಿಚಾರಿಸಿದರು. ಈ ವೇಳೆ ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್, ಮಾಜಿ ಮೇಯರ್ ಟಿ.ಬಿ.ಚಿಕ್ಕಣ್ಣ, ಕಾಂಗ್ರೆಸ್ ಮುಖಂಡರಾದ ವಿಶ್ವನಾಥ್(ವಿಶ್ವ), ಶೇಖರ್, ಮಹಾದೇವೇಗೌಡ, ಸಕ್ಕಳ್ಳಿ ಬಸವರಾಜು ಉಪಸ್ಥಿತರಿದ್ದರು.

ಕೇಂದ್ರ ಪುರಸ್ಕೃತ ಯೋಜನೆಗಳ ಸೌಲಭ್ಯಗಳನ್ನು ಅರ್ಹರಿಗೆ ತಲುಪಿಸಿ

ಕುಡಿಯುವ ನೀರಿನ ಕೊರತೆ ಆಗದಂತೆ ಕ್ರಮವಹಿಸಿ: ಪ್ರತಾಪ್ ಸಿಂಹ





ಮೈಸೂರು, ನ.28–ಕೇಂದ್ರ ಸರ್ಕಾರವು ಹಲವು ಜನಪ್ರಿಯ ಯೋಜನೆಗಳನ್ನು ಜಾರಿಗೆ ತಂದಿದ್ದು, ಈ ಸೌಲಭ್ಯಗಳು ಅರ್ಹರಿಗೆ ತಲುಪಬೇಕು. ಕುಡಿಯುವ ನೀರಿನ ಕಾಮಗಾರಿಗಳು ನಿಗದಿತ ಅವಧಿಯಲ್ಲಿ ಪೂರ್ಣಗೊಂಡು ಕುಡಿಯುವ ನೀರನ್ನು ಒದಗಿಸಬೇಕು ಎಂದು ಮೈಸೂರು ಕೊಡಗು ಲೋಕಸಭಾ ಸಂಸದರಾದ ಪ್ರತಾಪ್ ಸಿಂಹ ತಿಳಿಸಿದರು.

ಜಿಲ್ಲಾ ಪಂಚಾಯತ್‌ನ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಜಿಲ್ಲಾ ಅಭಿವೃದ್ಧಿ ಸಮನ್ವಯ ಹಾಗೂ ಉಸ್ತುವಾರಿ ಸಮಿತಿ (ದಿಶಾ ಸಮಿತಿ) ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಹುಣಸೂರಿನಲ್ಲಿ ನಿರ್ಮಾಣ ಆಗಿರುವ ಹೊಸ ಸರ್ಕಾರಿ ಆಸ್ಪತ್ರೆಗೆ ಮೂಲಸೌಕರ್ಯಗಳನ್ನು ಒದಗಿಸಿ, ಆಸ್ಪತ್ರೆಯನ್ನು ಶಿಫ್ಟ್ ಮಾಡಿಸಿ.

ಮೈಸೂರು ವಿಭಾಗದ ವ್ಯಾಪ್ತಿಯಲ್ಲಿ 900 ಭ್ರೂಣ ಹತ್ಯೆಗಳು ಆಗಿರುವ ಕುರಿತು ಪ್ರಸ್ತಾಪಿಸಿದ ಅವರು, ಈ ಬಗ್ಗೆ ಆರೋಗ್ಯ ಇಲಾಖೆಗೆ ಮಾಹಿತಿ ಯಾಕೆ ಇರಲಿಲ್ಲ. ಕೆಪಿಎಂಇ ಆಕ್ಟ್ ಅಡಿ ಸ್ಕ್ಯಾನಿಂಗ್ ಸೆಂಟರ್‌ಗಳು ಅನುಮತಿ ಪಡೆದಿರಬೇಕು. ಈ ಬಗ್ಗೆ ಆರೋಗ್ಯ ಇಲಾಖೆಯ ಅಧಿಕಾರಿಗಳು ಪರಿಶೀಲನೆ ನಡೆಸಬೇಕು. ಮೈಸೂರು ನಗರದಲ್ಲಿ ಅನಧಿಕೃತ ಫ್ಲೆಕ್ಸ್ ಬ್ಯಾನರ್‌ಗಳನ್ನು ತೆರವು ಮಾಡಬೇಕು. ಅನುಮತಿ ಪಡೆಯದೆ ಫ್ಲೆಕ್ಸ್, ಬ್ಯಾನರ್ ಹಾಕುವವರಿಗೆ ನೋಟಿಸ್ ನೀಡಿ ಕ್ರಮ ಕೈಗೊಳ್ಳಿ ಎಂದರು.

ಕೆ.ಆರ್.ಆಸ್ಪತ್ರೆ ಆವರಣದಲ್ಲಿ ಸ್ವಚ್ಛತೆ ಕಾಪಾಡಿಕೊಳ್ಳಬೇಕು. ಮೈಸೂರು ವೈದ್ಯಕೀಯ ಕಾಲೇಜು ಜುಲೈ, 2024ಕ್ಕೆ 100 ವರ್ಷಗಳು ತುಂಬುತ್ತಿದೆ. ಶತಮಾನೋತ್ಸವ ಆಚರಣೆಗೆ ಅಗತ್ಯ ಸಿದ್ಧತೆ ಮಾಡಿಕೊಳ್ಳುವಂತೆ ಮೈಸೂರು ಮೆಡಿಕಲ್ ಕಾಲೇಜಿನ ನಿರ್ದೇಶಕರಿಗೆ ಸೂಚನೆ ನೀಡಿದರು. ಉಂಡುವಾಡಿ ಯೋಜನೆಯಡಿ 164 ಹಳ್ಳಿಗಳಿಗೆ ಕುಡಿಯುವ ನೀರನ್ನು ಒದಗಿಸುವ ಯೋಜನೆ ಕಾಮಗಾರಿ ಪ್ರಗತಿಯಲ್ಲಿದೆ. ಹಾಡ್ಯದಿಂದ ಬೆಟ್ಟದಪುರ ಭಾಗದ 303 ಹಳ್ಳಿಗಳಿಗೆ ಕುಡಿಯುವ ನೀರನ್ನು ಒದಗಿಸುವ ಯೋಜನೆ ಪ್ರಗತಿಯಲ್ಲಿದೆ ಎಂದು ಮಾಹಿತಿ ನೀಡಿದರು. ಮೈಸೂರು ಸ್ವಚ್ಛ ನಗರಿ ಎಂದು ಹೆಸರಾಗಿದ್ದು, ಇದನ್ನು ಕಾಪಾಡಿಕೊಳ್ಳಬೇಕು. ಸ್ಲಂ ಬೋರ್ಡ್ ವತಿಯಿಂದ ಅಲರ್ಟ್ ಆಗಿರುವವರು ಅಲ್ಲಿಗೆ ಶಿಫ್ಟ್ ಆಗಬೇಕು. ಸ್ಲಂ ಬೋರ್ಡ್ ವತಿಯಿಂದ ನಿರ್ಮಿಸಿರುವ ಮನೆಗಳಲ್ಲಿ ಕೆಲವರು ಅನಧಿಕೃತವಾಗಿ ಇದ್ದಾರೆ. ಕೆಲವರು ಮನೆ ಬಾಡಿಗೆ ನೀಡಿದ್ದಾರೆ ಈ ಬಗ್ಗೆ ಅಧಿಕಾರಿಗಳು ಪರಿಶೀಲನೆ ನಡೆಸಿ ಅರ್ಹರಿಗೆ ಸೌಲಭ್ಯ ಒದಗಿಸುವಂತೆ ಸ್ಲಂ ಬೋರ್ಡ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಈ ಬಾರಿ ಮುಂಗಾರು ಮತ್ತು ಹಿಂಗಾರು ಮಳೆ ಕೊರತೆ ಆಗಿದೆ. ಪೂರ್ಣ ಜಿಲ್ಲೆಯನ್ನು ಬರಪೀಡಿತ ಎಂದು ಘೋಷಿಸಲಾಗಿದೆ. ರೈತರಿಗೆ ಬರ ಪರಿಹಾರವನ್ನು ಆದಷ್ಟು ಬೇಗ ನೀಡಬೇಕು.

ಹುಣಸೂರಿನ ಧರ್ಮಾಪುರ ಹಾಗೂ ಹಿರಿಕ್ಯಾತನಹಳ್ಳಿಯಲ್ಲಿ ಸ್ಟೇಟ್ ಬ್ಯಾಂಕ್ ಇಂಡಿಯಾದ ಬ್ರಾಂಚ್‌ಗಳನ್ನು ತೆರೆಯಬೇಕು. ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ಉತ್ತಮ ಸ್ಥಾನ ಬರಬೇಕು. ಈ ನಿಟ್ಟಿನಲ್ಲಿ ಉತ್ತಮ ಬೋಧನೆ ನೀಡಬೇಕು ಎಂದು ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಿಗೆ ಸೂಚನೆ ನೀಡಿದರು. ಜಿಲ್ಲಾಧಿಕಾರಿಗಳಾದ ಡಾ. ಕೆ.ವಿ.ರಾಜೇಂದ್ರ ಅವರು ಮಾತನಾಡಿ ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಕಾರ್ಡ್‌ಗಳನ್ನು ಇಲ್ಲಿಯವರೆಗೆ 25 ಲಕ್ಷ ಕಾರ್ಡ್ ವಿತರಣೆ ಮಾಡಬೇಕಿತ್ತು ಆದರೆ 7.6 ಲಕ್ಷ ಕಾರ್ಡ್ ವಿತರಣೆ ಮಾಡಲಾಗಿದೆ. ನಿಗದಿತ ಗುರಿ ತಲುಪಲು ಆರೋಗ್ಯ ಇಲಾಖೆಯ ಅಧಿಕಾರಿಗಳು ಕಾರ್ಯ ನಿರ್ವಹಿಸಬೇಕು. ಗ್ರಾಮ ಒನ್ ಕೇಂದ್ರಗಳು, ಆರೋಗ್ಯ ಕೇಂದ್ರಗಳಲ್ಲಿ ವಿತರಣೆ ಮಾಡಲಾಗುತ್ತಿದೆ. ಆರೋಗ್ಯ ಮಿತ್ರರನ್ನು ಆಸ್ಪತ್ರೆಗಳಿಗೆ ನೀಡಲಾಗಿದೆ ಎಂದರು.

ನೋಟಿಫೈ ಆಗದೆ ಇರುವ ಹಲವು ಕೊಳಗೇರಿಗಳು ಇದ್ದು ಇದನ್ನು ಸರ್ವೇ ಮಾಡಿ. ಇವರಿಗೆ ಸ್ಲಂ ಬೋರ್ಡ್ ವತಿಯಿಂದ ಮನೆಗಳನ್ನು ನಿರ್ಮಾಣ ಮಾಡಿ ನೀಡುವ ವ್ಯವಸ್ಥೆ ಮಾಡಲಾಗುವುದು. ಬರ ಪರಿಹಾರವನ್ನು ನೀಡಲು 69 ಕೋಟಿ ಪರಿಹಾರವನ್ನು ನೀಡುವಂತೆ ವರದಿ ಸಲ್ಲಿಸಲಾಗಿದೆ. ಸರ್ಕಾರದಿಂದ 20 ಕೋಟಿ ಅನುಧಾನ ನೀಡಲಾಗಿದೆ. ಬೆಳೆ ಹಾನಿಯನ್ನು ರೈತರು ಫ್ರೂಟ್ ಐಡಿಯಲ್ಲಿ ನೋಂದಣಿ ಮಾಡಬೇಕು. ನೋಂದಣಿ ಪ್ರಗತಿಯಲ್ಲಿದೆ ಎಂದು ಮಾಹಿತಿ ನೀಡಿದರು.

ಮೈಸೂರು ಮಿತ್ರ ಬುಧವಾರ 29 ನವೆಂಬರ್ 2023

ವಿ.ಬಾಡಗ ಕೌಟುಂಬಿಕ ಹಾಕಿ ಪಂದ್ಯಾವಳಿಗೆ ಚಾಲನೆ

ಕೊಡವರು ಹಾಕಿ ಕ್ರೀಡೆಯನ್ನು ನಿರ್ಲಕ್ಷಿಸಬೇಡಿ

ಕೊಡವ ಹಾಕಿ ಅಕಾಡೆಮಿ ಅಧ್ಯಕ್ಷ ಪಾಂಡಂಡ ಕೆ.ಬೋಪಣ್ಣ ಸಲಹೆ

ಪೊನ್ನಂಪೇಟೆ, ನ.28– ರಾಷ್ಟ್ರೀಯ ಹಾಕಿ ತಂಡದಲ್ಲಿ ಕೊಡಗಿನ ಆಟಗಾರರ ಸಂಖ್ಯೆ ಕಡಿಮೆಯಾಗುತ್ತಿದೆ. ಇದು ಹೀಗೆ ಮುಂದುವರೆದರೆ ಹಾಕಿ ತವರಾದ ಕೊಡಗಿನ ಹೆಗ್ಗಳಿಕೆಗೆ ಹಿನ್ನಡೆಯಾಗುತ್ತದೆ. ಆದ್ದರಿಂದ ಕೊಡವರು ಯಾವುದೇ ಕಾರಣಕ್ಕೂ ಹಾಕಿಯನ್ನು ನಿರ್ಲಕ್ಷಿಸಬಾರದು ಎಂದು ಕೊಡವ ಹಾಕಿ ಅಕಾಡೆಮಿ ಅಧ್ಯಕ್ಷ ಪಾಂಡಂಡ ಕೆ.ಬೋಪಣ್ಣ ಸಲಹೆ ನೀಡಿದರು.

ಬಿಟ್ಟಂಗಾಲ ಸಮೀಪದ ವಿ.ಬಾಡಗದ ಹೈಫ್ಲೈಯರ್ಸ್ ಸಂಸ್ಥೆ ವತಿಯಿಂದ ಸ್ಥಳೀಯ ಸರ್ಕಾರಿ ಮಾದರಿ ಪ್ರಾಥಮಿಕ ಶಾಲಾ ಮೈದಾನದಲ್ಲಿ ಮಂಗಳವಾರ ನಡೆದ ವಿರಾಜಪೇಟೆ ತಾಲೂಕಿನ ಬೇರಳಿನಾಡು, ಕುತ್ತುನಾಡು ಮತ್ತು ಬೊಟ್ಟಿಯತ್ ನಾಡು ವ್ಯಾಪ್ತಿಯ 2ನೇ ವರ್ಷದ ಕೊಡವ ಕೌಟುಂಬಿಕ ಹಾಕಿ ಪಂದ್ಯಾವಳಿ 'ಹೈಫ್ಲೈಯರ್ಸ್ ಕಪ್–2023' ಉದ್ಘಾಟಿಸಿ ಮಾತನಾಡಿದ ಅವರು, ಹಾಕಿ ಬಗ್ಗೆ ಕೊಡವರು ಆಸಕ್ತಿ ವಹಿಸದಿದ್ದಲ್ಲಿ ಅದಕ್ಕೆ ಭವಿಷ್ಯವಿಲ್ಲ. ಕೊಡವರ ಹೆಗ್ಗಳಿಕೆಗಳಿಗೆ ಒಂದು ಗರಿ ಮೂಡಿಸುವಲ್ಲಿ ಹಾಕಿ ಪಾತ್ರವೂ ಬಹಳಷ್ಟಿದೆ.



ಆದ್ದರಿಂದ ಕೊಡಗಿನ ನೈಜ ಹಾಕಿ ಆಟಗಾರರನ್ನು ರೂಪಿಸಲು ಕೆಳಮಟ್ಟದ ಶ್ರಮ ತೀರಾ ಅಗತ್ಯ ಎಂದರು.

ಹಾಕಿ ಕ್ರೀಡೆಗೆ ಕೊಡಗಿನ ಕೊಡುಗೆ ಅಪಾರ. ಕೊಡಗನ್ನು ಹೊರತುಪಡಿಸಿ ಹಾಕಿ ಇತಿಹಾಸ ಬರೆಯಲು ಸಾಧ್ಯವಿಲ್ಲ. ಕೊಡಗಿನಲ್ಲಿ ಹಾಕಿ ಕ್ರೀಡೆ ಆಳವಾಗಿ ಬೇರೂರುವಲ್ಲಿ ಹಿಂದಿನಿಂದಲೂ ಗ್ರಾಮೀಣ ಕ್ರೀಡಾಕೂಟಗಳು ಪ್ರಮುಖ ಪಾತ್ರ ವಹಿಸಿದೆ. ಹಾಕಿ ಅಸ್ತಿತ್ವವನ್ನು ಕಾಪಾಡಲು ಪ್ರತಿಯೊಬ್ಬ ಕೊಡವನ ಸಹಕಾರ ಅಗತ್ಯ ಎಂದರು.

ಅಂತಾರಾಷ್ಟ್ರೀಯ ಅಥ್ಲೆಟಿಕ್ ತಾರೆ ಮತ್ತು ಏಕಲವ್ಯ ಪ್ರಶಸ್ತಿ ವಿಜೇತ ತೀತಮಾಡ ಅರ್ಜುನ್ ದೇವಯ್ಯ ಮಾತನಾಡಿ, ಇಡೀ ಭಾರತ ಹಾಕಿ ತಂಡವನ್ನು ಮುನ್ನಡೆಸುವ ಸಾಮರ್ಥ್ಯ ಹೊಂದಿರುವ ಕೊಡವ ಹಾಕಿ ಆಟಗಾರರು ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಕೆಲವೊಂದು ಕಾರಣಗಳಿಂದ ಪರಿಣಿತ ಆಟಗಾರರಿಗೂ ಭಾರತ ತಂಡದಲ್ಲಿ ಅವಕಾಶ ದೊರೆಯುತ್ತಿಲ್ಲ. ಯಾವುದೇ ಅಡೆತಡೆಗಳಿದ್ದರೂ ಅವುಗಳೆಲ್ಲವನ್ನು ಮೆಟ್ಟಿನಿಂತು ಕೊಡಗಿನ ಆಟಗಾರರು ಭಾರತದ ಹಾಕಿ ತಂಡದಲ್ಲಿ ಸ್ಥಾನ ಪಡೆದು ದೇಶವನ್ನು ಪ್ರತಿನಿಧಿಸುವ ಕಾಲ ಮತ್ತೆ ಮರುಕಳಿಸಲಿದೆ. ಈ ಕುರಿತು ಎಲ್ಲರೂ ಆಶಾವಾದಿಗಳಾಗಿರಬೇಕು ಎಂದು ಕಿವಿಮಾತು ಹೇಳಿದರು.

ಮುಖ್ಯ ಅತಿಥಿ ಸಿಎನ್‌ಸಿ ಅಧ್ಯಕ್ಷ ನಂದಿನೆರವಂಡ ಯು.ನಾಚಪ್ಪ ಮಾತನಾಡಿದರು. ಇದಕ್ಕೂ ಮೊದಲು ಹೈಫ್ಲೈಯರ್ಸ್ ಕಪ್–2023ರ ವಿಜೇತರಿಗೆ ನೀಡಲಾಗುವ ಆಕರ್ಷಕ ಟ್ರೋಫಿಗಳನ್ನು ಅರ್ಜುನ್ ದೇವಯ್ಯ ವೇದಿಕೆಯಲ್ಲಿ ಅನಾವರಣಗೊಳಿಸಿದರು. ಎನ್.ಯು.ನಾಚಪ್ಪ ಸಮಾರಂಭವನ್ನು ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿದರು.

ಹಾಕಿ ಕೂರ್ಗ್ ಸಂಸ್ಥೆ ಅಧ್ಯಕ್ಷ ಪಳಂಗಂಡ ಲವಕುಮಾರ್, ಕಾಫಿ ಬೆಳೆಗಾರ ಕೊಲ್ಲಿರ ಬೋಪಣ್ಣ ಎಸ್‌ಡಿಎಂಸಿ ಅಧ್ಯಕ್ಷ ಕಂಜಿತಂಡ ಗಿಣಿ ಮೊಣ್ಣಪ್ಪ, ವಿ.ಬಾಡಗ ಸರ್ಕಾರ ಮಾದರಿ ಪ್ರಾಥಮಿಕ ಶಾಲೆ ಮುಖ್ಯ ಶಿಕ್ಷಕಿ ಕೆ.ಸಿ.ಗೀತಾಂಜಲಿ, ಹೈಫ್ಲೈಯರ್ಸ್ ಸಂಸ್ಥೆ ಸಲಹಾ ಸಮಿತಿ ಅಧ್ಯಕ್ಷ ಮಳವಂಡ ಗಿರೀಶ್ ಮುದ್ದಯ್ಯ, ಪಂದ್ಯಾವಳಿ ನಿರ್ದೇಶಕರಾದ ಕುಪ್ಪಂಡ ದಿಲನ್ ಬೋಪಣ್ಣ ಇತರರಿದ್ದರು.

ಉದಯೋನ್ಮುಖ ಗಾಯಕ ಮಾಳೇಟಿರ ಅಜಿತ್ ಪೂವಣ್ಣ ಪ್ರಾರ್ಥಿಸಿದರು. ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ವಿ.ಬಾಡಗ ಹೈಫ್ಲೈಯರ್ಸ್ ಸಂಸ್ಥೆ ಅಧ್ಯಕ್ಷ ಅಮ್ಮಣಿಚಂಡ ರಂಜಿ ಪೂಣಚ್ಚ ಸ್ವಾಗತಿಸಿದರು. ಹಿರಿಯ ವೀಕ್ಷಕ ವಿವರಣೆಗಾರ ಮಾಳೇಟಿರ ಶ್ರೀನಿವಾಸ್ ಕಾರ್ಯಕ್ರಮ ನಿರೂಪಿಸಿದರು. ಅಮ್ಮಣಿಚಂಡ ರೋಹಿತ್ ವಂದಿಸಿದರು.

ಇಂದಿನ ಪಂದ್ಯಗಳ ವಿವರ

ಪಂದ್ಯ	ಸಮಯ
ಮನೆಯಪಂಡ ಮತ್ತು ಕರ್ತಮಾಡ	ಬೆಳಗ್ಗೆ 9.30ಕ್ಕೆ
ಕೊಲ್ಲಿರ ಮತ್ತು ಕೊಂಗಂಡ	ಬೆಳಗ್ಗೆ 10.30ಕ್ಕೆ
ಕೋಲತಂಡ ಮತ್ತು ಗುಮ್ಮಟ್ಟೀರ	ಬೆಳಗ್ಗೆ 11.30ಕ್ಕೆ
ಸಣ್ಣುವಂಡ ಮತ್ತು ಕುಪ್ಪಂಡ	ಮಧ್ಯಾಹ್ನ 1ಕ್ಕೆ
ಚೊಟ್ಟೆಪಂಡ ಮತ್ತು ಚೇಂದಿರ	ಮಧ್ಯಾಹ್ನ 2.30ಕ್ಕೆ.

ವಿ.ಬಾಡಗ ಹೈಫ್ಲೈಯರ್ಸ್ ಕಪ್: 4 ತಂಡಗಳ ಮುನ್ನಡೆ



ಪೊನ್ನಂಪೇಟೆ, ನ.28– ವಿ.ಬಾಡಗದ ಸರ್ಕಾರಿ ಮಾದರಿ ಪ್ರಾಥಮಿಕ ಶಾಲಾ ಮೈದಾನದಲ್ಲಿ ನಡೆಯುತ್ತಿರುವ ಹೈಫ್ಲೈಯರ್ಸ್ ಕಪ್ ಕೊಡವ ಕೌಟುಂಬಿಕ ಹಾಕಿ ಪಂದ್ಯಾವಳಿಯಲ್ಲಿ ನಾಲ್ಕು ತಂಡಗಳು ಮುನ್ನಡೆ ಸಾಧಿಸಿವೆ.

ಮಂಗಳವಾರ ಆಟವಾಡಿದ ಅಮ್ಮಣಿಚಂಡ, ಚೊಟ್ಟೆಪಂಡ, ಮೇಚಿಯಂಡ ಮತ್ತು ಚಂದೂರ ತಂಡಗಳು ಎದುರಾಳಿಗಳನ್ನು ಮಣಿಸಿ ಮುಂದಿನ ಹಂತಕ್ಕೆ ಪ್ರವೇಶಿಸಿತು.

ಮೊದಲ ಪಂದ್ಯದಲ್ಲಿ ಅಮ್ಮಣಿಚಂಡ ತಂಡ ನಾಮೇರ ತಂಡವನ್ನು 6–2 ಗೋಲುಗಳಿಂದ ಮಣಿಸಿತು. ತಂಡದ ಪರ ವಿಘ್ನೇಶ್ 3, ಅತಿಥಿ ಆಟಗಾರ ದಿವಾನ್, ಸಂಜು ಮತ್ತು ಬೆನ್ನಿ ತಲಾ ಒಂದೊಂದು ಗೋಲು ಹೊಡೆದರು. ನಾಮೇರ ತಂಡದ ಪರ ಅತಿಥಿ ಆಟಗಾರ ಬಿಪಿನ್ 2 ಗೋಲು ದಾಖಲಿಸಿದರು. 2ನೇ ಪಂದ್ಯದಲ್ಲಿ ಚೊಟ್ಟೆ ಪಂಡ ತಂಡ ಮಳವಂಡ ತಂಡವನ್ನು 3–2 ಗೋಲುಗಳಿಂದ ಸೋಲಿಸಿತು. ವಿಜೇತ ತಂಡದ ಪರವಾಗಿ ಅತಿಥಿ ಆಟಗಾರ ಜೀವನ್ 2 ಮತ್ತು ಸೋಮಣ್ಣ ಒಂದು ಗೋಲು ಬಾರಿಸಿದರೆ, ಪರಾಜಿತ ತಂಡದ ಪರ ಅತಿಥಿ ಆಟಗಾರ ಅಖಿಲ್ 2 ಗೋಲು ದಾಖಲಿಸಿದರು.

3ನೇ ಪಂದ್ಯದಲ್ಲಿ ಮೇಚಿಯಂಡ ತಂಡ ಅಮ್ಮೆಕಂಡ ತಂಡವನ್ನು 5–2 ಗೋಲುಗಳಿಂದ ಪರಾಭವಗೊಳಿಸಿತು. ವಿಜೇತ ತಂಡದ ಪರ ಸೂರಜ್ 3, ಪೃಥ್ವಿ ಮತ್ತು ಅತಿಥಿ ಆಟಗಾರ ಜಗತ್ ತಲಾ ಒಂದೊಂದು ಗೋಲು ಬಾರಿಸಿದರೆ, ಪರಾಜಿತ ತಂಡದ ಪರ ಅತಿಥಿ ಆಟಗಾರ ಮಿಥುನ್ 2 ಗೋಲು ಬಾರಿಸಿದರು. ಕೊನೆ ಪಂದ್ಯದಲ್ಲಿ ಚಂದೂರ ತಂಡ ಕಂಜಿತಂಡ ತಂಡವನ್ನು 4–0 ಗೋಲುಗಳಿಂದ ಸೋಲಿಸಿ ಮುಂದಿನ ಹಂತ ಪ್ರವೇಶಿಸಿತು. ಚಂದೂರ ತಂಡದ ಪರ ಸುರೇಶ್ ಗಣಪತಿ ಮತ್ತು ಶ್ಯಾಮ್ ಸೋಮಣ್ಣ ತಲಾ 2 ಗೋಲು ಬಾರಿಸಿ ತಂಡದ ವಿಜಯದಲ್ಲಿ ನಿರ್ಣಾಯಕ ಪಾತ್ರ ವಹಿಸಿದ್ದರು.

ಲೋಕಸಭಾ ಚುನಾವಣೆಯಲ್ಲಿ 28 ಕ್ಷೇತ್ರಗಳಲ್ಲೂ ಗೆಲುವು

ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ವಿಶ್ವಾಸ



ಮಡಿಕೇರಿ, ನ.28– ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ, ಜೆಡಿಎಸ್ ಪಕ್ಷಗಳು ರಾಜ್ಯದ 28 ಕ್ಷೇತ್ರಗಳಲ್ಲೂ ಗೆಲುವು ಸಾಧಿಸಲಿವೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ವಿಶ್ವಾಸ ವ್ಯಕ್ತಪಡಿಸಿದರು.

ಖಾಸಗಿ ಕಾರ್ಯಕ್ರಮ ನಿಮಿತ್ತ ಮಡಿಕೇರಿಗೆ ಆಗಮಿಸಿ ಮೇಕೇರಿ ಸಮೀಪದ ರೆಸಾರ್ಟ್‌ನಲ್ಲಿ ಕೊಡಗು ಜಿಲ್ಲಾ ಜೆಡಿಎಸ್ ಪ್ರಮುಖರು ಮತ್ತು ಕಾರ್ಯಕರ್ತರ ಜೊತೆ ಸಮಾಲೋಚನೆ ನಡೆಸಿದ ಕುಮಾರಸ್ವಾಮಿ, ಮುಂಬರುವ ಲೋಕಸಭಾ ಚುನಾವಣೆಗೆ ತಯಾರಿ, ಪಕ್ಷ ಸಂಘಟನೆ, ನೂತನ ಜಿಲ್ಲಾಧ್ಯಕ್ಷರ ನೇಮಕ, ವಿಧಾನಸಭಾ ಚುನಾವಣೆಯಲ್ಲಿ ಪಕ್ಷ ಪಡೆದ ಮತಗಳು, ಹಾಲಿ ಶಾಸಕರ ಕಾರ್ಯವೈಖರಿ ಸಹಿತ ವಿವಿಧ ವಿಚಾರಗಳ ಕುರಿತು ಸುದೀರ್ಘ ಚರ್ಚೆ ನಡೆಸಿದರು.

ಈ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಕ್ಷದ ಕಾರ್ಯಕರ್ತರ ಸಭೆ ನಡೆಸಲು ಬಂದಿದ್ದೇನೆ. ಪಕ್ಷ ಸಂಘಟನೆಯಲ್ಲಿ ಸ್ವಲ್ಪ ಕೊರತೆ ಇದೆ. ನಮ್ಮ ಶಕ್ತಿ ಕಡಿಮೆಯಾದ ಕಾರಣ ಜಿಲ್ಲೆಯ 2 ವಿಧಾನಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆದ್ದಿದೆ. ಹಾಗಾಗಿ ಜಿಲ್ಲೆಯಲ್ಲಿ ಪಕ್ಷ ಸಂಘಟನೆಯಾಗಬೇಕಿದೆ ಎಂದರು. ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ಪಕ್ಷ ಸಂಘಟನೆ ಮಾಡಬೇಕಿದೆ. ರಾಜ್ಯ ಕಾಂಗ್ರೆಸ್ ಸರ್ಕಾರದ ಬಗ್ಗೆ ಜನರಿಗೆ ಅಸಮಾಧಾನವಿದ್ದು, ಮತ್ತೆ ಮೈತ್ರಿ ಸರ್ಕಾರ ಬರಬೇಕೆನ್ನುವ ನಿರೀಕ್ಷೆ ಜನರಲ್ಲಿದೆ ಎಂದರು.

ಕಾಂಗ್ರೆಸ್ ಸರ್ಕಾರದ ಗ್ಯಾರಂಟಿಗಳ ಬಗ್ಗೆ ಪ್ರತಿಕ್ರಿಯಿಸಿದ ಕುಮಾರಸ್ವಾಮಿ, ಗ್ಯಾರಂಟಿ ಯೋಜನೆಗಳಲ್ಲಿ ಹಲವು ದೋಷಗಳಿವೆ ಎಂದು ಆರೋಪಿಸಿದರು. ಮುಖ್ಯಮಂತ್ರಿಗಳ ಜನತಾ ದರ್ಶನ ಕುರಿತು ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು ಸಿಎಂ ಜನಸ್ಪಂದನಾ ಕಾರ್ಯಕ್ರಮ ಮಾಡುತ್ತಿರುವುದು ಮೆಚ್ಚುವ ವಿಚಾರ. ಜನರ ಸಮಸ್ಯೆಗಳ ಗ್ರೌಂಡ್ ರಿಯಾಲಿಟಿ ಸಿಎಂಗೆ ಅರ್ಥ ಆಗಿರಬಹುದು. ನಾನು ಜನತಾ ದರ್ಶನ ಮಾಡಿದಾಗ ಇದ್ದಂತಹ ಸಮಸ್ಯೆಗಳು ಈಗಲೂ ಇದೆ ಎಂದರು.

ಮಂಡ್ಯದಲ್ಲಿ ನಡೆದ ಭ್ರೂಣ ಹತ್ಯೆ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, ಭ್ರೂಣ ಹತ್ಯೆ ಅಮಾನವೀಯ ಘಟನೆಯಾಗಿದೆ. ಈ ಸಂಬಂಧ ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಸರ್ಕಾರವನ್ನು ಆಗ್ರಹಿಸಿದರು. ಈ ವೇಳೆ ಮಾಜಿ ಸಚಿವ ಸಾ.ರಾ. ಮಹೇಶ್, ಮಾಜಿ ಶಾಸಕ ಕೆ.ಮಹದೇವ್, ನಗರಸಭಾ ಸದಸ್ಯ ಮುಸ್ತಾಫ, ಜಿಲ್ಲಾ ಯುವ ಜೆಡಿಎಸ್ ಅಧ್ಯಕ್ಷ ಸಿ.ಎಲ್. ವಿಶ್ವ ಪ್ರಮುಖರಾದ ಮನ್ಸೂರ್ ಅಲಿ, ಅಣ್ಣಾ ಶರೀಫ್, ಜಾಶೀರ್, ರವಿ ಕಿರಣ್, ಗೌತಮ್ ಸೇರಿದಂತೆ ಮತ್ತಿತರರಿದ್ದರು.

ಕೊಡವ ಪ್ರೀಮಿಯರ್ ಲೀಗ್ ಹೊನಲು ಬೆಳಕಿನ ಕ್ರಿಕೆಟ್ ಪಂದ್ಯಾವಳಿ

ಮೈಸೂರು ಮಕ್ಕ ತಂಡ ಚಾಂಪಿಯನ್



ವಿರಾಜಪೇಟೆ, ನ.28– ಕೊಡವ ಸ್ಪೋರ್ಟ್ಸ್ ಅಸೋಷಿಯೇಷನ್ ವತಿಯಿಂದ ವಿರಾಜಪೇಟೆಯ ಸಂತ ಅನ್ನಮ್ಮ ಕಾಲೇಜು ಮೈದಾನದಲ್ಲಿ ನಡೆದ ಕೊಡವ ಪ್ರೀಮಿಯರ್ ಲೀಗ್‌ನ 2ನೇ ಆವೃತ್ತಿಯ ಹೊನಲು ಬೆಳಕಿನ ಕ್ರಿಕೆಟ್ ಪಂದ್ಯಾವಳಿಯಲ್ಲಿ ಮೈಸೂರು ಮಕ್ಕ ತಂಡ ಚಾಂಪಿಯನ್ ಪಟ್ಟ ಅಲಂಕರಿಸಿದ್ದು, ಟೀಮ್ ಕೈಮಡ ತಂಡ ರನ್ನರ್ಸ್ ಅಪ್ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿತು.

ಐಪಿಎಲ್ ಮಾದರಿ ಆಯೋಜಿಸಲಾಗಿದ್ದ ಪಂದ್ಯಾವಳಿಯಲ್ಲಿ ಒಟ್ಟು 12 ತಂಡಗಳು ಭಾಗವಹಿಸಿದ್ದವು. ಮೈಸೂರು ಮಕ್ಕ, ಕೊಡವ ಟ್ರೈಬ್ಸ್, ಕೊಡವ ರಾಯಲ್ಸ್, ಬೆಂಗಳೂರು ಬಬ್ಬಂಗಾ, ಟೀಮ್ ಕೈಮಡ 2025, ಕೊಡವ ಬೀರಂಗಾ, ಅಂಜಿನಕೇರಿ ನಾಡ್ ಕೂಟ, ನಾಪೋಕ್ಲು ನರಿಯಾ, ಬೆಂಗಳೂರು ಟಸ್ಕರ್ಸ್, ಎಂಟಿಬಿ ರಾಯಲ್ಸ್, ಕೊಡವ ಕಡಾಸ್ ಮತ್ತು ಕರವಲೇ ಭಗವತಿ ತಂಡಗಳು ಪಂದ್ಯಾವಳಿಯಲ್ಲಿ ಭಾಗವಹಿಸಿದ್ದವು. 3 ದಿನ ನಡೆದ ಕ್ರಿಕೆಟ್ ಪಂದ್ಯಾವಳಿಯಲ್ಲಿ ಕೊನೆ ಹಂತಕ್ಕೆ 4 ತಂಡಗಳು ಲಗ್ಗೆ ಹಾಕಿದ್ದವು.

ಕೊಡವ ಟ್ರೈಬ್ಸ್ ತಂಡ ಮತ್ತು ಮೈಸೂರು ಮಕ್ಕ ತಂಡಗಳ ನಡುವೆ ನಡೆದ ಎಲಿಮಿನೇಟ್ ಪಂದ್ಯಾಟದಲ್ಲಿ ಮೈಸೂರು ಮಕ್ಕ ತಂಡ 2 ವಿಕೆಟ್ ನಷ್ಟಕ್ಕೆ 24 ರನ್ ಗಳಿಸಿ 8 ವಿಕೆಟ್‌ಗಳಿಂದ ಜಯಗಳಿಸಿ ಫೈನಲ್ ಪ್ರವೇಶಿಸಿತು. ದ್ವಿತಿಯ ಎಲಿಮಿನೆಟ್ ಪಂದ್ಯಾಟದಲ್ಲಿ ಎಂಟಿಬಿ ರಾಯಲ್ಸ್ ತಂಡ ನಿಗದಿತ 6 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 45 ರನ್‌ಗಳಿಸಲು ಮಾತ್ರವೇ ಶಕ್ತವಾಯಿತು. ಎದುರಾಳಿ ತಂಡ ನೀಡಿದ ಗುರಿ ಬೆನ್ನತ್ತಿದ ಟೀಮ್ ಕೈಮಡ ತಂಡ ಯಾವುದೇ ವಿಕೆಟ್ ನಷ್ಟವಿಲ್ಲದೆ ನಿಗದಿತ ಓವರ್‌ಗಳಲ್ಲಿ ಗುರಿ ತಲುಪಿ ಫೈನಲ್ ಪ್ರವೇಶಿಸಿತು.

ಟೀಮ್ ಕೈಮಡ ಮತ್ತು ಮೈಸೂರು ಮಕ್ಕ ತಂಡಗಳ ನಡುವೆ ನಡೆದ ಫೈನಲ್ ಪಂದ್ಯದಲ್ಲಿ ಮೈಸೂರು ಮಕ್ಕ ನಿಗದಿತ 6 ಓವರ್‌ಗಳಲ್ಲಿ 2 ವಿಕೆಟ್ ನಷ್ಟಕ್ಕೆ 94 ರನ್ ಗಳಿಸಿತು. ನಂತರ ಬ್ಯಾಟಿಂಗ್ ಆರಂಭಿಸಿದ ಟೀಮ್ ಕೈಮಡ ತಂಡ 7 ವಿಕೆಟ್ ನಷ್ಟಕ್ಕೆ 65 ರನ್‌ಗಳಿಸಿ ಸೋಲನುಭವಿಸಿತು. ಮೈಸೂರು ಮಕ್ಕ ತಂಡ ಚಾಂಪಿಯನ್ ಪಟ್ಟ ಅಲಂಕರಿಸಿತು. ಚಾಂಪಿಯನ್ ಮೈಸೂರು ಮಕ್ಕ ತಂಡ ಆಕರ್ಷಕ ಟ್ರೋಫಿ ಮತ್ತು 1.50 ಲಕ್ಷ ನಗದು, ರನ್ನರ್ಸ್ ಅಪ್ ಟೀಮ್ ಕೈಮಡ ತಂಡಕ್ಕೆ ಟ್ರೋಫಿ ಮತ್ತು 75 ಸಾವಿರ ನಗದು, ತೃತೀಯ ಸ್ಥಾನಗಳಿಸಿದ ಟೀಮ್ ಕೊಡವ ಟ್ರೈಬ್ಸ್‌ಗೆ ಟ್ರೋಫಿ ಮತ್ತು 30 ಸಾವಿರ ನಗದು, ಹಾಗೂ 4ನೇ ಸ್ಥಾನ ಪಡೆದ ಎಂಟಿಬಿ ರಾಯಲ್ಸ್ ತಂಡಕ್ಕೆ ಆಕರ್ಷಕ ಟ್ರೋಫಿ ನೀಡಿ ಗೌರವಿಸಲಾಯಿತು. ಫೈನಲ್ ಪಂದ್ಯ ಪುರುಷೋತ್ತಮ, ಸರಣಿ ಪುರುಷೋತ್ತಮ ಮತ್ತು ಬೆಸ್ಟ್ ಬ್ಯಾಟ್ಸ್‌ಮನ್, ಬೆಸ್ಟ್ ಬೌಲರ್, ಬೆಸ್ಟ್ ಕೀಪರ್, ಬೆಸ್ಟ್ ಫೀಲ್ಡರ್ ಸೇರಿದಂತೆ ಕ್ರೀಡಾಪಟುಗಳಿಗೆ ವೈಯಕ್ತಿಕ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಯಿತು.

ಈ ವೇಳೆ ಕೊಡವ ಸ್ಪೋರ್ಟ್ಸ್ ಅಸೋಷಿಯೇಷನ್ ಸಂಸ್ಥೆ ಕಾರ್ಯದರ್ಶಿ ಓಡಿಕಂಡ ಮಾಚಯ್ಯ, ಚೆಕ್ಕೇರ ಕಾರ್ಯಪ್ಪ, ಮುಕ್ಕಾಟೀರ ದೀಪಕ್, ಕುಟ್ಟಂಡ ರಂಜನ್ ಕಾರ್ಯಪ್ಪ, ಸೇರಿದಂತೆ ವಿವಿಧ ತಂಡಗಳ ಮಾಲೀಕರು, ಕ್ರೀಡಾ ಪಟುಗಳು, ಕ್ರೀಡಾ ಪ್ರೇಮಿಗಳು ಹೆಚ್ಚಿನ ಸಂಖ್ಯೆಯಲ್ಲಿ ಹಾಜರಿದ್ದರು.

ಡಿ.1ರಂದು ನಗರದಲ್ಲಿ 'ಜನಶತ್ರು' ನಾಟಕ



ಚಾಮರಾಜನಗರ, ನ.28– ಇಬ್ಸೆನ್ ಅವಾರ್ಡ್ಸ್, ರಂಗ ಶಂಕರ ಹಾಗೂ ಶಾಂತಲಾ ಕಲಾವಿದರ ಸಹಯೋಗದಲ್ಲಿ ಹೆನ್ರಿಕ್ ಇಬ್ಸೆನ್ ಅವರ ಆಧರಿಸಿ 'ಜನಶತ್ರು' ನಾಟಕ ಪ್ರದರ್ಶನವನ್ನು ಡಿ.1 ರಂದು ನಗರದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಬೆಂಗಳೂರಿನ ರಂಗಶಂಕರದ ಎಸ್.ಸುರೇಂದ್ರನಾಥ್ ತಿಳಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಸಂಜೆ 7 ಗಂಟೆಗೆ ನಗರದ ಡಾ.ರಾಜಕುಮಾರ್ ರಂಗಮಂದಿರದಲ್ಲಿ 50 ನಿಮಿಷಗಳ ಈ ನಾಟಕದ ಪ್ರದರ್ಶನ ನಡೆಯಲಿದೆ. ಸ್ಥಳೀಯ ಸಮಸ್ಯೆಯನ್ನು ಬಿಂಬಿಸುವ ಕಥಾವಸ್ತುವನ್ನು ಜನಶತ್ರು ನಾಟಕ ಹೊಂದಿದೆ. ಜಿಲ್ಲೆಯ ಜನರು ಎದುರಿಸುತ್ತಿರುವ ಸಮಸ್ಯೆಯೊಂದನ್ನು ಕಲಾವಿದರು ಪ್ರಸ್ತುತಪಡಿಸಲಿದ್ದಾರೆ ಎಂದರು.

ರಂಗಶಂಕರ ಮತ್ತು ಹಿಬ್ಸೆನ್ ಅವಾರ್ಡ್ಸ್ ಇದೊಂದು ಅಭಿಯಾನವಾಗಿದ್ದು, ಬೆಂಗಳೂರು, ಮೈಸೂರು, ಹೆಗ್ಗೋಡು, ಮಂಗಳೂರು, ಚಾಮರಾಜನಗರ, ಸಿದ್ದಾಪುರಗಳಲ್ಲಿ ನಾಟಕ ನಡೆಯಲಿದೆ. ಸ್ಥಳೀಯ ನಾಟಕ ತಂಡಗಳ ಜೊತೆಯಾಗಿ ಆಯಾಯ ಭಾಗದಲ್ಲಿ ಜನರು ಎದುರಿಸುತ್ತಿರುವ ಸಮಸ್ಯೆಗಳನ್ನು ನಾಟಕ ರೂಪದಲ್ಲಿ ಹೇಳಲಾಗುತ್ತಿದೆ ಎಂದರು.

ರಂಗ ಕಲಾವಿದೆ ಚಿತ್ರಾ ಮಾತನಾಡಿ, ಶಾಂತಲಾ ಕಲಾವಿದರು ತಂಡ ತನ್ನ 50ನೇ ವರ್ಷವನ್ನು ಪೂರೈಸಿದ್ದು, ಸುವರ್ಣ ಸಂಭ್ರಮ ಆಚರಣೆ ಹೆಸರಿನಲ್ಲಿ 2022ರ ನವೆಂಬರ್‌ನಿಂದ 2023ರ ನವೆಂಬರ್ ತನಕ ನಾಟಕ ಹಾಗೂ ಇತರೆ ಕಾರ್ಯಕ್ರಮಗಳನ್ನು ನಡೆಸುತ್ತಿದೆ. ಜನಶತ್ರು ನಾಟಕ ಪ್ರಸ್ತುತ ಪಡಿಸುವ ಮೂಲಕ ವರ್ಷದ ಕಾರ್ಯಕ್ರಮ ಮುಕ್ತಾಯಗೊಳಿಸಲಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ರಂಗಕರ್ಮಿ ಕೆವೆಂಕಟರಾಜು, ಕಲಾವಿದರಾದ ಅಬ್ರಾಹಾಂ ಡಿ.ಸಿಲ್ವಾ, ಎಂ.ಲಿಂಗಪ್ಪ ಹಾಜರಿದ್ದರು.

ಕುಡಿಯುವ ನೀರಿನ ಪೂರೈಕೆಗೆ ಆದ್ಯತೆ ನೀಡಿ

ಸಭೆಯಲ್ಲಿ ಅಧಿಕಾರಿಗಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಸೂಚನೆ



ಚಾಮರಾಜನಗರ, ನ.28–ಜಿಲ್ಲೆಯಲ್ಲಿ ಕುಡಿಯುವ ನೀರಿಗೆ ತೊಂದರೆಯಾಗದಂತೆ ಅಧಿಕಾರಿಗಳು ಕ್ರಮ ವಹಿಸಬೇಕಾಗಿದ್ದು, ಈ ವಿಚಾರದಲ್ಲಿ ಯಾವುದೇ ಉದಾಸೀನ ಮಾಡಬಾರದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ಸೂಚನೆ ನೀಡಿದರು.

ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಮಂಗಳವಾರ ವಿವಿಧ ಇಲಾಖೆಯ ಅಧಿಕಾರಿಗಳೊಂದಿಗೆ ಬರ ನಿರ್ವಹಣೆ ಸಂಬಂಧ ಕುರಿತು ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕುಡಿಯುವ ನೀರಿನ ಸಮಸ್ಯೆ ತಲೆದೋರದಂತೆ ಅಧಿಕಾರಿಗಳು ನಿಗಾ ವಹಿಸಬೇಕು. ಜಿಲ್ಲೆಯ ಯಾವುದೇ ಭಾಗದಲ್ಲಿ ನೀರಿಗೆ ತೊಂದರೆ ಬಾರದಂತೆ ನೋಡಿಕೊಳ್ಳಬೇಕು. ಗ್ರಾಮ ಪಂಚಾಯಿತಿಗಳಲ್ಲಿರುವ ಹಣವನ್ನು ಕುಡಿಯುವ ನೀರಿನ ಸೌಲಭ್ಯಕ್ಕೆ ಬಳಸಲು ಆದ್ಯತೆ ನೀಡಬೇಕು. 15ನೇ ಹಣಕಾಸು, ಇನ್ನಿತರ ಯೋಜನೆಗಳಡಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಕಲ್ಪಿಸಬೇಕು ಎಂದು ತಿಳಿಸಿದರು.

ಕುಡಿಯುವ ನೀರಿನ ಸಮಸ್ಯೆಗಳ ಗ್ರಾಮಗಳನ್ನು ಪಟ್ಟಿ, ಬರ ಮುಗಿಯುವವರೆಗೆ ನೀರಿನ ಲಭ್ಯತೆಗೆ ಹೆಚ್ಚು ಮುತುವರ್ಜಿ ವಹಿಸಬೇಕು. ಕೊಳವೆ ಬಾವಿ, ಪರ್ಯಾಯ ವ್ಯವಸ್ಥೆಗಳ ಮೂಲಕ ನೀರು ಪೂರೈಸಬೇಕು. ಜಲಜೀವನ್ ಮಿಷನ್ ಕಾಮಗಾರಿ ಗುಣಮಟ್ಟದಿಂದ ನಡೆಯುವಂತೆ ಗಮನ ಹರಿಸಬೇಕು ಎಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

ನಗರ, ಪಟ್ಟಣ ಪ್ರದೇಶಗಳಲ್ಲೂ ಕುಡಿಯುವ ನೀರಿಗೆ ಕೊರತೆಯಾಗಬಾರದು. ಪಟ್ಟಣ ಮತ್ತು ಗ್ರಾಮಗಳಲ್ಲಿರುವ ಶುದ್ಧ ಕುಡಿಯುವ ನೀರಿನ ಘಟಕಗಳು ಸುಸ್ಥಿತಿಯಲ್ಲಿವೆಯೇ ಎಂದು ಪರೀಕ್ಷಿಸಬೇಕು. ಓವರ್‌ಹೆಡ್ ಟ್ಯಾಂಕ್‌ಗಳನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕು. ಅಧಿಕಾರಿಗಳು ಗ್ರಾಮಗಳಿಗೆ ಭೇಟಿ ನೀಡಿ, ಎಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆಯೋ ಅಲ್ಲಿ ಶೀಘ್ರ ಪರಿಹಾರಕ್ಕೆ ಮುಂದಾಗಬೇಕು. ಗ್ರಾಮಗಳ ಸ್ವಚ್ಛತೆಗೂ ಕ್ರಮ ತೆಗೆದುಕೊಳ್ಳಬೇಕು ಎಂದು ನಿರ್ದೇಶನ ನೀಡಿದರು.

ಶಾಸಕ ಸಿ.ಪುಟ್ಟರಂಗಶೆಟ್ಟಿ ಮಾತನಾಡಿ, ಪ್ರತಿ ಗ್ರಾಮ ಪಂಚಾಯಿತಿಯಲ್ಲೂ ಕನಿಷ್ಠ 20 ರಿಂದ 40 ಲಕ್ಷ ರೂ. ಅನುದಾನವಿದೆ. ಇದನ್ನು ಬಳಕೆ ಮಾಡಿ ನೀರಿನ ಸಮಸ್ಯೆ ಪರಿಹರಿಸಲು ಅವಕಾಶವಿದೆ. ಗ್ರಾಮ ಪಂಚಾಯಿತಿಯ ಅಧಿಕಾರಿಗಳು ನೀರಿನ ಸಮಸ್ಯೆ ಪರಿಹಾರಕ್ಕೆ ತ್ವರಿತ ಕ್ರಮವಹಿಸಬೇಕು. ಶುದ್ಧ ಕುಡಿಯುವ ನೀರಿನ ಘಟಕಗಳ ದುರಸ್ತಿಗೆ ಮುಂದಾಗಬೇಕು ಎಂದರು.

ಶಾಸಕ ಎ.ಆರ್.ಕೃಷ್ಣಮೂರ್ತಿ ಮಾತನಾಡಿ, ಜನಸಂಪರ್ಕ ಸಭೆಯಲ್ಲೂ ಜನರು ಕುಡಿಯುವ ನೀರಿನ ಸಮಸ್ಯೆಗಳನ್ನು ಮುಂದಿಟ್ಟಿದ್ದಾರೆ. ಜಲಜೀವನ್ ಮಿಷನ್ ಯೋಜನೆ ಕೈಗೊಂಡಿರುವ ಹಲವೆಡೆ ಪೈಪ್‌ಲೈನ್‌ಗಳು ಹಾಳಾಗಿರುವ ಬಗ್ಗೆ ವರದಿಯಾಗುತ್ತಿವೆ. ಈ ಕಾಮಗಾರಿಗಳು ತ್ವರಿತವಾಗಿ ಪೂರ್ಣಗೊಳಿಸಬೇಕಿದೆ. ದೊಡ್ಡ ಗ್ರಾಮಗಳಲ್ಲಿ ಮಾತ್ರವಲ್ಲ, ಸಣ್ಣಪುಟ್ಟ ಗ್ರಾಮಗಳಲ್ಲೂ ಪೂರ್ಣ ಪ್ರಮಾಣದಲ್ಲಿ ಕಾಮಗಾರಿ ಆಗಬೇಕು ಎಂದು ತಿಳಿಸಿದರು.

ನಂತರ ಕೃಷಿ, ತೋಟಗಾರಿಕೆ, ಕೆರೆ ನಿರ್ವಹಣೆ, ಉದ್ಯೋಗ ಖಾತರಿ ಯೋಜನೆ ಸೇರಿದಂತೆ ಇನ್ನಿತರ ಬರ ಪರಿಹಾರ ಸಂಬಂಧ ಕೈಗೊಂಡಿರುವ ಕ್ರಮಗಳನ್ನು ವಿವರವಾಗಿ ಪರಿಶೀಲಿಸಿದ ಜಿಲ್ಲಾ ಉಸ್ತುವಾರಿ ಸಚಿವರು, ಕೃಷಿ ಚಟುವಟಿಕೆಗಳಿಗೆ ಸಾಧ್ಯವಾದಷ್ಟು ನೀರಿನ ಪೂರೈಕೆ ಮಾಡಬೇಕು. ಪರ್ಯಾಯ ಕ್ರಮಗಳ ಮೂಲಕ ನೀರಿನ ವ್ಯವಸ್ಥೆ ಮಾಡಬೇಕು. ಮೇವು ಬೆಳೆಯಲು ಮೇವಿನ ಕಿಟ್‌ಗಳನ್ನು ಹೆಚ್ಚಿನ ಪ್ರಮಾಣದಲ್ಲಿ ವಿತರಿಸಬೇಕು ಎಂದು ಸೂಚಿಸಿದರು.

ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು, ಬಿಆರ್‌ಟಿ ಸಂರಕ್ಷಿತ ಪ್ರದೇಶದ ನಿರ್ದೇಶಕರು ಹಾಗೂ ಅರಣ್ಯ ಸಂರಕ್ಷಣಾಧಿಕಾರಿ ದೀಪಾ ಜೆ.ಕಂಟ್ರಾಕ್ಟರ್, ಉಪ ವಿಭಾಗಾಧಿಕಾರಿ ಮಹೇಶ್, ಜಿಪಂ ಉಪ ಕಾರ್ಯದರ್ಶಿ ಲಕ್ಷ್ಮಿ, ತಹಶೀಲ್ದಾರ್ ಬಸವರಾಜು, ವಿವಿಧ ಇಲಾಖೆಯ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಕುಡಿಯುವ ನೀರಿನ ಕಾಮಗಾರಿ ಸೇರಿದಂತೆ ಬರ ನಿರ್ವಹಣೆಯ ಯಾವುದೇ ಕೆಲಸದಲ್ಲಿ ಸಮಸ್ಯೆ ಇದ್ದರೆ ಅಧಿಕಾರಿಗಳು ಕೂಡಲೇ ನನ್ನ ಗಮನಕ್ಕೆ ತರಬೇಕು. ನರೇಗಾ ಯೋಜನೆಯಡಿ ಅಂತರ್ಜಲ ಮರುಪೂರಣ, ಇತರೆ ಕೆಲಸಗಳಿಗೆ ಅವಕಾಶವಿದೆ. ಜಲಜೀವನ್ ಮಿಷನ್ ಯೋಜನೆಯಡಿ ನಡೆಯುತ್ತಿರುವ ಕಾಮಗಾರಿಯನ್ನು ವೇಗಗೊಳಿಸಬೇಕು. ಫ್ರೂಟ್ಸ್ ತಂತ್ರಾಂಶ ನೋಂದಣಿ ಕಾರ್ಯ ಸಹ ಪ್ರಗತಿಯಾಗಬೇಕು.

– ಶಿಲ್ಪಾ ನಾಗ್, ಜಿಲ್ಲಾಧಿಕಾರಿ

ಜಾಗತಿಕ ಯುಗದಲ್ಲಿ ಭಾಷಾ ಶಿಕ್ಷಣ ಅನಿವಾರ್ಯ




ಚಾಮರಾಜನಗರ, ನ.28–ವಿದ್ಯಾರ್ಥಿಗಳಿಗೆ ಜಾಗತಿಕ ಯುಗದಲ್ಲಿ ಮಾತೃಭಾಷೆ ಕನ್ನಡ ಜೊತೆಯಲ್ಲಿ ಹಿಂದಿ, ಇಂಗ್ಲಿಷ್ ಭಾಷೆಯಲ್ಲಿ ಶಿಕ್ಷಣ ನೀಡುವುದು ಹಾಗೂ ಈ ಮೂರು ಭಾಷೆಯಲ್ಲಿ ಪಾಂಡಿತ್ಯ ಬೆಳೆಸಿ ಕೊಳ್ಳುವುದು ಬಹಳ ಅನಿವಾರ್ಯವಾಗಿದೆ ಎಂದು ವಿಧಾನ ಪರಿಷತ್ ಸದಸ್ಯ ಮರಿತಿಬ್ಬೇಗೌಡ ಹೇಳಿದರು.

ನಗರದ ಜಿಪಂ ಹಳೆಯ ಕೆಡಿಪಿ ಸಭಾಂಗಣದಲ್ಲಿ ಜಿಪಂ ಉಪನಿರ್ದೇಶಕರ ಕಚೇರಿ, ಶಾಲಾ ಶಿಕ್ಷಣ ಮತ್ತು ಸಾರಕ್ಷತಾ ಇಲಾಖೆ, ರಾಜ್ಯ ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ಜಿಲ್ಲಾ ಘಟಕ ಹಾಗೂ ರಾಜ್ಯ ಪ್ರೌಢಶಾಲಾ ಹಿಂದಿ ಭಾಷಾ ಸಹ ಶಿಕ್ಷಕರ ಸಂಘದ ಸಂಯುಕ್ತಾಶ್ರಯದಲ್ಲಿ ಜಿಲ್ಲಾ ಹಿಂದಿ ಶಿಕ್ಷಕರಿಗೆ ಆಯೋಜಿಸಿದ್ದ ಶೈಕ್ಷಣಿಕ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳ ಹಿತಚಿಂತನೆ ಬಯಸಿ ಹಾಗೂ ಶೈಕ್ಷಣಿಕ ಚಟುವಟಿಕೆಗೆ ಪೂರಕವಾಗಿ ಹಲವು ಕಾರ್ಯಕ್ರಮಗಳನ್ನು ರೂಪಿಸಿ ಪ್ರೌಢಶಾಲಾ ಸಹಶಿಕ್ಷಕರ ಸಂಘ ಮಾಡುತ್ತಿರುವ ಕೆಲಸ ಬಹಳ ಅತ್ಯಂತ ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಮಾತೃಭಾಷೆ ಕನ್ನಡ ಆದರೂ ಹಿಂದಿ, ಆಂಗ್ಲ ಭಾಷೆಯನ್ನು ಜಾಗತಿಕ ಯುಗದಲ್ಲಿ ಜ್ಞಾನಾರ್ಜನೆ ವೃದ್ಧಿಸಿಕೊಳ್ಳಬೇಕು. ಈ ಮೂರು ಭಾಷೆಯಲ್ಲಿ ಮಕ್ಕಳಿಗೆ ಶಿಕ್ಷಣ ಕೊಡುವುದು, ಪಾಂಡಿತ್ಯ ಬೆಳಸಿಕೊಳ್ಳುವುದು ಅನಿವಾರ್ಯ ಸಂಗತಿಯಾಗಿದೆ. ಭಾಷಾ ಶಿಕ್ಷಣದಲ್ಲಿ ಹಿಂದಿ ಭಾಷೆ ಮಾನವೀಯ ಮೌಲ್ಯಗಳು, ಸಂಸ್ಕಾರವನ್ನು ಮತ್ತು ಭಾಷೆಯಲ್ಲಿ ತಮ್ಮ ಜ್ಞಾನದ ಬೆಳವಣಿಗೆಯನ್ನು ರೂಢಿಸಿಕೊಳ್ಳಲು ಬಹಳ ಉಪಯುಕ್ತವಾಗಿದೆ. ಬೆಳಗಾವಿ ಅಧಿವೇಶನದಲ್ಲಿ ಬಡ್ತಿ ಶಿಕ್ಷಕರ ಸಮಸ್ಯೆ, ಹಳೆಯ ಪಿಂಚಣಿ ಪದ್ಧತಿ ಮುಂದುವರಿಸುವಂತೆ ಹಾಗೂ ಪದವಿಪೂರ್ವ ಶಿಕ್ಷಣ ಇಲಾಖೆಯ ಮೇಲುಸ್ತುವಾರಿಯನ್ನು ಜಿಪಂಗೆ ವಹಿಸುವಂತೆ ಒತ್ತಾಯಿಸಲಾಗುವುದು ಎಂದರು.

ರಾಜ್ಯ ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ವೀರಭದ್ರಸ್ವಾಮಿ, ಪತ್ರಕರ್ತರ ಸಂಘದ ಅಧ್ಯಕ್ಷ ದೇವರಾಜು, ದುಂಡು ಮಹದೇವ, ರಾಜ್ಯ ಪ್ರೌಢಶಾಲಾ ಹಿಂದಿ ಭಾಷಾ ಸಹ ಶಿಕ್ಷರ ಸಂಘ ಅಧ್ಯಕ್ಷ ನಾಗರಾಜು ಶರ್ಮಾ, ಸಂಘದ ಪ್ರಧಾನ ಕಾರ್ಯದರ್ಶಿ ಕಿರಣ್‌ರಾಜು, ಸಂಪನ್ಮೂಲ ವ್ಯಕ್ತಿ ವಾಸುದೇವಮೂರ್ತಿ ಹಾಜರಿದ್ದರು.

ಅಜ್ಜನ ಅಂತಿಮ ದರ್ಶನಕ್ಕೆ ತೆರಳುತ್ತಿದ್ದ ಮೊಮ್ಮಗ ಸಾವು



ಚಾಮರಾಜನಗರ, ನ.28–ತನ್ನ ಅಜ್ಜನ ಅಂತಿಮ ದರ್ಶನ ಪಡೆಯಲು ತೆರಳುತ್ತಿದ್ದ ವೈದ್ಯಕೀಯ ವಿದ್ಯಾರ್ಥಿಯಾದ ಮೊಮ್ಮಗ ರಸ್ತೆ ಅಪಘಾತದಲ್ಲಿ ಮೃತಪಟ್ಟಿರುವ ಘಟನೆ ತಾಲೂಕಿನ ಪಣ್ಯದಹುಂಡಿ ಕ್ರಾಸ್ ಬಳಿ ಮಂಗಳವಾರ ನಡೆದಿದೆ. ಮೂಲತಃ ಉಡುಪಿಯ ಚಾಮರಾಜನಗರ ಮೆಡಿಕಲ್ ಕಾಲೇಜಿನ ಎರಡನೇ ವರ್ಷದ ವಿದ್ಯಾರ್ಥಿ ನಿತೀಶ್ ಪೂಜಾರಿ ಮೃತ ಪಟ್ಟಿದ್ದು, ಈತ ತಮ್ಮ ಅಜ್ಜ ಮೃತಪಟ್ಟಿರುವ ವಿಚಾರ ತಿಳಿದು ಉಡುಪಿಗೆ ನಗರದಿಂದ ಬೈಕ್‌ನಲ್ಲಿ ತೆರಳುತ್ತಿದ್ದಾಗ ತಾಲೂಕಿನ ಪಣ್ಯದಹುಂಡಿ ಬಳಿ ನಿಯಂತ್ರಣ ತಪ್ಪಿ ಬಿದ್ದಿದ್ದಾನೆ. ಇದರಿಂದ ತೀವ್ರ ಗಾಯಗೊಂಡು ಸ್ಥಳದಲ್ಲೇ ಮೃತಪಟ್ಟಿದ್ದಾನೆ. ಚಾಮರಾಜನಗರ ಸಂಚಾರಿ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಸಂವಿಧಾನ ದೇಶದ ಸರ್ವಜನರ ಉಸಿರು

ಅಂಬೇಡ್ಕರ್ ಜಯಂತಿಯಲ್ಲಿ ಸಚಿವ ಕೆ.ವೆಂಕಟೇಶ್ ಅಭಿಮತ



ಚಾಮರಾಜನಗರ, ನ.28– ಡಾ.ಬಿ.ಆರ್. ಅಂಬೇಡ್ಕರ್ ಅವರು ರಚಿಸಿದ ಸಂವಿಧಾನ ದೇಶದ ಸರ್ವಜನರ ಉಸಿರಾಗಿದೆ. ಸಂವಿಧಾನದ ರಕ್ಷಣೆ ಎಲ್ಲರ ಜವಾಬ್ದಾರಿಯಾಗಿದ್ದು, ಅದಕ್ಕೆ ಎಲ್ಲರೂ ಬದ್ಧರಾಗಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಟೇಶ್ ತಿಳಿಸಿದರು.

ನಗರದ ಪೇಟೆ ಪ್ರೈಮರಿ ಶಾಲಾ ಆವರಣದಲ್ಲಿ ಮಂಗಳವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಸಹಯೋಗದಲ್ಲಿ ಆಯೋಜಿಸಿದ್ದ ಅಂಬೇಡ್ಕರ್ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಅಂಬೇಡ್ಕರ್ ಸಮಾಜದ ಎಲ್ಲಾ ವರ್ಗಗಳ ಶ್ರೇಯೋಭಿವೃದ್ಧಿ ಹಾಗೂ ಒಳಿತಿಗಾಗಿ ಸಂವಿಧಾನ ರಚಿಸಿದರು. ಸಂವಿಧಾನವಿಲ್ಲದೇ ಬದುಕು ಇಲ್ಲ. ಸಂವಿಧಾನದ ಆಶಯಗಳನ್ನು ಪ್ರತಿಯೊಬ್ಬರು ಅರಿತುಕೊಳ್ಳಬೇಕು. ಅಂಬೇಡ್ಕರ್ ಹೋರಾಟದಿಂದ ಬಂದ ಮಹಾನ್ ಶಕ್ತಿಯಾಗಿದ್ದಾರೆ ಎಂದು ಸ್ಮರಿಸಿದರು.


ಶಾಸಕ ಸಿ.ಪುಟ್ಟರಂಗಶೆಟ್ಟಿ ಮಾತನಾಡಿ, ಅಂಬೇಡ್ಕರ್ ಅವರ ಚಿಂತನೆ, ವಿಚಾರಧಾರೆ ಹಾಗೂ ಸಂವಿಧಾನದಲ್ಲಿ ಅಡಕಗೊಳಿಸಿರುವ ಮೂಲಭೂತ ಕರ್ತವ್ಯಗಳನ್ನು ಪ್ರತಿಯೊಬ್ಬರು ಅರಿತು ಇತರರಿಗೂ ಮನವರಿಕೆ ಮಾಡಬೇಕು. ಅಂಬೇಡ್ಕರ್ ಆಶಯದಂತೆ ಎಲ್ಲರೂ ಜ್ಞಾನಾರ್ಜನೆಯನ್ನು ಹೆಚ್ಚಿಸಿಕೊಳ್ಳಲು ಸರ್ಕಾರದ ವಿಶೇಷ ಅನುದಾನ ಬಳಸಿಕೊಂಡು ಜಿಲ್ಲೆಯ ಹಲವು ಗ್ರಾಮ ಪಂಚಾಯಿತಿಗಳಲ್ಲಿ ಪುಸ್ತಕ ಭಂಡಾರ (ಗ್ರಂಥಾಲಯ) ತೆರೆಯಲಾಗಿದೆ. ಅವುಗಳ ಸದ್ಬಳಕೆಯಾಗಬೇಕು ಎಂದರು.

ಶಾಸಕ ಎ.ಆರ್.ಕೃಷ್ಣಮೂರ್ತಿ ಮಾತನಾಡಿ, ಸಾಮಾಜಿಕ ನೆಲೆಗಟ್ಟಿನ ಆಧಾರದಲ್ಲಿ ಸಾಮಾಜಿಕ ನ್ಯಾಯ, ಅವಕಾಶಗಳು ಎಲ್ಲರಿಗೂ ಪರಿಪೂರ್ಣವಾಗಿ ದೊರೆಯುವುದು ಅಂಬೇಡ್ಕರ್ ಅವರ ಕನಸಾಗಿತ್ತು. ಎಲ್ಲಾ ವರ್ಗಗಳ ಏಳಿಗೆಗಾಗಿ ರಚನೆಯಾಗಿರುವ ಸಂವಿಧಾನದ ಉಳಿವಿಗೆ ಎಲ್ಲರೂ ಪ್ರಜ್ಞಾವಂತರಾಗಬೇಕು ಎಂದು ತಿಳಿಸಿದರು.

ಬರಹಗಾರರಾದ ಕಲಬುರಗಿಯ ಡಾ.ವಿಠ್ಠಲ್ ವಗ್ಗನ್ ಮಾತನಾಡಿ, ಅಂಬೇಡ್ಕರ್ ದೇಶದ ಎಲ್ಲಾ ಜನರಿಗೆ ಭವ್ಯಬದುಕು ಕಟ್ಟಿಕೊಟ್ಟ ಯುಗಪ್ರವರ್ತಕರಾಗಿದ್ದಾರೆ. ಜಾತೀಯತೆಯ ಚೆಸ್ಮಾ ಬದಿಗಿಟ್ಟು ಚಿಂತನೆ ಮಾಡಿದರೆ ಸಮಸಮಾಜಮುಖಿ ಅಂಬೇಡ್ಕರ್ ಎಲ್ಲರಿಗೂ ಅರ್ಥವಾಗಲಿದ್ದಾರೆ. ದೇಶದಲ್ಲಿ ಶೋಷಿತರ ಕತ್ತಲನ್ನು ತೊಡೆದು ಜ್ಞಾನದ ಹಣತೆ ಹಚ್ಚಿದ ಅಂಬೇಡ್ಕರ್ ಅವರನ್ನು ಧನಾತ್ಮಕವಾಗಿ ಅಧ್ಯಯನ ಮಾಡಬೇಕು. ಆಗಮಾತ್ರ ಪ್ರತಿಯೊಬ್ಬರು ಪ್ರಬುದ್ಧರಾಗಲಿದ್ದಾರೆ ಎಂದರು.

ತಿ.ನರಸೀಪುರದ ನಳಂದ ಬುದ್ಧ ವಿಹಾರದ ಬೋಧಿರತ್ನ ಬಂತೇಜಿ ಆಶೀರ್ವಚನ ನೀಡಿದರು. ವಿಧಾನ ಪರಿಷತ್ ಸದಸ್ಯರಾದ ಮರಿತಿಬ್ಬೇಗೌಡ, ಡಾ.ಡಿ.ತಿಮ್ಮಯ್ಯ, ಅಂಬೇಡ್ಕರ್ ಅವರ ಬಾಲ್ಯ ಜೀವನ, ಸಾಧನೆ ಹಾಗೂ ಹೋರಾಟದ ಹಾದಿ, ಸಂವಿಧಾನದ ಮಹತ್ವ ಕುರಿತು ತಿಳಿಸಿದರು. ಜಿಲ್ಲಾಧಿಕಾರಿ ಶಿಲ್ಪಾ ನಾಗ್, ಸಂವಿಧಾನ ಪೀಠಿಕೆ ಬೋಧಿಸಿದರು. ನಗರಸಭಾ ಸದಸ್ಯೆ ಎಂ.ಕಲಾವತಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು, ಬಂಡೀಪುರದ ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದ ಉಪ ಅರಣ್ಯ ಸಂರಕ್ಷಣಾಧಿಕಾರಿ ದೀಪಾ ಜೆ.ಕಂಟ್ರಾಕ್ಟರ್, ಉಪವಿಭಾಗಾಧಿಕಾರಿ ಮಹೇಶ್, ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ ಲಕ್ಷ್ಮೀ, ನಗರಸಭೆ ಆಯುಕ್ತ ರಾಮದಾಸ್, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಮಲ್ಲಿಕಾರ್ಜುನ್, ತಹಶೀಲ್ದಾರ್ ಬಸವರಾಜು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಮ್ಯಾಕ್ಸಿ ಸ್ಫೋಟಕ ಶತಕ: ಆಸೀಸ್‌ಗೆ ಭರ್ಜರಿ ಜಯ



ಗುವಾಹಟಿ, ನ.28– ಗ್ಲೆನ್ ಮ್ಯಾಕ್ಸ್‌ವೆಲ್ ಅವರ ಸ್ಫೋಟಕ ಶತಕದ ನೆರವಿನಿಂದ ಆಸ್ಟ್ರೇಲಿಯಾ ಭಾರತದ ವಿರುದ್ಧ 5 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ. ಆ ಮೂಲಕ ಸರಣಿಯನ್ನು ಜೀವಂತವಾಗಿರಿಸಿದೆ.

ಇಲ್ಲಿನ ಬರ್ಸಾಪರಾ ಕ್ರೀಡಾಂಗಣದಲ್ಲಿ ನಡೆದ ಮೂರನೇ ಟಿ20 ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಭಾರತ 20 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ 222 ರನ್‌ಗಳ ಬೃಹತ್ ಮೊತ್ತ ದಾಖಲಿಸಿತು. ತಂಡದ ಮೊತ್ತ 24ರನ್ ಆಗುವಷ್ಟರಲ್ಲೇ 2 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತ್ತು. ಈ ವೇಳೆ 3ನೇ ವಿಕೆಟ್‌ಗೆ ಜೊತೆಯಾದ ನಾಯಕ ಸೂರ್ಯಕುಮಾರ್ ಯಾದವ್ ಹಾಗೂ ಋತುರಾಜ್ ಗಾಯಕ್ವಾಡ್ 65 ರನ್‌ಗಳ ಜೊತೆಯಾಟವಾಡಿ ಚೇತರಿಕೆ ನೀಡಿದರು. ಆದರೆ 39 ರನ್ ಗಳಿಸಿ ಆಡುತ್ತಿದ್ದ ಸೂರ್ಯಕುಮಾರ್ ಯಾದವ್ ನಿರ್ಗಮಿಸಿದರು. ಮತ್ತೊಂದೆಡೆ ಅಬ್ಬರದ ಬ್ಯಾಟಿಂಗ್ ಮಾಡಿದ ಋತುರಾಜ್ ಗಾಯಕ್ವಾಡ್ 57 ಎಸೆತಗಳಲ್ಲಿ 7 ಸಿಕ್ಸರ್, 13 ಬೌಂಡರಿ ಒಳಗೊಂಡ 123 ರನ್ ಗಳಿಸಿ ಅಜೇಯರಾಗಿ ಉಳಿದು ತಂಡದ ಮೊತ್ತವನ್ನು 200ರ ಗಡಿ ದಾಟಿಸಿದರು. ಉಳಿದಂತೆ ತಿಲಕ್ ವರ್ಮಾ 31, ಯಶಸ್ವಿ ಜೈಸ್ವಾಲ್ 6 ರನ್ ಗಳಿಸಿದರು. ಆಸೀಸ್ ಪರ ಕೇನ್ ಕೇನ್ ರಿಚರ್ಡ್ಸನ್, ಬೆಹ್ರೆನ್ಡಾರ್ಫ್ ಹಾಗೂ ಆರನ್ ಹಾರ್ಡಿ ಒಂದೊಂದು ವಿಕೆಟ್ ಪಡೆದರು.

223 ರನ್‌ಗಳ ಬೃಹತ್ ಗೆಲುವಿನ ಗುರಿ ಬೆನ್ನತ್ತಿದ ಆಸ್ಟ್ರೇಲಿಯಾ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 225 ರನ್ ಗಳಿಸಿ ಗೆಲುವಿನ ನಗೆ ಬೀರಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಟ್ರಾವಿಸ್ ಹೆಡ್ ಹಾಗೂ ಆರನ್ ಹಾರ್ಡಿ ಮೊದಲ ವಿಕೆಟ್‌ಗೆ 47 ರನ್ ಜೊತೆಯಾಟವಾಡುವ ಮೂಲಕ ಉತ್ತಮ ಆರಂಭ ಒದಗಿಸಿದರು. ಈ ವೇಳೆ ಆರನ್ ಹಾರ್ಡಿ 16 ಗಳಿಸಿ ನಿರ್ಗಮಿಸಿದರು. ಇನ್ನು ತಂಡದ ಮೊತ್ತ 66 ರನ್ ಆಗಿದ್ದ ವೇಳೆ ಟ್ರಾವಿಸ್ ಹೆಡ್ 35 ರನ್ ಗಳಿಸಿ ಔಟಾದರು. ನಂತರ ಬಂದ ಜೋಶ್ ಇಂಗ್ಲಿಸ್ ಸಹ 10 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಬಳಿಕ ಕ್ರೀಸ್‌ಗೆ ಆಗಮಿಸಿದ ಮಾರ್ಕಸ್ ಸ್ಟೋಯಿನಿಸ್ 17 ರನ್ ಗಳಿಸಿದರೇ, ಟೀಮ್ ಡೇವಿಡ್ ಶೂನ್ಯಕ್ಕೆ ವಿಕೆಟ್ ಒಪ್ಪಿಸಿದರು. ಒಂದೆಡೆ ವಿಕೆಟ್ ಬೀಳುತ್ತಿದ್ದರೂ ಮತ್ತೊಂದೆಡೆ ಅಬ್ಬರದ ಆಟವಾಡಿದ ಗ್ಲೆನ್ ಮ್ಯಾಕ್ಸ್‌ವೆಲ್ 48 ಎಸೆತಗಳಲ್ಲಿ ತಲಾ 8 ಬೌಂಡರಿ, ಸಿಕ್ಸರ್ ಒಳಗೊಂಡ 104 ರನ್ ಸಿಡಿಸಿ ತಂಡಕ್ಕೆ ಜಯ ತಂದುಕೊಟ್ಟರು. ಉಳಿದಂತೆ ನಾಯಕ ಮ್ಯಾಥ್ಯೂ ವೇಡ್ 28 ರನ್ ಗಳಿಸಿದರು. ಭಾರತದ ಪರ ರವಿ ಬಿಷ್ಣೋಯಿ 2, ಆವೇಶ್ ಖಾನ್, ಅಕ್ಷರ್ ಪಟೇಲ್, ಅರ್ಷದೀಪ್ ಸಿಂಗ್ ತಲಾ ಒಂದೊಂದು ವಿಕೆಟ್ ಉರುಳಿಸಿದರು. ಆಸೀಸ್ ಪರ ಮ್ಯಾಕ್ಸ್‌ವೆಲ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಒಂದನೇ ಪುಟದಿಂದ

ಮನೆಗಳ ನಲ್ಲಿಗಳಿಗೆ ಮೀಟರ್ ಅಳವಡಿಸಿ

ಕಳಪೆ ಗುಣಮಟ್ಟದ ರಸ್ತೆ ನೋಡುವ ಜನರು ಸಂಸದನಾದ ನನಗೆ ಹಾಗೂ ನರೇಂದ್ರ ಮೋದಿಗೆ ಬೈಯ್ಯುತ್ತಾರೆ ಎಂದು ಕಿಡಿಕಾರಿದರು. ನಗರದ ವಿದ್ಯಾರಣ್ಯಪುರಂನ ಸೂಯೇಜ್ ಫಾರಂ ಬಳಿ ಕಸ ತೆರವು ಮಾಡಲು ಟೆಂಡರ್ ಕರೆಯಲಾಗಿದೆ. ಕನಿಷ್ಟ 4 ಟನ್ ಕಸ ತೆರವು ಮಾಡಿರುವ ಗುತ್ತಿಗೆದಾರ ಟೆಂಡರ್‌ನಲ್ಲಿ ಭಾಗವಹಿಸಬೇಕು. ಆದರೆ ಗಲ್ಲಿ ಕಾ ಕುತ್ತಗಳು ಟೆಂಡರ್‌ನಲ್ಲಿ ಭಾಗವಹಿಸಿವೆ. ಇದರಿಂದ ಟೆಂಡರ್ ತೆರೆಯವುದು ವಿಳಂಬವಾಗಿದೆ ಎಂದು ತಿಳಿಸಿದರು. ಬಿಎಸ್‌ಎನ್‌ಎಲ್ ನೆಟ್‌ವರ್ಕ್ ಸ್ಲೋ ಇರುತ್ತೆ, ನೆಟ್‌ವರ್ಕ್ ಕೂಡ ಸಿಗಲ್ಲ, ನಾಟ್ ರೀಚಬಲ್ ಬೇರೆ ಎಂದು ವ್ಯಂಗ್ಯವಾಡಿದ ಪ್ರತಾಪ್ ಸಿಂಹ, ಮೈಸೂರಿನಲ್ಲಿ ಖಾಸಗಿ ಟೆಲಿಕಾಂ ಕಂಪನಿಗಳ ಟವರ್‌ಗಳಿರುವ ಕಾರಣ ಹೆಚ್ಚುವರಿ ಬಿಎಸ್‌ಎನ್‌ಎಲ್ ಟವರ್ ಗಳನ್ನು ಕೊಡಗಿಗೆ ಕೊಡಿ ಎಂದು ಬಿಎಸ್‌ಎನ್‌ಎಲ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸರ್ಕಾರದ ಅಧಿಕಾರಿಯಾಗಿ ಆಯ್ಕೆಯಾದ ನಂತರ ಬಹಳಷ್ಟು ಅಧಿಕಾರಿಗಳು ಮೈಸೂರಿಗೆ ನೇಮಕಗೊಳ್ಳುತ್ತಾರೆ. ತರುವಾಯ ತಮ್ಮ ಸೇವೆಯ ಅಷ್ಟೂ ವರ್ಷ ಮೈಸೂರಿನಲ್ಲೇ ಕಳೆದು ಇಲ್ಲೇ ನಿವೃತ್ತಿ ಕೂಡ ಹೊಂದುತ್ತಾರೆ. ಯಾವುದೇ ಕಾರಣಕ್ಕೂ ತಮ್ಮ ಸ್ಥಾನವನ್ನು ಬಿಟ್ಟು ಕದಲುವುದಿಲ್ಲ. ಅಷ್ಟರ ಮಟ್ಟಿಗೆ ಲಾಭ ಮಾಡಿಕೊಂಡು ಇಲ್ಲೇ ಇರುತ್ತಾರೆ ಎಂದು ಪ್ರತಾಪ್ ಸಿಂಹ ಟೀಕಿಸಿದರು.

ಹೆಸರಿನ ಅಕ್ಷರ ಬದಲಾವಣೆ ವಿಶೇಷವೇನಿಲ್ಲ: ಸಭೆಯ ನಂತರ ಪತ್ರಕರ್ತರ ಜೊತೆ ಮಾತನಾಡಿದ ಪ್ರತಾಪ್ ಸಿಂಹ, ತಮ್ಮ ಹೆಸರಿನ ಅಕ್ಷರ ಬದಲಾವಣೆ ಬಗ್ಗೆ ಪ್ರತಿಕ್ರಿಯೆ ನೀಡಿದರು. ಇಂಗ್ಲಿಷ್ ಮತ್ತು ಹಿಂದಿಯಲ್ಲಿ ಹೆಸರು ಬರೆಯುವಾಗ ಸಮಸ್ಯೆ ಯಾಗುತ್ತಿತ್ತು. ಹೀಗಾಗಿ ಕನ್ನಡದಲ್ಲಿ ಹೆಸರು ಇರುವಂತೆ ಯಥಾವತ್ತಾಗಿ ಇಂಗ್ಲಿಷ್‌ನಲ್ಲಿ ಬದಲಾವಣೆ ಮಾಡಿಕೊಂಡಿದ್ದೇನೆ ಅಷ್ಟೆ. ಆದರೆ ಇದು ಸಂಖ್ಯಾಶಾಸ್ತ್ರವಲ್ಲ. ನೀವು ಸಂಖ್ಯಾಶಾಸ್ತ್ರ ಎಂದು ತಿಳಿದರೆ ಸಂಖ್ಯಾಶಾಸ್ತ್ರ ಅಷ್ಟೇ ಎಂದು ಸ್ಪಷ್ಟಪಡಿಸಿದರು. ನನ್ನ ಹೆಸರಿನ ಅಕ್ಷರ ಬದಲಾವಣೆಗೂ, ಚುನಾವಣೆಗೂ ಯಾವುದೇ ಸಂಬಂಧವಿಲ್ಲ. ಅದೇ ಹೆಸರಿನಲ್ಲಿ ನಾನು ಎರಡು ಬಾರಿ ಚುನಾವಣೆಯಲ್ಲಿ ಗೆದ್ದಿದ್ದೇನೆ ಎಂದು ಪ್ರತಾಪ್ ಸಿಂಹ ಹೇಳಿದರು.

ಸುರಂಗದಲ್ಲಿ ಸಿಲುಕಿದ್ದ 41 ಕಾರ್ಮಿಕರ ರಕ್ಷಣೆ

ಯಶಸ್ವಿಯಾಯಿತು. 800–ಎಂಎಂ ವ್ಯಾಸದ ಪೈಪ್ ಅನ್ನು ಆಗರ್ ಯಂತ್ರದಿಂದ ಅವಶೇಷಗಳ ಮೂಲಕ ಸೇರಿಸಲಾಗಿದ್ದು, ಅದರ ಮೂಲಕ ಕಾರ್ಮಿಕರನ್ನು ಹೊರಗೆ ಕರೆತರಲಾಗಿದೆ. ಈ ಮೊದಲು ಬೃಹತ್ ಆಗರ್ ಯಂತ್ರದ ಮೂಲಕ ಈ ಕೊರೆತವನ್ನು ನಡೆಸಲಾಗಿತ್ತು. ಆದರೆ ಕಳೆದ ಶುಕ್ರವಾರ ಈ ಯಂತ್ರವು 47 ಮೀಟರ್‌ನಲ್ಲಿ ಅವಶೇಷಗಳಡಿ ಸಿಲುಕಿ ಛಿದ್ರವಾಗಿತ್ತು. ಕುಸಿದ ಸುರಂಗದಲ್ಲಿ ಕಳೆದ 17 ದಿನಗಳಿಂದ ಸಿಲುಕಿದ್ದ 41 ಕಾರ್ಮಿಕರನ್ನು ದೊಡ್ಡ ಪೈಪ್ ಮೂಲಕ ಹಗ್ಗ ಕಟ್ಟಿದ ಗಾಲಿ ಸ್ಟ್ರೆಚರ್ ನೆರವಿನಿಂದ ಒಬ್ಬೊಬ್ಬರಾಗಿ ಹೊರಗೆಳೆದು ರಕ್ಷಣೆ ಮಾಡಲಾಯಿತು. ಪೈಪ್‌ಗಳನ್ನು ವೆಲ್ಡಿಂಗ್ ಮಾಡಿರುವ ಕಾರಣ ಕಾರ್ಮಿಕರು ತೆವಳುವಾಗ ತರಚಿ ಗಾಯಗಳಾಗಬಹುದು ಎಂಬ ಕಾರಣಕ್ಕೆ ಗಾಲಿ ಸ್ಟ್ರೆಚರ್ ಸಹಾಯದಿಂದ ಹೊರಗೆ ಕರೆತರಲಾಯಿತು. ಕಳೆದ 17 ದಿನಗಳಿಂದ ಯಾವುದೇ ನೈಸರ್ಗಿಕ ಬೆಳಕು ಮತ್ತು ಸಂಪೂರ್ಣ ಊಟವಿಲ್ಲದೆ ಸುರಂಗದ ಭಗ್ನಾವಶೇಷಗಳ ಅಡಿಯಲ್ಲಿ ಜೀವವನ್ನು ಕೈಯಲ್ಲಿ ಹಿಡಿದು ನಿತ್ರಾಣಗೊಂಡಿರುವ ಕಾರ್ಮಿಕರಿಗೆ ತೆವಳುವುದು ತುಂಬಾ ಕಷ್ಟವಿತ್ತು ಹೀಗಾಗಿ ಗಾಲಿ ಸ್ಟ್ರೆಚರ್ ರಕ್ಷಣಾ ಕಾರ್ಯಕರ್ತರ ಪ್ರಧಾನ ಆಯ್ಕೆಯಾಗಿತ್ತು.

ಸುರಂಗ ಮಾರ್ಗ: ಕೇಂದ್ರದ ಮಹತ್ವಾಕಾಂಕ್ಷೆಯ ಚಾರ್ ಧಾಮ್ ಯೋಜನೆಯ ಭಾಗವಾದ ಸುರಂಗವು ಉತ್ತರಾಖಂಡದ ಸಿಲ್ಕ್ಯಾರಾ ಮತ್ತು ದಂಡಲ್ಗಾಂವ್ ನಡುವೆ ಉತ್ತರಕಾಶಿ ಮತ್ತು ಯಮುನೋತ್ರಿಯನ್ನು ಸಂಪರ್ಕಿಸಲು ಉದ್ದೇಶಿಸಿರುವ ರಸ್ತೆಯಲ್ಲಿದೆ. ಇದರ ಕಾಮಗಾರಿ ಭರದಿಂದ ಸಾಗಿತ್ತು. ಆದರೆ, ಮಣ್ಣು ಕುಸಿತದಿಂದಾಗಿ ನ.12ರಂದು 41 ಕಾರ್ಮಿಕರು ಸುರಂಗದಲ್ಲಿ ಸಿಲುಕಿಕೊಂಡಿದ್ದರು.

ಹುಲಿ ಅಂತೂ ಸೆರೆ

ಶೆಡ್ ಬಳಿ ಜಾನುವಾರು ಬಲಿ ಪಡೆದ ಹುಲಿಯೇ ರೈತ ಮಹಿಳೆಯ ಮೇಲೆರಗಿರುವುದು ಖಾತರಿಯಾಗಿತ್ತು. ನ.27ರಂದು ಬೋನ್ ಒಂದನ್ನು ತಂದು ಬಂಡೀಪುರದ ಪಶು ವೈದ್ಯ ಮಿರ್ಜಾ ವಾಸೀಂ, ಕಾಳಿ ಹುಲಿ ಸಂರಕ್ಷಿತ ಪ್ರದೇಶದ ಪಶು ವೈದ್ಯ ಡಾ.ಪ್ರದೀಪ್ ಬೋನಿನಲ್ಲಿ ಕುಳಿತು ಜಾನುವಾರು ಮೃತದೇಹ ತಿನ್ನಲು ಬರುವ ಹುಲಿಗಾಗಿ ಕಾದುಕುಳಿತಿದ್ದರು. ನ.27ರ ರಾತ್ರಿ 2 ಬಾರಿ ಜಾನುವಾರು ಮಾಂಸ ತಿನ್ನಲು ಬಂದಿದ್ದ ಹುಲಿಯನ್ನು ಗಮನಿಸಿದ ಅರಣ್ಯ ಸಿಬ್ಬಂದಿ ಹುಲಿ ಸೆರೆ ಸನ್ನದ್ಧರಾಗಿದ್ದರು. ಜಿಎಚ್‌ಎಂ ಕ್ಯಾಮರಾ ಬಳಸಿದ್ದರಿಂದ ಹುಲಿಯ ಚಲನವಲನದ ದೃಶ್ಯ ಬ್ಲೂಟೂತ್ ಮೂಲಕ ನೇರ ಪ್ರಸಾರವಾಗುತ್ತಿದ್ದರಿಂದ ಕಾರ್ಯಾಚರಣೆಗೆ ನೆರವಾಯಿತು. ಮಧ್ಯರಾತ್ರಿ ಜಾನುವಾರು ಮಾಂಸ ತಿನ್ನುವುದರಲ್ಲಿ ಮಗ್ನವಾಗಿದ್ದ ಹುಲಿಗೆ ಪಶುವೈದ್ಯ ಮಿರ್ಜಾ ವಾಸೀಂ ಅರವಳಿಕೆ ಮದ್ದು ನೀಡುವಲ್ಲಿ ಯಶಸ್ವಿಯಾದರು. ಅರವಳಿಕೆ ಮದ್ದು ನೀಡಿದ ಬಳಿಕ ಕಾಡಿನೊಳಗೆ ಓಡಿದ ಹುಲಿ 10 ನಿಮಿಷದಲ್ಲಿಯೇ ಪ್ರಜ್ಞಾಹೀನ ಸ್ಥಿತಿಗೆ ತಲುಪಿತು. ಕೂಡಲೇ ಇನ್ನಿತರ ಸಿಬ್ಬಂದಿ ಹುಲಿಯನ್ನು ಬಲೆಗೆ ಹಾಕಿಕೊಂಡು, ಬೋನಿನೊಳಗೆ ಹಾಕಲಾಯಿತು.

ನೆರವಾದ ಬೇಲಿಂಗಳು: ಕಾರ್ಯಾಚರಣೆಗೆ ಅರಣ್ಯ ಪ್ರದೇಶದ ದಟ್ಟ ಗಿಡಗಂಟಿಗಳು, ಮುಳ್ಳಿನ ಪೊದೆ, ಮರಗಳು ಹುಲಿ ಗುರುತಿಸುವಿಕೆಗೆ ಅಡ್ಡಿಯಾಗುತ್ತಿತ್ತು. ಆದರೆ, ಬೇಲಿಂಗಳಿದ್ದ ಹಿನ್ನೆಲೆಯಲ್ಲಿ ಹುಲಿ ಗುರುತಿಸುವುದಕ್ಕೆ ಇದು ಸಹಕಾರಿಯಾಯಿತು.

ಹಲ್ಲಿನ ಪರೀಕ್ಷೆ: ಸೆರೆ ಹಿಡಿದು ಕೂರ್ಗಳ್ಳಿ ಪುನರ್ವಸತಿ ಕೇಂದ್ರಕ್ಕೆ ತರಲಾಗಿರುವ ಹುಲಿ 10 ವರ್ಷದಾಗಿದ್ದು, ಮೇಲ್ನೋಟಕ್ಕೆ ಯಾವುದೇ ಗಾಯದ ಕುರುಹುಗಳು ಕಂಡು ಬಂದಿಲ್ಲ. ಸಹಜವಾಗಿ ಬೇಟೆಯಾಡುವ ಶಕ್ತಿ ಕಳೆದುಕೊಂಡಿದ್ದರಿಂದ ಸುಲಭವಾಗಿ ಆಹಾರವಾಗಬಲ್ಲ ಜಾನುವಾರುಗಳ ಮೇಲೆ ದಾಳಿ ಮಾಡುತ್ತಿತ್ತು.

ಪುನರ್ವಸತಿ ಕೇಂದ್ರದಲ್ಲಿರುವ ಹುಲಿಗೆ ರಕ್ತ ಪರೀಕ್ಷೆ ನಡೆಸಿ ಸ್ಕ್ಯಾನ್ ಮಾಡುವಂತೆ ಸೂಚನೆ ನೀಡಲಾಗಿದೆ. ಆ ಮೂಲಕ ಹುಲಿಯ ದೇಹದಲ್ಲಿ ಯಾವುದಾದರೂ ಆಂತರಿಕ ಸಮಸ್ಯೆ ಇರುವುದು ಖಚಿತಪಡಿಸಿಕೊಳ್ಳುವಂತೆ ಸೂಚನೆ ನೀಡಲಾಗಿದೆ.

ಈ ಕಾರ್ಯಾಚರಣೆಯಲ್ಲಿ 207 ಮಂದಿ ಅರಣ್ಯ ಸಿಬ್ಬಂದಿ, 100 ಬುಡಕಟ್ಟು ಸಮುದಾಯದವರು, 3 ಸಾಕಾನೆ, 1 ಡ್ರೋನ್, 5 ಜಿಎಸ್‌ಎಂ ಕ್ಯಾಮರಾ, ಒಂದು ದೊಡ್ಡ ಬೋನ್ ಒಳಗೊಂಡಿತ್ತು. ಇದು ಪಶು ವೈದ್ಯರ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದರು. ಸ್ಥಳದಲ್ಲಿ ಮೈಸೂರು ವೃತ್ತದ ಸಿಎಫ್ ಡಾ. ಮಾಲತಿಪ್ರಿಯ, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಡಾ. ಪಿ.ರಮೇಶ್ ಕುಮಾರ್, ಬಂಡೀಪುರ ಹೆಡಿಯಾಲ ವಲಯದ ಎಸಿಎಫ್ ಪರಮೇಶ್, ಹೆಡಿಯಾಲ ಆರ್‌ಎಫ್‌ಒ ಎ.ಆರ್.ನಾರಾಯಣ, ಹೆಚ್ಚುವರಿ ಆರ್‌ಎಫ್‌ಒ ನರೇಶ್ ಹಾಗೂ ಇನ್ನಿತರರು ಮೊಕ್ಕಾಂ ಹೂಡಿದ್ದಾರೆ.

ಆದಿತ್ಯ ಅಧಿಕಾರಿ ಆಸ್ಪತ್ರೆಗೆ ಡಿಎಚ್‌ಓ ನೀಡಿದ ನೋಟಿಸ್‌ಗೆ ಹೈಕೋರ್ಟ್ ತಡೆ

ಆಸ್ಪತ್ರೆಯನ್ನು ಮುಚ್ಚಲಾಗಿದೆ ಎಂಬುದು ಬರೀ ಅಪಪ್ರಚಾರ ; ನಾವು ಕಾನೂನು ಹೋರಾಟ ಮುಂದುವರೆಸಿದ್ದೇವೆ: ಡಾ.ಚಂದ್ರಶೇಖರ್



ಮೈಸೂರು, ನ.28(ಜಿಎ)–ಮೈಸೂರು ಜಿಲ್ಲಾ ಆರೋಗ್ಯ ಅಧಿಕಾರಿಗಳು (ಡಿಎಚ್‌ಓ) ಗೋಕುಲಂನ ಆದಿತ್ಯ ಅಧಿಕಾರಿ ಆಸ್ಪತ್ರೆಗೆ ನ.23ರಂದು ನೀಡಿದ್ದ ನೋಟಿಸ್‌ಗೆ ಹೈಕೋರ್ಟ್ ತಡೆಯಾಜ್ಞೆ ನೀಡಿದೆ ಎಂದು ಆಸ್ಪತ್ರೆಯ ವ್ಯವಸ್ಥಾಪಕ ಪಾಲುದಾರರಾದ ಡಾ.ಎನ್.ಚಂದ್ರಶೇಖರ್ ತಿಳಿಸಿದ್ದಾರೆ.

ನಗರದ ಪತ್ರಕರ್ತರ ಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆಸ್ಪತ್ರೆಯ ವಿರುದ್ಧ ರವಿಗೌಡ ಎಂಬುವರು ನೀಡಿದ ದೂರಿನ ಅನ್ವಯ ಮೈಸೂರು ಜಿಲ್ಲಾ ಆರೋಗ್ಯಾಧಿಕಾರಿಗಳು ಆಸ್ಪತ್ರೆಯಲ್ಲಿನ ರೋಗಿಗಳನ್ನು 7 ದಿನದೊಳಗೆ ಸ್ಥಳಾಂತರಿಸಿ, ಆಸ್ಪತ್ರೆಗೆ ಬೀಗ ಹಾಕುವಂತೆ ನೋಟಿಸ್ ನೀಡಿದ್ದರು. ಅದನ್ನು ಪ್ರಶ್ನಿಸಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಲಾಗಿತ್ತು. ಈಗ ಹೈಕೋರ್ಟ್ ಡಿಎಚ್‌ಓ ನೋಟಿಸ್‌ಗೆ ತಡೆಯಾಜ್ಞೆ ನೀಡಿದ್ದು, ಈ ಕುರಿತು ಡಿ.1ರಂದು ಮುಂದಿನ ವಿಚಾರಣೆ ನಡೆಯಲಿದೆ ಎಂದರು.

ಆಸ್ಪತ್ರೆಯ ವಿರುದ್ಧ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಅಪಪ್ರಚಾರ ಮಾಡುತ್ತಿದ್ದು, ದುರುದ್ದೇಶಪೂರಿತ ಪ್ರಚಾರದಲ್ಲಿ ತೊಡಗಿದ್ದಾರೆ. ನಾವು ನವೆಂಬರ್ 23 ರಂದು ಡಿಎಚ್‌ಓ ಅವರ ನೋಟಿಸ್ ಸ್ವೀಕರಿಸಿದ್ದೇವು. ಈಗ ಹೈಕೋರ್ಟ್ ಅದಕ್ಕೆ ತಡೆನೀಡಿದೆ. ಆದರೆ ಆದಿತ್ಯ ಅಧಿಕಾರಿ ಆಸ್ಪತ್ರೆಯನ್ನು ಮುಚ್ಚಲಾಗಿದೆ ಎಂದು ಸಾಮಾಜಿಕ ಮಾಧ್ಯಮಗಳು ಮತ್ತು ಕೆಲವು ವೆಬ್‌ಸೈಟ್‌ಗಳಲ್ಲಿ ಅಪಪ್ರಚಾರ ಮಾಡಲಾಗುತ್ತಿದೆ ಎಂದು ಬೇಸರಿಸಿದರು.

ನಾವು ಐದು ವರ್ಷಗಳಿಂದ ಕೆಲವು ಪಟ್ಟಭದ್ರ ಹಿತಾಸಕ್ತಿಗಳ ಸಂಚಿಗೆ ಗುರಿಯಾಗಿದ್ದೇವೆ. ಅವರೊಂದಿಗೆ ಪಟ್ಟುಬಿಡದೆ ಹೋರಾಡುತ್ತಿದ್ದೇವೆ. ಈಗ ಆಸ್ಪತ್ರೆ ಮುಚ್ಚಲಾಗಿದೆ ಅಥವಾ ಬೀಗ ಹಾಕಲಾಗಿದೆ ಎಂದು ತಪ್ಪು ಮಾಹಿತಿ ನೀಡುತ್ತಿದ್ದಾರೆ. ನಕಾರಾತ್ಮಕ ಮತ್ತು ಸುಳ್ಳು ಪ್ರಚಾರದಿಂದ ನಾವು ತೀವ್ರವಾಗಿ ಹಾನಿಗೊಳಗಾಗಿದ್ದೇವೆ. ಎಷ್ಟೇ ಸವಾಲುಗಳು ಎದುರಾದರೂ ಆದಿತ್ಯ ಆಸ್ಪತ್ರೆಯನ್ನು ಮುಚ್ಚಿಲ್ಲ, ಮುಚ್ಚುವುದು ಇಲ್ಲ ಎಂದು ಸ್ಪಷ್ಟಪಡಿಸಿದರು.

ಆಸ್ಪತ್ರೆಯ ಹೆಸರಿಗೆ ಕಳಂಕ ತರಲು ಕೆಲವು ವ್ಯಕ್ತಿಗಳು ಮುಂದಾಗಿರುವುದರಿಂದ ರೋಗಿಗಳು ಗೊಂದಲಕ್ಕೊಳಗಾಗಿದ್ದಾರೆ. ಆಸ್ಪತ್ರೆಯು ಸಂಪೂರ್ಣವಾಗಿ ಕಾರ್ಯನಿರ್ವಹಿಸುತ್ತಿದೆ ಮತ್ತು ನಾವು ಜನರ ವಿಶ್ವಾಸವನ್ನು ಹೊಂದಿದ್ದೇವೆ. ನಮಗೆ ನೋಟಿಸ್ ಬಂದಿದ್ದು, ಅದಕ್ಕೆ ಕಾನೂನಾತ್ಮಕವಾಗಿಯೇ ಸೂಕ್ತ ಕ್ರಮ ಕೈಗೊಳ್ಳುತ್ತೇವೆ. ನಮ್ಮದೇನು ತಪ್ಪಿಲ್ಲದ ಕಾರಣ ನಾವು ಕಾನೂನು ಹೋರಾಟ ಮುಂದುವರೆಸುತ್ತೇವೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಡಾ. ಅರ್ಚನಾ ಹಾಗೂ ಆಸ್ಪತ್ರೆ ವ್ಯವಸ್ಥಾಪಕ ಗೋಪಾಲ ನಾಯ್ಕ ಉಪಸ್ಥಿತರಿದ್ದರು.

> ಆಸ್ಪತ್ರೆ ಜನರಿಗೆ ಉತ್ತಮವಾಗಿ ಸ್ಪಂದಿಸುತ್ತಿದೆ. ಹೀಗಿದ್ದರೂ ತಮ್ಮ ಆಸ್ಪತ್ರೆ ಹೆಸರು ಕೆಡಿಸಲು ನಡೆದ ಕೆಲ ಘಟನೆಗಳ ಬಗ್ಗೆ ನೋವುಂಟಾಗಿದೆ. ತಾವು ವೈದ್ಯಕೀಯ ಪದವಿ ಪಡೆದ ವೇಳೆ ಔಷಧಗಳ ಬಳಕೆಗೂ ಅನುಮೋದನೆ ನೀಡಿದ್ದು, ಕೆ.ಆರ್. ಆಸ್ಪತ್ರೆಯಲ್ಲಿ ಅನಸ್ತೇಷಿಯಾ ಬಗ್ಗೆ ಒಂದು ವರ್ಷ ತರಬೇತಿ ಪಡೆದಿದ್ದೇನೆ. ಹೀಗಿದ್ದರೂ ವಿವಾದ ಉಂಟು ಮಾಡಲಾಗಿದೆ. ಜೊತೆಗೆ, ಆಸ್ಪತ್ರೆಯಲ್ಲಿ ಸಂಭವಿಸಿದ ಒಂದು ಸಾವಿಗೆ ಆಸ್ಪತ್ರೆ ಯಾವುದೇ ಕಾರಣಕ್ಕೂ ಹೊಣೆಯಲ್ಲ. ನೀಡಿರುವ ಚಿಕಿತ್ಸೆ ಸರಿಯಾಗಿಯೇ ಇದೆ ಎಂದು ಸಮಿತಿಯೂ ವರದಿ ನೀಡಿದೆ. ಈ ಪ್ರಕರಣ ಈಗ ನ್ಯಾಯಾಲಯದಲ್ಲಿದೆ.
>
> -ಡಾ.ಎನ್.ಚಂದ್ರಶೇಖರ್,
> ವ್ಯವಸ್ಥಾಪಕ ಪಾಲುದಾರ, ಆದಿತ್ಯ ಅಧಿಕಾರಿ ಆಸ್ಪತ್ರೆ

ಸೇವೆ ಕಾಯಂಗೆ ಆಗ್ರಹಿಸಿ ಅತಿಥಿ ಉಪನ್ಯಾಸಕರ ಪ್ರತಿಭಟನೆ



ಮೈಸೂರು, ನ.28(ಜಿಎ)– ಸೇವೆ ಕಾಯಂಗೊಳಿಸುವಂತೆ ಒತ್ತಾಯಿಸಿ ರಾಜ್ಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರ ಸಂಘದ ನೇತೃತ್ವದಲ್ಲಿ ವಿವಿಧ ಕಾಲೇಜು ಗಳ ಅತಿಥಿ ಉಪನ್ಯಾಸಕರುಗಳು ಪ್ರತಿಭಟನೆ ನಡೆಸಿದರು.

ನಗರದ ಕಾಲೇಜು ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕರ ಕಚೇರಿ ಎದುರು ಜಮಾಯಿಸಿದ ಅತಿಥಿ ಉಪನ್ಯಾಸಕರು ತಮ್ಮ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ವಿವಿಧ ಘೋಷಣೆಗಳನ್ನು ಕೂಗಿದರು.

ಈ ವೇಳೆ ಸಂಘದ ಅಧ್ಯಕ್ಷ ಜಿ.ವಿ. ರಮೇಶ್ ಮಾತನಾಡಿ, ಕಾಲೇಜು ಶಿಕ್ಷಣ ಇಲಾಖೆ ವ್ಯಾಪ್ತಿಯ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಅಂದಾಜು 12 ಸಾವಿರಕ್ಕೂ ಹೆಚ್ಚು ಅತಿಥಿ ಉಪನ್ಯಾಸಕರು ಕಾರ್ಯನಿರ್ವಹಿಸುತ್ತಿದ್ದಾರೆ. ಆದರೆ ಕಳೆದ ಹಲವು ವರ್ಷಗಳಿಂದ ಕೆಲಸ ಮಾಡುತ್ತಿರುವ ಇವರುಗಳಿಗೆ ಇಂದಿಗೂ ಸೇವಾ ಭದ್ರತೆ ಇಲ್ಲದಂತಾಗಿದೆ ಎಂದು ಕಿಡಿಕಾರಿದರು.

ಅಲ್ಲದೇ ಅತಿಥಿ ಉಪನ್ಯಾಸಕರಾಗಿ ಕೆಲಸ ಮಾಡುತ್ತಿರುವ ಹಲವರು ಇದೀಗ ನಿವೃತ್ತಿ ಅಂಚಿನಲ್ಲಿದ್ದು, ಸೇವಾ ಭದ್ರತೆ ಇಲ್ಲದಿದ್ದರೂ ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ. ಆದ್ದರಿಂದ ಸರ್ಕಾರ ಹಾಗೂ ಸಂಬಂಧಪಟ್ಟವರು ಈಗಲಾದರೂ ಸಮಸ್ಯೆಗಳ ಬಗ್ಗೆ ನಿಗಾವಹಿಸುವ ಮೂಲಕ ಅತಿಥಿ ಉಪನ್ಯಾಸಕರ ಸೇವೆಯನ್ನ ಕಾಯಂ ಮಾಡಬೇಕೆಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಸಂಘದ ಸಂಚಾಲಕ ಡಿ.ನಾಗರಾಜ್, ಪ್ರಮುಖರಾದ ಹನುಮಂತೇಶ್, ಆಶಾಲತ ಸೇರಿದಂತೆ ಹಲವರು ಭಾಗವಹಿಸಿದ್ದರು.

ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಚಿತ ತರಬೇತಿ



ಮೈಸೂರು, ನ.28(ಜಿಎ)– ನಗರದ ಡಿ. ಸುಬ್ಬಯ್ಯ ರಸ್ತೆಯಲ್ಲಿರುವ ವಿದ್ವತ್ ಐಎಎಸ್, ಕೆಎಎಸ್ ಅಕಾಡೆಮಿ ವತಿಯಿಂದ ಸರ್ವರಿಗೂ ಶಿಕ್ಷಣದ ಅವಕಾಶ ಸಿಗಲಿ ಎನ್ನುವ ಉದ್ದೇಶದಿಂದ, ಗ್ರಾಮೀಣ ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಅಕಾಡೆಮಿಯಲ್ಲಿ ಐಎಎಸ್, ಕೆಎಎಸ್, ಪಿಎಸ್‌ಐ, ಎಫ್‌ಡಿಎ, ಎಸ್‌ಡಿಎ, ಪಿಸಿ, ಪಿಡಿಓ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಡಿ.5ರಿಂದ ಉಚಿತ ತರಬೇತಿ ಆಯೋಜಿ ಸಲಾಗಿದೆ ಎಂದು ಮುಖ್ಯಸ್ಥ ಕೆ. ಸಿದ್ಧಾರ್ಥ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 450 ಅಭ್ಯರ್ಥಿಗಳಿಗೆ ನಾಲ್ಕು ತಿಂಗಳು ಉಚಿತ ತರಬೇತಿ ಶಿಬಿರ ಇದಾಗಿದ್ದು, ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮದಲ್ಲಿ ನುರಿತ ವಿಷಯ ತಜ್ಞರಿಂದ ಬೋಧಿಸಲಾಗುವುದು. ಜೊತೆಗೆ ಪರೀಕ್ಷಾ ಭಯವನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಪ್ರತಿ ಭಾನುವಾರ ಪರೀಕ್ಷಾ ಸರಣಿಯನ್ನು ನಡೆಸಲಾಗುವುದು. ಎಲ್ಲಾ ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂ. 99722 58970, 97407 02455. ಸಂಪರ್ಕಿಸಬಹುದು ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಎಸ್.ಮಮತಾ ಉಪಸ್ಥಿತರಿದ್ದರು.

ನಾಳೆ ಮೈಸೂರಲ್ಲಿ ಕನಕದಾಸರ ಜಯಂತಿ



ಮೈಸೂರು, ನ.28(ಜಿಎ)–ಮೈಸೂರು ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸಂತ ಕನಕದಾಸರ ಜಯಂತ್ಯುತ್ಸವ ಸಮಿತಿಗಳ ಸಂಯುಕ್ತಾಶ್ರಯದಲ್ಲಿ ನ.30 ರಂದು ಬೆಳಗ್ಗೆ 11.30ಕ್ಕೆ ಕಲಾಮಂದಿರದಲ್ಲಿ ಕನಕದಾಸರ ಜಯಂತಿ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಮೈಸೂರು ನಗರಪಾಲಿಕೆ ಮಾಜಿ ಸದಸ್ಯ ಶಿವಣ್ಣ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 9.30ಕ್ಕೆ ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಬಳಿಯಿಂದ ಕನಕದಾಸರ ಮೂರ್ತಿಯೊಂದಿಗೆ ಭವ್ಯ ಮೆರವಣಿಗೆ ನಡೆಸಲಾಗುವುದು. ಇದರಲ್ಲಿ ಸುಮಾರು 35 ವಿವಿಧ ಜಾನಪದ ಕಲಾತಂಡಗಳು ಪಾಲ್ಗೊಳ್ಳಲಿವೆ. ಬಳಿಕ ಬೆಳಗ್ಗೆ 10ಕ್ಕೆ ಕಲಾಮಂದಿರದಲ್ಲಿ ಕಾರ್ಯಕ್ರಮ ನಡೆಯಲಿದ್ದು, ಶಿವಾನಂದಪುರಿ ಸ್ವಾಮೀಜಿ, ಜ್ಞಾನಪ್ರಕಾಶ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ ಎಂದರು.

ಮುಖ್ಯ ಅತಿಥಿಗಳಾಗಿ ಸಚಿವ ಕೆ.ವೆಂಕಟೇಶ್, ಶಾಸಕರಾದ ಕೆ.ಹರೀಶ್ ಗೌಡ, ತನ್ವೀರ್ ಸೇಠ್, ಸಂಸದರಾದ ವಿ.ಶ್ರೀನಿವಾಸ್ ಪ್ರಸಾದ್, ಪ್ರತಾಪ್ ಸಿಂಹ, ಸುಮಲತಾ ಅಂಬರೀಶ್ ಭಾಗವಹಿಸಲಿದ್ದಾರೆ. ಕನಕದಾಸರ ಜಯಂತಿ ಎರಡು ಹಂತದಲ್ಲಿ ನಡೆಯಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಈಗಾಗಲೇ ಆಹ್ವಾನ ನೀಡಲಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ನಾಡನಹಳ್ಳಿ ರವಿ, ವಿಶ್ವನಾಥ್, ಮಾಜಿ ಪಾಲಿಕೆ ಸದಸ್ಯರಾದ ಟಿ.ಬಿ.ಚಿಕ್ಕಣ್ಣ, ರಮೇಶ್, ಶಂಕರ್, ಬ್ಯಾಂಕ್ ಎಂ. ಪುಟ್ಟಸ್ವಾಮಿ, ಬಿ.ಎಂ.ರಾಮು, ಅಂದಾನಿಗೌಡ ಉಪಸ್ಥಿತರಿದ್ದರು.

ಜನತಾ ದರ್ಶನ ಕಾರ್ಯಕ್ರಮ

ಮೈಸೂರು, ನ.28–ನವೆಂಬರ್ 29ರಂದು ಬೆಳಗ್ಗೆ 11 ಗಂಟೆಗೆ ಟಿ.ನರಸೀಪುರ ತಾಲೂಕಿನ ವಿದ್ಯೋದಯ ಶಿಕ್ಷಣ ಸಂಸ್ಥೆಯ ಆಡಿಟೋರಿಯಂನಲ್ಲಿ ಮೈಸೂರು ಜಿಲ್ಲಾಡಳಿತದ ವತಿಯಿಂದ ಜನತಾದರ್ಶನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಮಾಜ ಕಲ್ಯಾಣ ಇಲಾಖೆ ಸಚಿವರು ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ. ಹೆಚ್.ಸಿ ಮಹದೇವಪ್ಪನವರು ವಹಿಸಲಿದ್ದು, ಸಾರ್ವಜನಿಕರು ಕಾರ್ಯಕ್ರಮದ ಸದುಪಯೋಗವನ್ನು ಪಡೆದುಕೊಳ್ಳುವಂತೆ ಜಿಲ್ಲಾಧಿಕಾರಿಗಳಾದ ಡಾ. ಕೆ.ವಿ.ರಾಜೇಂದ್ರ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

4ಜಿ, 5ಜಿ ಸೇವೆ ಆರಂಭಿಸಲು ಕೇಂದ್ರದಿಂದ ವಿಳಂಬ

ಬಿಎಸ್‌ಎನ್‌ಎಲ್ ನಾನ್ ಎಕ್ಸಿಕ್ಯೂಟೀವ್ ನೌಕರರ ಪ್ರತಿಭಟನೆ

ಖಾಸಗಿಯವರಿಗೆ ಅನುಮತಿ, ಬಿಎಸ್‌ಎನ್‌ಎಲ್‌ಗೆ ಏಕಿಲ್ಲ!



ಮೈಸೂರು, ನ.28(ಜಿಎ)–4ಜಿ ಹಾಗೂ 5ಜಿ ಸೇವೆ ಆರಂಭಿಸಲು ಕೇಂದ್ರ ಸರ್ಕಾರ ಅನುಸರಿಸುತ್ತಿರುವ ವಿಳಂಬ ಧೋರಣೆ ಖಂಡಿಸಿ ಬಿಎಸ್‌ಎನ್‌ಎಲ್ ನಾನ್ ಎಕ್ಸಿಕ್ಯುಟಿವ್ ನೌಕರರ ಒಕ್ಕೂಟದಿಂದ ಜಯಲಕ್ಷ್ಮೀಪುರಂನ ಬಿಎಸ್‌ಎನ್‌ಎಲ್ ಕಚೇರಿ ಮುಂಭಾಗ ಮಾನವ ಸರಪಳಿ ನಿರ್ಮಿಸಿ ಪ್ರತಿಭಟನೆ ನಡೆಸಲಾಯಿತು.

ಭಾರತ್ ಸಂಚಾರ ನಿಗಮ ಲಿಮಿಟೆಡ್ (ಬಿಎಸ್‌ಎನ್‌ಎಲ್) 4ಜಿ ಸೇವೆಗಳ ಪೂರ್ಣ ಪ್ರಮಾಣದ ವಾಣಿಜ್ಯ ಉಡಾವಣೆಗೆ ಸಿದ್ಧತೆ ಮಾಡಿಕೊಳ್ಳುತ್ತಿದೆ. ಇದಕ್ಕೆ ವ್ಯತಿರಿಕ್ತವಾಗಿ ಖಾಸಗಿ ಟೆಲಿಕಾಂ ಆಪರೇಟರ್‌ಗಳು 5ಜಿ ಸೇವೆ ಪ್ರಾರಂಭಿಸಿವೆ. ಬಿಎಸ್‌ಎನ್‌ಎಲ್ ವರ್ಷಾರಂಭದಲ್ಲೇ 4ಜಿ ಸೇವೆ ಆರಂಭಿಸಬೇಕಿತ್ತು ಆದರೆ ಕೇಂದ್ರದ ಇಚ್ಛಾಶಕ್ತಿ ಕೊರತೆಯಿಂದ ಇನ್ನೂ ಆರಂಭವಾಗಿಲ್ಲ. 2022 ಹಾಗೂ 23ರಲ್ಲಿ ಹಲವು ಬಾರಿ 4ಜಿ ರೋಲ್ ಔಟ್ ಭರವಸೆ ನೀಡಿದ್ದರೂ 18 ತಿಂಗಳ ಕಾಲಾವಧಿಗೆ ಅಂಟಿಕೊಂಡಿದ್ದಾರೆ. ಪ್ರಗತಿಯ ಬಗ್ಗೆ ಕೇಳಿದಾಗಲೆಲ್ಲ 18 ತಿಂಗಳು ಎಂದು ಹೇಳುತ್ತಾರೆ. ಇನ್ನು 18 ತಿಂಗಳು ಕಳೆದರೂ ಮೂಲಸೌಕರ್ಯ ಸಿಗುವುದಿಲ್ಲ ಎಂದು ಕಿಡಿಕಾರಿದರು.

ಈ ಆರ್ಥಿಕ ವರ್ಷದಲ್ಲಿ ಬಿಎಸ್‌ಎನ್‌ಎಲ್ ಅನೇಕ ಚಂದಾದಾರರನ್ನು ಕಳೆದುಕೊಂಡಿದೆ. ಖಾಸಗಿ ಕಂಪನಿಗಳು ಟೆಲಿಕಾಂ ಕಂಪನಿ ನಡೆಸದಿದ್ದರೂ 5ಜಿ ಪರವಾನಗಿ ನೀಡಲಾಗಿದೆ. ಈ ಬಗ್ಗೆ ಆಡಳಿತ ಮಂಡಳಿ ಹೆಚ್ಚು ತಲೆ ಕೆಡಿಸಿಕೊಳ್ಳುವುದಿಲ್ಲ. 4ಜಿ ಸೇವೆಗಳನ್ನು ನೀಡುವುದು ಸಂಸತ್ತಿನಲ್ಲಿ ನೀಡಿದ ಭರವಸೆಯಾಗಿದೆ. 5ಜಿ ಯುಗದಲ್ಲಿ ನಮ್ಮಲ್ಲಿ 4ಜಿ ಸೇವೆಯೂ ಇಲ್ಲ. ಮನೆಯಲ್ಲೇ ಸುಧಾರಿತ ಅಧ್ಯಯನ ವಿಧಾನಗಳೊಂದಿಗೆ ಅಭ್ಯಾಸ ಮಾಡುವ ವಿದ್ಯಾರ್ಥಿಗಳು, ಯುವಕರು, ವಯಸ್ಕರು ಹೇಗೆ 3ಜಿ ಬಳಸುತ್ತಾರೆ? ಹೀಗಾಗಿ ಕೂಡಲೇ 4ಜಿ ಸೇವೆ ಆರಂಭಿಸಬೇಕು. ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ನಾನ್ ಎಕ್ಸಿಕ್ಯುಟಿವ್ ನೌಕರರಿಗೆ 3ನೇ ವೇತನ ಪರಿಷ್ಕರಣೆ ಮಾಡಿ ಹೊಸ ಬಡ್ತಿ ನೀತಿ ಜಾರಿ ಮಾಡಬೇಕೆಂದು ಒತ್ತಾಯಿಸಿದರು. ಈ ವೇಳೆ ನೌಕರರ ಒಕ್ಕೂಟದ ಅಧ್ಯಕ್ಷ ನಾಗೇಂದ್ರ, ಸಂಚಾಲಕ ಪುಟ್ಟಸ್ವಾಮಿ ಸೇರಿದಂತೆ ಹಲವರು ಭಾಗವಹಿಸಿದ್ದರು.

ಇಂಗ್ಲಿಷ್ ಜೊತೆಗೆ ಹಿಂದಿಯಿಂದಲೂ ಕನ್ನಡಕ್ಕೆ ಹೊಡೆತ

ಹಿಂದಿ ಮಾತ್ರವೇ ರಾಷ್ಟ್ರಭಾಷೆಯಲ್ಲ ; ಕನ್ನಡ ರಾಜ್ಯೋತ್ಸವ ಉದ್ಘಾಟಿಸಿ ಹಿರಿಯ ಸಾಹಿತಿ ಡಾ.ಸಿಪಿಕೆ



ಮೈಸೂರಿನ ಎಂಸಿಸಿಐ ಸಭಾಂಗಣದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಕನ್ನಡ ರಾಜ್ಯೋತ್ಸವದಲ್ಲಿ ಹಿರಿಯ ಸಾಹಿತಿ ಡಾ.ಸಿಪಿಕೆ ಮತ್ತು ಚುಟುಕು ಸಾಹಿತಿ ಡಾ.ಎಂ.ಜಿ.ಆರ್.ಅರಸ್ ಅವರನ್ನು ಸನ್ಮಾನಿಸಲಾಯಿತು.

ಮೈಸೂರು,ನ.28(ಪಿಎಂ)– ಇಂಗ್ಲಿಷ್ ಜೊತೆಗೆ ಇದೀಗ ಹಿಂದಿ ಭಾಷೆಯಿಂದಲೂ ಕನ್ನಡಕ್ಕೆ ಹೊಡೆತ ಬೀಳುತ್ತಿದೆ. ಕೇಂದ್ರ ಸರ್ಕಾರ ಹಿಂದಿಯನ್ನು ರಾಷ್ಟ್ರಭಾಷೆ ಎಂದು ಪರಿಗಣಿಸಿದ್ದು, ಇದು ತಪ್ಪು. ಭಾರತದ ಎಲ್ಲಾ ಭಾಷೆಗಳೂ ರಾಷ್ಟ್ರಭಾಷೆಗಳೇ ಆಗಿವೆ. ಹಿಂದಿಯೊಂದಕ್ಕೆ ಮಾತ್ರವೇ ಆ ಸ್ಥಾನ ಸಲ್ಲುವುದಿಲ್ಲವೆಂದು ಹಿರಿಯ ಸಾಹಿತಿ ಡಾ.ಸಿ.ಪಿ. ಕೃಷ್ಣಕುಮಾರ್ (ಸಿಪಿಕೆ) ಹೇಳಿದರು.

ಮೈಸೂರಿನ ಡಿ.ದೇವರಾಜ ಅರಸು ರಸ್ತೆಯಲ್ಲಿರುವ ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ (ಎಂಸಿಸಿಐ) ಸಭಾಂಗಣದಲ್ಲಿ ಸೋಮವಾರ ಸಂಸ್ಥೆ ವತಿಯಿಂದ ಹಮ್ಮಿಕೊಂಡಿದ್ದ ಕನ್ನಡ ರಾಜ್ಯೋತ್ಸವವನ್ನು ಕನ್ನಡಾಂಬೆ ಫೋಟೋಗೆ ಪುಷ್ಪ ನಮನ ಸಲ್ಲಿಸುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಇಂಗ್ಲಿಷ್ ಬೇಡವೆಂದರೆ ತಪ್ಪಾಗುತ್ತದೆ. ಅದೊಂದು ವ್ಯವಹಾರಿಕ ಮತ್ತು ಸಂಪರ್ಕ ಭಾಷೆಯಾಗಿ ಬೇಕೆ ಹೊರತು ತಾಯ್ನುಡಿಯಾದ ಕನ್ನಡದ ಸ್ಥಾನವನ್ನು ಅದು ಆಕ್ರಮಿಸಿಕೊಳ್ಳುವಂತೆ ಆಗಬಾರದು. ಈಗ ಹಿಂದಿ ಭಾಷೆಯೂ ಕನ್ನಡವನ್ನು ಕಾಡುತ್ತಿದೆ. ನಾವು ಹಿಂದಿ ಸೇರಿದಂತೆ ಯಾವ ಭಾಷೆ ಬೇಕಾದರೂ ಇಟ್ಟುಕೊಳ್ಳೋಣ. ಆದರೆ ಪ್ರಥಮ ಸ್ಥಾನ ಕನ್ನಡಕ್ಕೇ ಇರಬೇಕು ಎಂದು ಹೇಳಿದರು.

ಕನ್ನಡಿಗರಿಗೆ ಕನ್ನಡವೇ ಗತಿ. ಇಂಗ್ಲಿಷ್, ಸಂಸ್ಕೃತ, ಹಿಂದಿ ಅಲ್ಲವೆಂದು ಬಿ.ಎಂ. ಶ್ರೀಕಂಠಯ್ಯ ಒತ್ತಿ ಹೇಳಿದ್ದಾರೆ. ಇದನ್ನು ನಾವು ನೆನಪಿಸಿಕೊಳ್ಳಬೇಕು. ಕರ್ನಾಟಕದ ಏಕೀಕರಣಕ್ಕಾಗಿ ಹೋರಾಡಿದವರನ್ನು ನಾವು ಸ್ಮರಿಸಬೇಕು. ಈ ಪೈಕಿ ಆಲೂರು ವೆಂಕಟರಾಯರು ಮುಖ್ಯವಾಗುತ್ತಾರೆ ಎಂದರು.

ನಮ್ಮಲ್ಲಿ ಏಕೀಕರಣ ಭೌಗೋಳಿಕವಾಗಿ ಆಗಿದೆ. ಆದರೆ ನೈತಿಕ ಮತ್ತು ತಾತ್ವಿಕವಾಗಿ ಏಕೀಕರಣ ಆಗಿಲ್ಲ. ನಾವು ದೂರ ದೂರವೇ ಇದ್ದೇವೆ. ಭಾವೈಕ್ಯ ಎಂಬುದು ನಮ್ಮಲ್ಲಿ ಉಂಟಾಗಿಲ್ಲ. ಒಗ್ಗಟ್ಟು ಇಲ್ಲದೇ ಇರುವುದು ಕನ್ನಡಿಗರ ಮುಖ್ಯ ಸಮಸ್ಯೆ. ತಮಿಳುನಾಡಿನಲ್ಲಿ ಬಹಳ ಒಗ್ಗಟ್ಟಿನಿಂದ ಕೆಲಸ ಮಾಡುತ್ತಿದ್ದಾರೆ. ರಾಜಕೀಯ ಪಕ್ಷಗಳು ಬೇರೆ ಇದ್ದರೂ ನಾಡಿನ ಹಿತಾಸಕ್ತಿ ವಿಚಾರದಲ್ಲಿ ಒಗ್ಗೂಡಿ ಹೋರಾಟ ಮಾಡುತ್ತಾರೆ. ಅಂತಹ ಒಗ್ಗಟ್ಟು ನಮ್ಮಲ್ಲಿ ಇಲ್ಲ ಎನ್ನುವುದು ಶೋಚನೀಯ. ಇನ್ನಾದರೂ ನಾವು ಕನ್ನಡ ಉಳಿಸಿ, ಬೆಳೆಸಬೇಕು ಎಂದು ತಿಳಿಸಿದರು.

ಇಂದು ಇಂಗ್ಲಿಷ್ ಅನಗತ್ಯವಾಗಿ ನಮ್ಮ ಎಲ್ಲಾ ಕ್ಷೇತ್ರಗಳನ್ನು ಆಕ್ರಮಿಸಿಕೊಳ್ಳುತ್ತಿದೆ. ಫಲಕಗಳು ಕನ್ನಡದಲ್ಲೇ ಇರಬೇಕೆಂಬ ಹೋರಾಟ ನಡೆಯುತ್ತಿದ್ದರೂ ಅದು ಸಾಧ್ಯವಾಗಿಲ್ಲ. ಎಲ್ಲೋ ಕೆಲವು ಕಡೆ ಕನ್ನಡ ಫಲಕಗಳನ್ನು ಕಾಣಬಹುದು. ಬಹುಶಃ ತಮಿಳುನಾಡು ಬಿಟ್ಟರೆ ಬೇರೆ ರಾಜ್ಯಗಳಲ್ಲೂ ಇಂಗ್ಲಿಷ್‌ನ ಆಘಾತ ಕಾಣಿಸುತ್ತಿದೆ. ಕೆಲವು ದಿನಗಳ ಹಿಂದೆ ನಾನು ಒಡಿಸ್ಸಾಗೆ ಹೋಗಿದ್ದೆ. ಅಲ್ಲಿ ಎಲ್ಲಾ ಫಲಕಗಳೂ ಒರಿಯಾ ಭಾಷೆ ಇರುತ್ತದೆ ಎಂದುಕೊಂಡಿದ್ದೆ. ಆದರೆ ಅಲ್ಲಿ ಕೂಡ ಬಹಳಷ್ಟು ನಾಮಫಲಕಗಳು ಇಂಗ್ಲಿಷ್‌ನಲ್ಲಿವೆ. ಹೀಗಾಗಿ ಇಂಗ್ಲಿಷ್ ಅನ್ನುವುದು ಇಡೀ ದೇಶವನ್ನು ಆಕ್ರಮಿಸಿಕೊಂಡಿದೆ ಎಂದು ಹೇಳಿದರು.

ಇದಕ್ಕೂ ಮುನ್ನ ಡಾ.ಸಿಪಿಕೆ ಹಾಗೂ ವೈದ್ಯವಾರ್ತಾ ಪ್ರಕಾಶನದ ನಿರ್ದೇಶಕರೂ ಆದ ಚುಟುಕು ಸಾಹಿತಿ ಡಾ.ಎಂ. ಜಿ.ಆರ್. ಅರಸ್ ಅವರನ್ನು ಸನ್ಮಾನಿಸಲಾಯಿತು. ಸಂಸ್ಥೆ ಅಧ್ಯಕ್ಷ ಕೆ.ಬಿ.ಲಿಂಗರಾಜು, ಉಪಾಧ್ಯಕ್ಷ ಆರ್.ಆನಂದ್, ಕಾರ್ಯಕಾರಿ ಸಮಿತಿ ಸದಸ್ಯ ಎಸ್.ಅಚ್ಯುತ, ಸಂಸ್ಥೆ ವ್ಯವಸ್ಥಾಪಕಿ ಭಾರತಿ, ದೇವರಾಜ ಮಾರುಕಟ್ಟೆ ಮುಖಂಡ ಪೈ.ಮಹದೇವ್, ಕೆ.ಬಿ.ಲಿಂಗರಾಜು ಅವರ ಪುತ್ರ ಕಿರಣ್‌ರಾಜ್ ಮತ್ತಿತರರು ಹಾಜರಿದ್ದರು.

> **ದೇವರಾಜ ಅರಸು ಸ್ಮರಿಸುವ ಕಾರ್ಯಕ್ರಮ ಆಗಬೇಕು...**
>
> ಮೈಸೂರಿನಲ್ಲಿ ಕೈಗಾರಿಕರಣ ಬೆಳೆಯಲು ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರ ಕೊಡುಗೆ ಅಪಾರವಾಗಿದೆ. ಐದು ವರ್ಷಗಳ ಅವರ ಆಡಳಿತದಲ್ಲಿ ಕೈಗಾರಿಕೆಗಳಿಗೆ ನೀರು, ವಿದ್ಯುತ್ ಅನ್ನು ಉಚಿತಗೊಳಿಸಿದ್ದರು. ಕನ್ನಡವನ್ನು ಆಡಳಿತ ಭಾಷೆ ಮಾಡಿದರು. ಕರ್ನಾಟಕವೆಂದು ನಾಮಕರಣ ಮಾಡಿದ್ದೂ ಅವರೇ. ಆದರೆ ಸರ್ಕಾರದ ಜೊತೆಗೆ ಜನತೆ ಅವರನ್ನು ಮರೆಯುವಂತಾಗಿದೆ. ಹಾಗಾಗಿ ದೇವರಾಜ ಅರಸು ಅವರನ್ನು ಸ್ಮರಿಸುವಂತಹ ಒಂದು ಕಾರ್ಯಕ್ರಮವನ್ನು ಎಂಸಿಸಿಐ ವತಿಯಿಂದ ವರ್ಷಕ್ಕೊಮ್ಮೆಯಾದರೂ ಮಾಡಬೇಕೆಂದು ಮನವಿ ಮಾಡುತ್ತೇನೆ.
>
> -ಡಾ.ಎಂ.ಜಿ.ಆರ್.ಅರಸ್

ನಂಜನಗೂಡಲ್ಲಿ ವೈಭವದ ಶ್ರೀಕಂಠೇಶ್ವರಸ್ವಾಮಿ ಚಿಕ್ಕಜಾತ್ರೆ

ಸಾವಿರಾರು ಭಕ್ತರು ಭಾಗಿ, ರಥೋತ್ಸವಗಳ ಸೊಬಗು ಕಂಡು ಪುಳಕಿತರಾದ ಭಕ್ತವೃಂದ, ಹರಕೆ ತೀರಿಸಿದ ಭಕ್ತರು



ನಂಜನಗೂಡು, ನ.28– ದಕ್ಷಿಣಕಾಶಿ ಎಂದೇ ಪ್ರಸಿದ್ಧವಾಗಿರುವ ನಂಜನಗೂಡಿನ ಶ್ರೀ ಶ್ರೀಕಂಠೇಶ್ವರ ಸ್ವಾಮಿಯವರ ಚಿಕ್ಕಜಾತ್ರಾ ಮಹೋತ್ಸವವು ಮಂಗಳವಾರ ಸಾವಿರಾರು ಭಕ್ತರ ಉದ್ಘೋಷ, ಜಯಘೋಷ, ಜೈಕಾರಗಳ ನಡುವೆ ವೈಭವಯುತವಾಗಿ ನೆರವೇರಿತು.

ಜಾತ್ರಾ ಮಹೋತ್ಸವದಲ್ಲಿ ಸಾವಿರಾರು ಭಕ್ತರು ಸಂಭ್ರಮ, ಸಡಗರದಿಂದ ಪಾಲ್ಗೊಂಡು ರಥೋತ್ಸವಗಳ ವೈಭವವನ್ನು ಕಂಡು ಭಕ್ತಿಯಿಂದ ಹಣ್ಣು ಜವನ ಎಸೆದು ಹರಕೆ ತೀರಿಸಿದರು.

ಚಿಕ್ಕಜಾತ್ರಾ ಮಹೋತ್ಸದ ಅಂಗವಾಗಿ ಬೆಳಿಗ್ಗೆ 4 ಗಂಟೆಯಿಂದಲೇ ದೇವಾಲಯದಲ್ಲಿ ಪಾರ್ವತಿ ಸಮೇತ ಶ್ರೀಕಂಠೇಶ್ವರಸ್ವಾಮಿಯವರಿಗೆ ಕ್ಷೀರಾಭಿಷೇಕ, ಫಲಪಂಚಾಮೃತಾಭಿಷೇಕ ಹಾಗೂ ಮಹಾನ್ಯಾಸ ಪೂರ್ವಕವಾಗಿ ರುದ್ರಾಭಿಷೇಕವನ್ನು ನೆರವೇರಿಸಲಾಯಿತು.

ನಂತರ ದೇವಾಲಯದ ಪ್ರಧಾನ ಅರ್ಚಕರಾದ ನಾಗಚಂದ್ರ ದೀಕ್ಷಿತ್ ಅವರ ನೇತೃತ್ವದಲ್ಲಿ ಪ್ರಾತಃಕಾಲಪೂಜೆ, ನಿತ್ಯೋತ್ಸವ, ಹಾಗೂ ಸಂಗಮಕಾಲ ಪೂಜೆ, ಮಧ್ಯಾಹ್ನ ಕಾಲ ಪೂಜೆಯೊಂದಿಗೆ ಮಹಾಮಂಗಳಾರತಿಯನ್ನು ನೆರವೇರಿಸಿದ ಬಳಿಕ ದೇವಾಲಯದ ಒಳಾವರಣದಲ್ಲಿ ಗಣಪತಿ ಪೂಜೆ, ನವಗ್ರಹ ಪೂಜೆ, ಸ್ವಾಮಿಯವರ ಉತ್ಸವವನ್ನು ನೆರವೇರಿಸಿದ ನಂತರ ವಿವಿಧ ಧಾರ್ಮಿಕ ವಿಧಿ ವಿಧಾನಗಳನ್ನು ಪೂರೈಸಿ, ಬೆಳಿಗ್ಗೆ 10.45 ರಿಂದ 11.45 ಗಂಟೆಗೆ ಸಲ್ಲುವ ಶುಭ ಮಕರ ಲಗ್ನದಲ್ಲಿ ರಥೋತ್ಸವದಲ್ಲಿ ದೇವರ ಉತ್ಸವ ಮೂರ್ತಿಯನ್ನು ಪ್ರತಿಷ್ಠಾಪಿಸಲಾಯಿತು. ನಂತರ ಮಹಾಮಂಗಳಾರತಿ ನೆರವೇರಿಸುವುದರೊಂದಿಗೆ ಬೆಳಿಗ್ಗೆ 11.20ಕ್ಕೆ ಶಾಸಕ ದರ್ಶನ್ ಧ್ರುವನಾರಾಯಣ್ ಅವರು ರಥೋತ್ಸಕ್ಕೆ ಚಾಲನೆ ನೀಡಿದರು.

ಮೊದಲಿಗೆ ಮಹಾ ಗಣಪತಿ ಮತ್ತು ಚಂಡಿಕೇಶ್ವರ ರಥ, ಪಾರ್ವತಿ ಸಮೇತ ಶ್ರೀಕಂಠೇಶ್ವರ ರಥ, ಕೊನೆಯದಾಗಿ ಮನೋನ್ಮಣಿ ಅಮ್ಮನವರ ರಥೋತ್ಸವಗಳನ್ನು ರಥ ಬೀದಿಯಲ್ಲಿ ಎಳೆಯಲಾಯಿತು. ಮೂರೂ ರಥಗಳು ಯಾವುದೇ ಅಡ್ಡಿ ಆತಂಕವಿಲ್ಲದೆ 1.5 ಕಿಮೀ ದೂರ ರಥ ಬೀದಿಯನ್ನು ಕ್ರಮಿಸಿ 12 ಗಂಟೆಗೆ ಸ್ವಸ್ಥಾನವನ್ನು ತಲುಪಿದವು. ರಥ ಸಂಚರಿಸುವಾಗ ರಸ್ತೆಯ ಇಕ್ಕೆಲಗಳಲ್ಲಿ ನಿಂತಿದ್ದ ಭಕ್ತರು ದೇವರ ದರ್ಶನ ಪಡೆದು ಹಣ್ಣು–ಜವನ ಎಸೆದು ಹರಕೆ ತೀರಿಸಿ ಭಕ್ತಿ ಮೆರೆದರು.

ನಂತರ ಹಂಸವಾಹನ ಉತ್ಸವ, ಸಂಜೆ ನಟೇಶ ಉತ್ಸವಗಳು ಜರುಗುವ ಮೂಲಕ ರಥೋತ್ಸವವು ಯಶಸ್ವಿಯಾಯಿತು. ನ.30ರ ಗುರುವಾರದಂದು ಕಪಿಲಾನದಿಯ ತೇಲುವ ದೇವಾಲಯದಲ್ಲಿ ತೆಪ್ಪೋತ್ಸವ ನಡೆಯಲಿದ್ದು, ನಂತರ ಶಯನೋತ್ಸವ ಜರುಗುವುದರೊಂದಿಗೆ ಚಿಕ್ಕಜಾತ್ರಾ ಮಹೋತ್ಸವಕ್ಕೆ ತೆರೆ ಬೀಳಲಿದೆ.

ಚಿಕ್ಕಜಾತ್ರಾ ಮಹೋತ್ಸವದ ಅಂಗವಾಗಿ ವಿವಿಧ ಸಂಘ ಸಂಸ್ಥೆಗಳು ಪ್ರಸಾದ ವಿತರಣೆ ಮಾಡಿದವು. ದೇವಾಲಯದ ದಾಸೋಹ ಭವನದಲ್ಲಿ ವಿಶೇಷವಾಗಿ ಪ್ರಸಾದ ವ್ಯವಸ್ಥೆ ಕಲ್ಪಿಸಲಾಗಿತ್ತು. ಮುಂಜಾಗ್ರತಾ ಕ್ರಮವಾಗಿ ಬಿಗಿ ಪೊಲೀಸ್ ಬಂದೋಬಸ್ತ್ ನಿಯೋಜಿಸಲಾಗಿತ್ತು. ರಥೋತ್ಸವದ ವೇಳೆ ದೇವಾಲಯದ ಇಓ ಜಗದೀಶ್, ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ತಹಸೀಲ್ದಾರ್ ಶಿವಕುಮಾರ್ ಕಾಸ್ನೂರು, ಮುಖಂಡರಾದ ಶ್ರೀಧರ್, ನಾಗ ರಾಜಯ್ಯ, ಶಶಿರೇಖಾ, ಹುಂಡಿ ನಾಗರಾಜು, ಹಾಗೂ ದೇವಾಲಯದ ಅರ್ಚಕ ವೃಂದ, ಸಿಬ್ಬಂದಿಗಳು ಇದ್ದರು.

ಸ್ಮಶಾನದ ಜಾಗವನ್ನೂ ಬಿಡದ ಭೂ ಮಾಫಿಯಾ..!

ಅತಿಕ್ರಮ ಮಾಡಿಕೊಂಡಿರುವ ಸ್ಮಶಾನದ ಜಾಗ ಬಿಡಿಸಿಕೊಡುವಂತೆ ಆಗ್ರಹಿಸಿ ಪ್ರತಿಭಟನೆ



ಸರಗೂರು, ನ.28– ಅತಿಕ್ರಮ ಪ್ರವೇಶ ಮಾಡಿಕೊಂಡಿರುವ ಸ್ಮಶಾನದ ಜಾಗ ಬಿಡಿಸಿಕೊಡುವಂತೆ ಒತ್ತಾಯಿಸಿ ಚಾಮೇಗೌಡನಹಳ್ಳಿ, ಪುರದಕಟ್ಟೆ ಗ್ರಾಮಸ್ಥರು ತಹಶೀಲ್ದಾರ್ ಕಚೇರಿ ಎದುರು ಮಂಗಳವಾರ ಪ್ರತಿಭಟನೆ ನಡೆಸಿದರು.

ಸುಮಾರು 200 ವರ್ಷಗಳಿಂದ ಶವ ಸಂಸ್ಕಾರ ಮಾಡಿಕೊಂಡು ಬರುತ್ತಿದ್ದ ಜಾಗವನ್ನು ಖಾಸಗಿ ವ್ಯಕ್ತಿಗಳು ಅತಿಕ್ರಮ ಪ್ರವೇಶ ಮಾಡಿ ಕಲ್ಲನ್ನು ಹಾಕಿಕೊಂಡಿದ್ದಾರೆ. ಇದರಿಂದಾಗಿ ಜಾಗದಲ್ಲಿ ಶವ ಸಂಸ್ಕಾರಕ್ಕೆ ತೊಂದರೆಯಾಗಿದೆ ಎಂದು ಗ್ರಾಮಸ್ಥರು ಆರೋಪಿಸಿದರು.

ಕೊತ್ತೇಗಾಲ ಗ್ರಾಮ ಪಂಚಾಯಿತಿಯಿಂದ ಸ್ಮಶಾನದ ಜಾಗ ಅನುಮೋದನೆಯಾಗಿದ್ದು, 3 ಎಕರೆ ಸ್ಕೆಚ್ ಕೂಡ ಆಗಿದೆ. ಪಂಚಾಯಿತಿಯಿಂದ ಸಮತಟ್ಟು ಮಾಡಲಾಗಿದ್ದು, ಲೋಕೋಪಯೋಗಿ ಇಲಾಖೆಯಿಂದಲೂ ಸ್ಮಶಾನದವರೆಗೆ ರಸ್ತೆಯನ್ನೂ ನಿರ್ಮಿಸಲಾಗಿದೆ. ಹೀಗಾಗಿ ಗ್ರಾಮಸ್ಥರ ಅನುಕೂಲಕ್ಕಾಗಿ ಸ್ಮಶಾನ ಬಿಡಿಸಿಕೊಡಬೇಕೆಂದು ಗ್ರಾಮಸ್ಥರು ಮನವಿ ಮಾಡಿದರು. ಇದೇ ಸಂದರ್ಭದಲ್ಲಿ ತಹಶೀಲ್ದಾರ್ ರುಕೀಯಾ ಬೇಗಂ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ತಹಶೀಲ್ದಾರ್ ರುಕೀಯಾ ಬೇಗಂ ಮನವಿ ಸ್ವೀಕರಿಸಿ, ಸ್ಮಶಾನದ ಜಾಗ ಯಥಾಸ್ಥಿತಿ ಕಾಪಾಡಿಕೊಂಡು ಹೋಗಲು ಇಲಾಖಾಧಿಕಾರಿಗಳಿಗೆ ಸ್ಥಳದಲ್ಲೇ ತಿಳಿಸಿದರು.

ಪ್ರತಿಭಟನೆಯಲ್ಲಿ ಜಿಪಂ ಮಾಜಿ ಸದಸ್ಯ ಪಿ.ರವಿ, ನಾಯಕ ಸಮಾಜದ ಹಿರಿಯ ಮುಖಂಡರಾದ ಶಂಭುಲಿಂಗನಾಯಕ, ಪುರದಕಟ್ಟೆ ಬಸವರಾಜ್, ಚಾಮೇಗೌಡರ ಹುಂಡಿ ಯಜಮಾನರಾದ ರಾಮನಾಯಕ, ಪುರದಕಟ್ಟೆ ಯಜಮಾನರಾದ ಬೆಟ್ಟನಾಯಕ, ಗ್ರಾಮಪಂಚಾಯಿತಿ ಸದಸ್ಯ ಮಹದೇವಯ್ಯ, ಮಾಜಿ ಅಧ್ಯಕ್ಷ ನಾಗರಾಜು, ಮುಖಂಡ ಸುರೇಶ್, ಸೋಮಶೇಖರ್, ಚಾಮೇಗೌಡರಹುಂಡಿ ಪುರದಕಟ್ಟೆ ಗ್ರಾಮಸ್ಥರು ಹಾಜರಿದ್ದರು.

ಸಂಸ್ಕಾರಯುತ ಶಿಕ್ಷಣದಿಂದ ಮಕ್ಕಳ ಭವಿಷ್ಯ ಉಜ್ವಲ



ತಿ.ನರಸೀಪುರ, ನ.28– ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು. ಹಾಗಾಗಿ ಮಕ್ಕಳ ಭವಿಷ್ಯವನ್ನು ಉಜ್ವಲಗೊಳಿಸುವ ದೃಷ್ಟಿಯಿಂದ ಮಕ್ಕಳಿಗೆ ಉತ್ತಮ ಸಂಸ್ಕಾರಯುತ ಶಿಕ್ಷಣವನ್ನು ಕಲಿಸುವ ಅಗತ್ಯತೆಯಿದೆ ಎಂದು ಕೆಪಿಎಸ್ ಶಾಲೆಯ ಪ್ರಾಂಶುಪಾಲ ಮಹೇಶ್ ತಿಳಿಸಿದರು.

ತಾಲೂಕಿನ ಮೂಗೂರು ಗ್ರಾಮದ ಬಾಲಕಿಯರ ಕೆಪಿಎಸ್ ಶಾಲೆಯಲ್ಲಿ ಮಕ್ಕಳ ದಿನಾಚರಣೆಯನ್ನು ಜವಾಹರಲಾಲ್ ನೆಹರು ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಚಾಲನೆ ನೀಡಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಮಕ್ಕಳು ಅಂತರ್ಜಾಲ ಮತ್ತು ಮೊಬೈಲ್ ಬಳಕೆ ವಿಪರೀತವಾಗಿದ್ದು, ಇದರಿಂದ ಮಕ್ಕಳಲ್ಲಿ ದೈಹಿಕ ಮತ್ತು ಮಾನಸಿಕ ನ್ಯೂನತೆ ಉಂಟಾಗಲಿದೆ. ಹಾಗಾಗಿ ಮಕ್ಕಳಲ್ಲಿರುವ ಮೊಬೈಲ್ ಬಳಕೆಯ ಗೀಳನ್ನು ಕಡಿಮೆಗೊಳಿಸಬೇಕು. ಮಕ್ಕಳನ್ನು ಆಟೋಟ ಕ್ರಿಯೆಗಳಲ್ಲಿ ತೊಡಗಿಸಿಕೊಳ್ಳುವಂತೆ ಪ್ರೇರೇಪಿಸಬೇಕು ಎಂದರು. ಇದೇ ವೇಳೆ ಆಟೋಟ ಸ್ಪರ್ಧೆಯಲ್ಲಿ ವಿಜೇತರಾದ ಮಕ್ಕಳಿಗೆ ಬಹುಮಾನವನ್ನು ವಿತರಿಸಲಾಯಿತು.

ಈ ಸಂದರ್ಭದಲ್ಲಿ ಗ್ರಾ.ಪಂ. ಅಧ್ಯಕ್ಷ ಶಿವಣ್ಣ, ಎಸ್‌ಡಿಎಂಸಿ ಅಧ್ಯಕ್ಷ ಸಿದ್ದರಾಜು, ಕೆಪಿಎಸ್ ಉಪಾಧ್ಯಕ್ಷ ಸೋಮಣ್ಣ, ಉಪಪ್ರಾಂಶುಪಾಲ ಹನುಮಂತಪ್ಪ ತಳವಾರ, ಆನಂದ್, ಎಸ್‌ಡಿಎಂಸಿ ಸದಸ್ಯರುಗಳಾದ ಎಂ.ಎನ್. ರಾಜು, ಗುರುಸ್ವಾಮಿ, ಮಹೇಂದ್ರ ಕೆ. ಮಹೇಶ, ವಾಸು, ಮೇಘ, ಸುಮಾ, ಪಲ್ಲವಿ, ಗಿರೀಶ್, ಪ್ರಭಾರ ಮುಖ್ಯ ಶಿಕ್ಷಕ ಕೃಷ್ಣೆಗೌಡ, ಮರೀಗೌಡ, ನಿರ್ಮಲ, ಚಂದ್ರಿಕಾ, ವಿದ್ಯಾಶ್ರೀ, ಜ್ಯೋತಿಲಕ್ಷ್ಮಿ, ಶ್ವೇತಾ, ಜಯಲಕ್ಷ್ಮಿ, ರಶ್ಮಿ, ಟಿ.ಪುಟ್ಟಸ್ವಾಮಿ ಮುಂತಾದವರು ಹಾಜರಿದ್ದರು.

ವಾಣಿಜ್ಯ ಮಳಿಗೆ, ಗ್ಯಾರೇಜ್‌ಗಳ ಮೇಲೆ ಬಾಲಕಾರ್ಮಿಕ ಇಲಾಖೆ ಅಧಿಕಾರಿಗಳ ದಾಳಿ

ಇಬ್ಬರು ಬಾಲಕಾರ್ಮಿಕರ ರಕ್ಷಣೆ, ಮತ್ತೆ ಶಾಲೆಗೆ ಸೇರಿಸಲು ನಿರ್ಧಾರ




ಬೆಟ್ಟದಪುರ, ನ28– ಬೆಟ್ಟದಪುರದ ಪ್ರಮುಖ ಮುಖ್ಯ ವೃತ್ತದಲ್ಲಿ ವಾಣಿಜ್ಯ ಮಳಿಗೆ ಹಾಗೂ ಗ್ಯಾರೇಜ್‌ಗಳ ಮೇಲೆ ಬಾಲಕಾರ್ಮಿಕ ಇಲಾಖೆಯ ಅಧಿಕಾರಿಗಳು ದಾಳಿ ನಡೆಸಿ ಇಬ್ಬರು ಕಿಶೋರ ಕಾರ್ಮಿಕರನ್ನು ವಶಕ್ಕೆ ಪಡೆದಿದ್ದಾರೆ.

ಬಳಿಕ ಮಾತನಾಡಿದ ಬಾಲಕಾರ್ಮಿಕ ಇಲಾಖೆಯ ಯೋಜನೆ ನಿರ್ದೇಶಕ ಮಲ್ಲಿಕಾರ್ಜುನ್, 18 ವರ್ಷ ಒಳಪಟ್ಟ ಮಕ್ಕಳು ಶಾಲೆಗೆ ಹೋಗಬೇಕು ಎನ್ನುವುದು ನಮ್ಮ ಉದ್ದೇಶವಾಗಿದೆ, ಆ ನಿಟ್ಟಿನಲ್ಲಿ ಕಾರ್ಯಾಚರಣೆ ನಡೆಸಿ ಶಾಲೆ ಬಿಟ್ಟ ಮಕ್ಕಳನ್ನು ಮತ್ತೆ ಶಾಲೆಗೆ ಸೇರಿಸುವ ಪ್ರಯತ್ನ ಮಾಡುತ್ತಿದ್ದೇವೆ, ಇದಕ್ಕೆ ಶಿಕ್ಷಣ ಇಲಾಖೆಯ ಅಧಿಕಾರಿಗಳು ಸಹಕಾರ ನೀಡಿದ್ದಾರೆ ಎಂದರು.

ನಾವು ದಾಳಿ ನಡೆಸಿದ ಸಂದರ್ಭದಲ್ಲಿ ಕಿಶೋರ ಕಾರ್ಮಿಕ ಇಬ್ಬರು ಮಕ್ಕಳನ್ನು ರಕ್ಷಿಸಿದ್ದೇವೆ, ಈ ಮಕ್ಕಳು ಶಾಲಾ ಅವಧಿಯಲ್ಲಿ ಕೆಲಸ ಮಾಡಬಾರದು, ಯಾವ ಶಾಲೆಯಲ್ಲಿ ಓದುತ್ತಿದ್ದಾರೋ ಅಲ್ಲಿಗೆ ವಿದ್ಯಾಭ್ಯಾಸ ಮಾಡಲು ಕಳುಹಿಸುತ್ತೇವೆ ಎಂದು ಅವರು ಮಾಹಿತಿ ನೀಡಿದರು.

ಉಪ ತಹಶೀಲ್ದಾರ್ ಶಶಿಧರ್, ರಾವಂದೂರು ಉಪ ತಹಶೀಲ್ದಾರ್ ಶುಭಾ, ಕಂದಾಯ ನಿರೀಕ್ಷಕ ಅಜ್ಮಲ್ ಷರೀಫ್, ಬಿಇಓ ಬಸವರಾಜು, ಶಿಶು ಅಭಿವೃದ್ಧಿ ಯೋಜನಾಧಿಕಾರಿ ಮಮತಾ, ಆರೋಗ್ಯ ಇಲಾಖೆ ಮಂಜುನಾಥ್, ಪೊಲೀಸ್ ಇಲಾಖೆ ಅಸ್ಲಾಂ ಪಾಷಾ, ಸತೀಶ್ ಇದ್ದರು.

ಕನ್ನಡಾಂಬೆ ಸೇವಾ ರತ್ನ ಪ್ರಶಸ್ತಿ



ಬೆಟ್ಟದಪುರ, ನ28– ಪಿರಿಯಾಪಟ್ಟಣ ತಾಲೂಕಿನ ಚಪ್ಪರದಹಳ್ಳಿ ಗ್ರಾಮದ ಪತ್ರಕರ್ತ ಸಿ.ಜಿ. ಪುನೀತ್ ಅವರು ಕನ್ನಡಾಂಬೆ ಸೇವಾ ರತ್ನ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಕನ್ನಡಾಂಬೆ ರಕ್ಷಣಾ ವೇದಿಕೆಯಿಂದ ಪ್ರತಿ ವರ್ಷ ಸಾಧಕರನ್ನು ಗುರುತಿಸಿ ನೀಡಲಾಗುವ ಕನ್ನಡಾಂಬೆ ಸೇವಾ ರತ್ನ ಪ್ರಶಸ್ತಿಗೆ ಪ್ರಸ್ತಕ ಸಾಲಿನಲ್ಲಿ ಮಾಧ್ಯಮ ಕ್ಷೇತ್ರದ ಸೇವೆಗೆ ಸಿ.ಜಿ ಪುನೀತ್ ಆಯ್ಕೆಯಾಗಿದ್ದು, ನ.29ರ ಬುಧವಾರ ಮೈಸೂರಿನ ಕಲಾಮಂದಿರದಲ್ಲಿ ನಡೆಯಲಿರುವ ಕನ್ನಡಾಂಬೆ ಹಬ್ಬ ಹಾಗೂ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು.

ಶಿಕ್ಷಣದಿಂದ ನಾಯಕ ಸಮುದಾಯ ಹಿಂದುಳಿದಿದೆ ಎಂಬ ಹಣೆಪಟ್ಟಿ ಅಳಿಸಿ ಹಾಕಿದ ವಿದ್ಯಾರ್ಥಿಗಳು



ಹೆಚ್.ಡಿ.ಕೋಟೆ, ನ.28– ನಾಯಕ ಸಮುದಾಯ ಹಿಂದುಳಿದಿದೆ ಎಂಬ ಹಣೆಪಟ್ಟಿಯನ್ನು ನಮ್ಮ ಮಕ್ಕಳು ಶಿಕ್ಷಣದ ಮೂಲಕ ಅಳಿಸಿ ಹಾಕಿದ್ದಾರೆ ಎಂದು ತಾಲೂಕು ನಾಯಕ ನೌಕರರ ಸಂಘದ ಅಧ್ಯಕ್ಷ ಸಿದ್ದರಾಜು ಅಭಿಪ್ರಾಯಪಟ್ಟರು.

ಪಟ್ಟಣದ ಹ್ಯಾಂಡ್‌ಪೋಸ್ಟ್‌ನಲ್ಲಿರುವ ಕಪಿಲ ಕನ್ವೆನ್ಷನ್ ಹಾಲ್‌ನಲ್ಲಿ ನಡೆದ ಹೆಚ್.ಡಿ.ಕೋಟೆ, ಸರಗೂರು ತಾಲೂಕು ನಾಯಕ ನೌಕರರ ಸಂಘದ ವಾರ್ಷಿಕ ಮಹಾಸಭೆ ಹಾಗೂ ನಾಯಕ ಸಮುದಾಯದ ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಾಯಕ ಸಮುದಾಯ ಹಿಂದುಳಿದಿದೆ ಎಂಬ ಮನೋಭಾವನೆ ಸಮುದಾಯದಲ್ಲಿ ಎಲ್ಲರಿಗೂ ಕಾಡುತ್ತಿತ್ತು, ಆದರೆ ಈಗ ಪೋಷಕರೆಲ್ಲರು ಮಕ್ಕಳಿಗೆ ಉತ್ತಮ ರೀತಿಯ ಶಿಕ್ಷಣ ಕೊಡಿಸುವುದರಲ್ಲಿ ಧೈರ್ಯ ತುಂಬಿ ಮುಂದಾಗಿದ್ದಾರೆ. ಅದೇ ರೀತಿ ನಮ್ಮ ಮಕ್ಕಳು ಸಮುದಾಯಕ್ಕೆ ಹಾಗೂ ಪೋಷಕರಿಗೆ ಗೌರವವನ್ನು ಅತಿ ಎತ್ತರಕ್ಕೆ ತೆಗೆದುಕೊಂಡು ಹೋಗುವ ರೀತಿಯಲ್ಲಿ ಉತ್ತಮ ಶಿಕ್ಷಣ ಪಡೆದು, ಉತ್ತಮ ಅಂಕಗಳನ್ನು ಪಡೆಯುವುದರಲ್ಲಿ ಯಶಸ್ವಿ ಕಾಣುತ್ತಿದ್ದಾರೆ ಎಂದರು.

ಅಂತ ಪ್ರತಿಭಾವಂತ ಮಕ್ಕಳನ್ನು, ಪ್ರತಿ ವರ್ಷವೂ ಉತ್ತಮ ಅಂಕ ಪಡೆದ ನಾಯಕ ಸಮುದಾಯದ ಮಕ್ಕಳನ್ನು ಗುರುತಿಸಿ ಸನ್ಮಾನಿಸಿ ಗೌರವಿಸಿ ಉತ್ತೇಜನ ನೀಡುವ ನಿಟ್ಟಿನಲ್ಲಿ ತಾಲೂಕು ನಾಯಕ ನೌಕರರ ಸಂಘ ಮಾಡಿಕೊಂಡು ಬರುತ್ತಿದೆ ಎಂದರು.

ಇದೇ ಸಂದರ್ಭದಲ್ಲಿ ಪದವಿ ಪಡೆದ ವಿದ್ಯಾರ್ಥಿನಿ ಪ್ರಿಯಾಂಕ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದರು. ಇದೇ ವೇಳೆ ಪಿಎಚ್.ಡಿ ಪದವಿ ಪಡೆದ ಡಾ.ರಮೇಶ್, ಎಸ್‌ಎಸ್‌ಎಲ್‌ಸಿ ಯಿಂದ ಮಾನಸ, ಪಿಯುಸಿಯಿಂದ ಸುಂದರ ಕುಮಾರ್, ಯೋಗಲಕ್ಷ್ಮಿ, ಎಚ್.ಸಿ ಆಕಾಶ್ ಸಂಜಯಕುಮಾರ್, ಶ್ವೇತಾ, ನವ್ಯಶ್ರೀ, ಪ್ರೀತಿ, ಚಂದು, ಅರವಿಂದ, ಆಶಾ, ಚಾಂದಿನಿ, ಪ್ರಿಯಾಂಕಾ, ಪದವಿಯಿಂದ ಸುರೇಶ, ವಿಜಯಲಕ್ಷ್ಮಿ, ಲಾವಣ್ಯ, ಹೇಮಂತ್, ಚಂದ್ರ, ಮಂಜೇಶನಾಯಕ, ರಕ್ಷಿತಾ, ಪ್ರಿಯಾಂಕ, ನೇತ್ರಾವತಿ, ಅಶ್ವಿನಿ, ವಿದ್ಯಾರ್ಥಿಗಳನ್ನು ಸನ್ಮಾನಿಸಿ, ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ತಾಲೂಕು ನಾಯಕ ನೌಕರರ ಸಂಘದ ಗೌರವಾಧ್ಯಕ್ಷ ಚಿಕ್ಕನಾಯಕ, ಉಪಾಧ್ಯಕ್ಷ ಚೆನ್ನನಾಯ್ಕ, ಕೃಷ್ಣನಾಯಕ, ಮಾದೇವಪ್ಪ ಕೃಷ್ಣ ನಾಯಕ, ಕೆಂಪನಾಯಕ, ಶ್ರೀನಿವಾಸ್, ಶಿವಪ್ಪ ಸಿದ್ದಾನಾಯ್ಕ ಚಿಕ್ಕನಾಯಕ, ವೆಂಕಟರಂಗನಾಯ್ಕ, ನಾಗನಾಯಕ, ಮುದ್ದುನಾಯಕ, ಸಂಘದ ಎಲ್ಲಾ ಪದಾಧಿಕಾರಿಗಳು, ಸದಸ್ಯರುಗಳು, ಪೋಷಕರುಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ವಿದ್ಯುತ್ ಸಂಪರ್ಕ ಕಡಿತಕ್ಕೆ ಬಂದ ಚೆಸ್ಕಾಂ ಅಧಿಕಾರಿಗಳಿಗೆ ದಿಗ್ಬಂಧನ

ಕೊಳ್ಳೇಗಾಲದ ಮುಖ್ಯರಸ್ತೆಯಲ್ಲಿ ಕುರುಬೂರು ರೈತರ ಪ್ರತಿಭಟನೆ



ತಿ.ನರಸೀಪುರ, ನ.28– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ನರಸೀಪುರ ಶಾಖೆ ಅಧಿಕಾರಿಗಳು ಗೃಹ ಬಳಕೆ ವಿದ್ಯುತ್ ಬಿಲ್ ಬಾಕಿ ಇರುವ ಮನೆಗಳ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಲು ಬಂದ ವೇಳೆ ರೈತರು ಮತ್ತು ಗ್ರಾಮಸ್ಥರು ದಿಗ್ಬಂಧನ ವಿಧಿಸಿ ರಸ್ತೆಯಲ್ಲಿ ಕುಳಿತು ಪ್ರತಿಭಟಿಸಿದ ಘಟನೆ ಕುರುಬೂರು ಗ್ರಾಮದಲ್ಲಿ ಇಂದು ನಡೆದಿದೆ.

ಕೊಳ್ಳೇಗಾಲ ಮುಖ್ಯ ರಸ್ತೆಯಲ್ಲಿ ಪ್ರತಿಭಟನೆ ನಡೆಸಿ ಮಾತಾಡಿದ ಕಬ್ಬು ಬೆಳೆಗಾರರ ಸಂಘದ ತಾಲೂಕು ಅಧ್ಯಕ್ಷ ಕುರುಬೂರು ಸಿದ್ದೇಶ್, ಗ್ರಾಮೀಣ ಭಾಗದ ರೈತರ ಮುಖ್ಯ ಕಸುಬು ವ್ಯವಸಾಯ. ಇತ್ತೀಚೆಗೆ ರೈತರು ತುಂಬಾ ಸಂಕಷ್ಟದಲ್ಲಿದ್ದಾರೆ. ನಮ್ಮನ್ನಾಳುವ ಸರ್ಕಾರಗಳು ರೈತರ ಬಗ್ಗೆ ವಿರೋಧಿ ಧೋರಣೆ ಅನುಸರಿಸುತ್ತಿದ್ದು, ರೈತರು ಬೆಳೆದ ಬೆಳೆಗಳಿಗೆ ವೈಜ್ಞಾನಿಕ ಬೆಲೆ ಕೊಡುವುದರಲ್ಲಿ ವಿಫಲವಾಗಿವೆ. ಅಧಿಕಾರಕ್ಕೆ ಬರುವ ಮೊದಲು ರೈತರ ಹೆಸರೇಳಿಕೊಂಡು ಅಧಿಕಾರಕ್ಕೆ ಬಂದ ಮೇಲೆ ರೈತರನ್ನು ಮರೆತು ಬಂಡವಾಳ ಶಾಹಿಗಳ ಪರ ಕೆಲಸ ಮಾಡುತ್ತಿವೆ. ರೈತ ಹಾಕಿದ ಬೆಳೆ ಅತಿವೃಷ್ಟಿ ಮತ್ತು ಅನಾವೃಷ್ಟಿಯಿಂದ ನಾಶವಾಗಿ ತುಂಬಾ ತೊಂದರೆ ಅನುಭವಿಸುತ್ತಿದ್ದಾರೆ. ಒಂದು ಕಡೆ ಚೆನ್ನಾಗಿ ಬೆಳೆ ಬಂದರೂ ಬೆಲೆ ಸಿಗದೇ ವ್ಯವಸಾಯಕ್ಕೆ ಮಾಡಿದ ಖರ್ಚು ಕೂಡ ಕೈ ಸೇರುತ್ತಿಲ್ಲ ಎಂದು ನುಡಿದರು.

ಕಾರ್ಖಾನೆಗಳು, ಮಂತ್ರಿಗಳು ಹಾಗೂ ಸರ್ಕಾರಿ ಕಚೇರಿಗಳು ನೂರಾರು ಕೋಟಿ ವಿದ್ಯುತ್ ಬಿಲ್ ಬಾಕಿ ಉಳಿಸಿಕೊಂಡಿದ್ದರೂ ಅವರ ಮೇಲೆ ಕ್ರಮ ಕೈಗೊಳ್ಳದೆ ಕಷ್ಟದಲ್ಲಿರುವ ರೈತರ ಮನೆಗಳ ವಿದ್ಯುತ್ ಬಿಲ್ ಬಾಕಿ ವಸೂಲಿಗಾಗಿ ಗ್ರಾಮಕ್ಕೆ ಭೇಟಿ ನೀಡಿ ವಿದ್ಯುತ್ ಸಂಪರ್ಕ ಕಡಿತ ಮಾಡುವುದು ಸರಿಯಾದ ಕ್ರಮ ಅಲ್ಲ. ರೈತ ಈ ದೇಶದ ಬೆನ್ನೆಲುಬು. ಕೃಷಿಯಲ್ಲಿ ನಷ್ಟ ಅನುಭವಿಸಿದ್ದರೂ ದೇಶಕ್ಕೆ ಆಹಾರ ನೀಡು ತ್ತಿರುವ ರೈತರ ಮೇಲೆ ಸರ್ಕಾರ ದಬ್ಬಾಳಿಕೆ ಮಾಡಿದರೆ ಪ್ರತಿ ಗ್ರಾಮದಲ್ಲೂ ಕರ ನಿರಾಕರಣೆ ಚಳುವಳಿ ಹಮ್ಮಿಕೊಳ್ಳಲಾಗುವುದು ಎಂದು ಅವರು ಎಚ್ಚರಿಸಿದರು.

ಕೈಗಾರಿಕೆಗಳಿಗೆ ನಿರಂತರ 24 ಗಂಟೆ ಕರೆಂಟ್ ಕೊಡುವ ಮಾದರಿಯಲ್ಲಿ ರೈತರ ಕೃಷಿ ಪಂಪ್‌ಸೆಟ್‌ಗಳಿಗೆ 24 ಗಂಟೆ ನಿರಂತರ ವಿದ್ಯುತ್ ಮತ್ತು ರೈತರು ಬೆಳೆದ ಬೆಳೆಗೆ ವೈಜ್ಞಾನಿಕವಾಗಿ ಬೆಲೆ ನಿಗದಿ ಮಾಡಲಿ. ಆಗ ರೈತರಾದ ನಾವು ವಿದ್ಯುತ್ ಬಿಲ್ ಕಟ್ಟುತ್ತೇವೆ ಮತ್ತು ಹಳೇ ಬಾಕಿ ಮನ್ನಾ ಮಾಡಿ ಹೊಸದಾಗಿ ಕಟ್ಟಿಸಿಕೊಳ್ಳಿ ಎಂದು ಚೆಸ್ಕಾಂ ಅಧಿಕಾರಿಗಳಿಗೆ ಮತ್ತು ಪೊಲೀಸರಿಗೆ ಪ್ರತಿಭಟನೆಯ ಮೂಲಕ ಎಚ್ಚರಿಕೆ ನೀಡಲಾಯಿತಲ್ಲದೆ, ಯಾವುದೇ ಕಾರಣಕ್ಕೂ ಮನೆಗಳ ವಿದ್ಯುತ್ ಸಂಪರ್ಕ ಕಡಿತ ಮಾಡುವುದಕ್ಕೆ ಬಿಡುವುದಿಲ್ಲ ಎಂದು ವಾಪಸ್ ಕಳುಹಿಸಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕಿರಗಸೂರು ಶಂಕರ್, ಹಾಡ್ಯ ರವಿ, ಗೌರಿಶಂಕರ್, ಜಗಪತಿ, ಕೆ.ಜಿ.ಗುರುಸ್ವಾಮಿ, ಮಾದೇವ ಪ್ರಸಾದ್, ಪಂಚರ್ ಮಾದಪ್ಪ, ಅಭಿ, ಮಂಜೇಶ್, ಮಲ್ಲೇಶ, ರಾಜು, ಕೆಬಿ ಮಹದೇವಸ್ವಾಮಿ ಗ್ರಾಮಸ್ಥರು ಹಾಜರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	(ದೂ: 2521923)
ಗರಡಿ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಬ್ಯಾಡ್ ಮ್ಯಾನರ್ಸ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಟೈಗರ್–3 (ಹಿಂದಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಶುಗರ್ ಫ್ಯಾಕ್ಟರಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಸಪ್ತ ಸಾಗರದಾಚೆ ಎಲ್ಲೋ–ಸೈಡ್ B(ಕ)	2 ಪ್ರದರ್ಶನಗಳು
ರಾಜಕಮಲ್	
ಆಧಿಕೇಶವ (ತೆ)	4 ಪ್ರದರ್ಶನಗಳು
ಸಂಗಂ	
ಗರಡಿ (ಕ)	4 ಪ್ರದರ್ಶನಗಳು
ಲಿಡೋ	
ಶುಗರ್ ಫ್ಯಾಕ್ಟರಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಗರಡಿ (ಕ)	4 ಪ್ರದರ್ಶನಗಳು
ಪ್ರಭಾ	
ಟಗರು ಪಲ್ಯ(ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	**ಟೈಗರ್ 3(ಹಿಂ):** ಬೆ.10.20ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, **ಟಗರುಪಲ್ಯ (ಕ):** ಮ.1.20ಕ್ಕೆ.
ಸ್ಕ್ರೀನ್ 2	**ದಿ ವೆಕೆಂಟ್ ಹೌಸ್ (ಕ):** ಬೆ.11ಕ್ಕೆ, **ರಾಜಯೋಗ (ಕ):** ಮ.1.15ಕ್ಕೆ, **ನೇತ್ರಂ (ಕ):** ಸಂ.4.30ಕ್ಕೆ, **ಗರಡಿ (ಕ):** ರಾ.7.10ಕ್ಕೆ, **ಸ್ಪಾರ್ಕ್ ಲೈಫ್ (ತೆ):** ರಾ.10ಕ್ಕೆ.
ಸ್ಕ್ರೀನ್ 3	**ಟ್ರೋಲ್ಸ್ ಬ್ಯಾಂಡ್ ಟುಗೆದರ್ (3ಡಿ)(ಇಂ):** ಬೆ.11ಕ್ಕೆ, ಮ.3.35ಕ್ಕೆ, ಸಂ.5.30ಕ್ಕೆ, **ಬೆಂಬಿಡದ ನಾವಿಕ (ಕ):** ಮ.1ಕ್ಕೆ, **ಶೇಶಮ್ ಮೈಕ್ ಇಲ್ ಫಾತಿಮಾ (ಮ):** ರಾ.7.30ಕ್ಕೆ, **ದಿ ಹಂಗರ್ ಗೇಮ್ಸ್ (ಇಂ):** ರಾ.10.10ಕ್ಕೆ.
ಸ್ಕ್ರೀನ್ 4	**ಸಪ್ತ ಸಾಗರದಾಚೆ ಎಲ್ಲೋ 2 (ಕ):** ಬೆ.10.05ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	**ಸಪ್ತ ಸಾಗರದಾಚೆ ಎಲ್ಲೋ 2 (ಕ):** ಬೆ.9.40ಕ್ಕೆ, ಮ.12.50ಕ್ಕೆ, ಸಂ.4ಕ್ಕೆ, ರಾ.7.10ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	**ಸಪ್ತ ಸಾಗರದಾಚೆ ಎಲ್ಲೋ 2 (ಕ):** ಬೆ.9ಕ್ಕೆ, ಮ.12.10ಕ್ಕೆ, ಸಂ.3.20ಕ್ಕೆ, ಸಂ.6.30ಕ್ಕೆ, ರಾ.9.40ಕ್ಕೆ.
ಸ್ಕ್ರೀನ್ 3	**ಟೈಗರ್ 3 (ಹಿಂ):** ಬೆ.9.10ಕ್ಕೆ, ಮ.12.30ಕ್ಕೆ, ಮ.3.50ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 4	**ಮಂಗಳವಾರಂ (ತೆ):** ಬೆ.9.10ಕ್ಕೆ, ಮ.12.25ಕ್ಕೆ, ಸಂ.6.45ಕ್ಕೆ, **ಗರಡಿ (ಕ):** ಮ.3.40ಕ್ಕೆ, **ಟೈಗರ್ 3 (ಹಿಂ):** ರಾ.10ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	**ದಿ ವೆಕೆಂಟ್ ಹೌಸ್ (ಕ):** ಬೆ.11ಕ್ಕೆ, ಸಂ.4.10ಕ್ಕೆ, **ರಾಜಯೋಗ (ಕ):** ಮ.1.05ಕ್ಕೆ, ಸಂ.6.15ಕ್ಕೆ, **ಟಗರುಪಲ್ಯ (ಕ):** ರಾ.9.15ಕ್ಕೆ.
ಸ್ಕ್ರೀನ್ 2	**ಸಪ್ತ ಸಾಗರದಾಚೆ ಎಲ್ಲೋ 2 (ಕ):** ಬೆ.10ಕ್ಕೆ, ಮ.1.15ಕ್ಕೆ, ರಾ.7.30ಕ್ಕೆ, **ಟೈಗರ್ 3 (ಹಿಂ):** ಸಂ.4.20ಕ್ಕೆ.
ಸ್ಕ್ರೀನ್ 3	**ಟೈಗರ್ 3(ಹಿಂ):** ಬೆ.11ಕ್ಕೆ, **ಸಪ್ತ ಸಾಗರದಾಚೆ ಎಲ್ಲೋ 2 (ಕ):** ಮ.3.45ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	**ಟಗರುಪಲ್ಯ (ಕ):** ಬೆ.10.30ಕ್ಕೆ, ಸಂ.4.10ಕ್ಕೆ, ಸಂ.6.50ಕ್ಕೆ, **ಟೈಗರ್ 3 (ಹಿಂ):** ಮ.1.05ಕ್ಕೆ, ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಫೋರ್ಸ್ಟ್ (ಕ): ಬೆ.9ಕ್ಕೆ, ಬೆ.10.20ಕ್ಕೆ, ಮ.1.15ಕ್ಕೆ, ಮ.3.20ಕ್ಕೆ, ರಾ.7.35ಕ್ಕೆ, ರಾ.9.45ಕ್ಕೆ, ರಾ.10.30ಕ್ಕೆ, **12th ಫೇಲ್ (ಹಿಂ):** ಮ.3.50ಕ್ಕೆ, **ಭಗವಂತ್ ಕೇಸರಿ (ತೆ):** ರಾ.7.05ಕ್ಕೆ, **ಗಣಪತ್: ಎ ಹೀರೋ (ಹಿಂ):** ಸಂ.4.10ಕ್ಕೆ, **ಕಿಲ್ಲರ್ಸ್ ಆಫ್ ಫ್ಲವರ್ ಮೂನ್ (ಇಂ):** ಬೆ.10ಕ್ಕೆ, ಮ.2.05ಕ್ಕೆ, ಸಂ.6.10ಕ್ಕೆ, ರಾ.10.15ಕ್ಕೆ, **ಲಿಯೋ (ಕ):** ಮ.12.45ಕ್ಕೆ, **ಲಿಯೋ (ತ):** ಬೆ.11.55ಕ್ಕೆ, ಸಂ.4.10ಕ್ಕೆ, ಸಂ.6.15ಕ್ಕೆ, ರಾ.9.40ಕ್ಕೆ, ರಾ.10.30ಕ್ಕೆ, **ಮುಜಿಬ್ ದಿ ಮೇಕಿಂಗ್ ಆಫ್ ಎ ನೇಷನ್ (ಹಿಂ):** ರಾ.10ಕ್ಕೆ, **ಟಗರುಪಲ್ಯ (ಕ):** ಮ.1ಕ್ಕೆ, ರಾ.7ಕ್ಕೆ, **ತೇಜಸ್ (ಹಿಂ):** ಬೆ.11.05ಕ್ಕೆ, ಮ.1.45ಕ್ಕೆ, ಸಂ.4.25ಕ್ಕೆ, ರಾ.7.05ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರು ಚಳಿಗಾಲದ ರೇಸುಗಳು

1ನೇ ದಿನ, ಬುಧವಾರ 29–11–2023

ಇಂದಿನ ರೇಸಿಗೆ ನಮ್ಮ ಆಯ್ಕೆ

(ಮೊದಲನೇ ರೇಸ್ ಮಧ್ಯಾಹ್ನ 2.00 ಗಂಟೆಗೆ)

I. ನಂಜನಗೂಡು ಪ್ಲೇಟ್– 1400 ಮೀ. ರೇಟೆಡ್ 00 ರಿಂದ 25. ಮ.2.00ಕ್ಕೆ
1. ಈಯರ್ ಐ ಕಮ್ 2. ಪೆಟ್ಟೀಸ್ ಚಾಯ್ಸ್ 3. ಐರಾನಿಕ್ ಹ್ಯೂಮರ್

II. ಬಿಗ್ ಡೀಲ್ ಪ್ಲೇಟ್–1200 ಮೀ. ರೇಟೆಡ್ 00 ರಿಂದ 25. ಮ.2.30ಕ್ಕೆ
1. ಕೋಡ್ ಆಫ್ ಹಾನರ್ 2. ಗ್ಯಾಬ್ರಿ ರೆಲ್ಲಾ 3. ರಾಪ್ಟರ್

III. ಬಿ.ಆರ್.ಹಿಲ್ಸ್ ಪ್ಲೇಟ್ ಡಿ1– 1400 ಮೀ. ರೇಟೆಡ್ 20 ರಿಂದ 45. ಮ.3.00ಕ್ಕೆ
1 ಈಲೊ ಕ್ವಿಂಟ್ 2. ಜನೆರೊ 3 ಅತುಲ್ಯ

IV. ಎಸ್.ಎಂ. ಅತ್ತೊಲಾಯಿ ಮೆಮೋರಿಯಲ್ ಟ್ರೋಫಿ– 1200 ಮೀ. ರೇಟೆಡ್ 40 ರಿಂದ 65. ಮ.3.30ಕ್ಕೆ
1. ಟ್ರಾಮ್ ಕ್ರೂಸರ್ 2. ಇಂಡಿಯನ್ ಪೆಟ್ರಿಯಟ್ 3. ಸರ್‌ಕ್ಯಾಲುಕಸ್

V. ರಾಜ್ಯೋತ್ಸವ ಟ್ರೋಫಿ–1400 ಮೀ. ರೇಟೆಡ್ 60 ಮತ್ತು ಮೇಲ್ವರ್ಗ. ಮ.4.00ಕ್ಕೆ
1. ಪ್ರಿನ್ಸ್ ಕಾರ್ಪೋರೇಟ್ 2. ಫೆರ್ರಿಟ್ಟಿ 3. ಪರ್ಫೆಕ್ಟ್ ಜಸ್ಟೀಸ್

VI. ಫ್ಯಾಂಟಸಿ ಡ್ರೀಮ್ ಪ್ಲೇಟ್–1200 ಮೀ. ರೇಟೆಡ್ 20 ರಿಂದ 45. ಸಂ.4.30ಕ್ಕೆ
1. ಡಿ ಡಾನ್ ಕಿಂಗ್ 2. ಪರ್ಫೆಕ್ಟ್ ಎಂಪ್ರೆಸ್ 3. ಓಕರ್

VII. ಬಿ.ಆರ್.ಹಿಲ್ಸ್ ಪ್ಲೇಟ್ ಡಿ2– 1400 ಮೀ. ರೇಟೆಡ್ 20 ರಿಂದ 45. ಸಂ.5.00ಕ್ಕೆ
1. ಅನುಸ್ತುಭ 2. ಡಿ.ಬ್ರದರ್ 3. ಮಿಲೋಸ್

ದಿನದ ಅತ್ಯುತ್ತಮ	: **ಈಲೊ ಕ್ವಿಂಟ್**
ಡಬ್ಬಲ್	: **ಕೋಡ್ ಆಫ್ ಹಾನರ್, ಟ್ರಾಮ್ ಕ್ರೂಸರ್**
ಜಾಕ್‌ಪಾಟ್	: 3, 4, 5, 6 ಮತ್ತು 7
ಮಿನಿ ಜಾಕ್‌ಪಾಟ್	: 4, 5, 6 ಮತ್ತು 7
I ಟ್ರಿಬಲ್	: 2, 3 ಮತ್ತು 4
II ಟ್ರಿಬಲ್	: 5, 6 ಮತ್ತು 7
ಎಕ್ಸ್‌ಆಕ್ಟ್	: 1 ರಿಂದ 7

ಟಿಪ್‌ಸ್ಟರ್ ಪಿಜೆಸಿ

ಎ.ಎನ್. ಕುಮಾರಸ್ವಾಮಿಗೆ ಪಿಹೆಚ್.ಡಿ



ಮೈಸೂರು, ನ. 28– ಡಾ. ಎಂ. ಅನ್ನಪೂರ್ಣ ಅವರ ಮಾರ್ಗದರ್ಶನದಲ್ಲಿ ಎ.ಎನ್. ಕುಮಾರಸ್ವಾಮಿ ಅವರು ಮಾನವಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಲೋಕಸಭಾ ಚುನಾವಣೆಗೆ ಸಮೀಕ್ಷೆ ಆಧಾರದಲ್ಲಿ ಕ್ಷೇತ್ರಗಳ ಹಂಚಿಕೆಗೆ ಬಿಜೆಪಿ–ಜೆಡಿಎಸ್ ನಿರ್ಧಾರ

● ಪಂಚರಾಜ್ಯಗಳ ಫಲಿತಾಂಶದ ನಂತರ ದೆಹಲಿಯಲ್ಲಿ ಸೀಟು ಹಂಚಿಕೆ ತೀರ್ಮಾನ ● ನಾಲ್ಕರಲ್ಲಿ ಜೆಡಿಎಸ್ ಸ್ಪರ್ಧೆ ಸಾಧ್ಯತೆ ● ಬೆಂಗಳೂರು ಗ್ರಾಮಾಂತರ ಬಿಜೆಪಿಗೆ ಬಿಟ್ಟು ಕೊಡಲು ಜೆಡಿಎಸ್ ಸಹಮತ



ಬೆಂಗಳೂರು, ನ.28 (ಕೆಎಂಶಿ)– ಲೋಕಸಭೆ ಚುನಾವಣಾ ಪೂರ್ವ ಸಮೀಕ್ಷೆ ಆಧಾರದ ಮೇಲೆ ಕ್ಷೇತ್ರಗಳನ್ನು ಹಂಚಿಕೆ ಮಾಡಿಕೊಳ್ಳಲು ಬಿಜೆಪಿ ಹಾಗೂ ಜೆಡಿಎಸ್ ತೀರ್ಮಾನಿಸಿವೆ.

ಕರ್ನಾಟಕದ 28 ಲೋಕಸಭಾ ಕ್ಷೇತ್ರಗಳಲ್ಲಿ 20ರಿಂದ 25 ಸ್ಥಾನಗಳನ್ನು ಗೆಲ್ಲಲೇಬೇಕೆಂದು ಪಣತೊಟ್ಟಿರುವ ಬಿಜೆಪಿ, ಇದಕ್ಕಾಗಿ ಜೆಡಿಎಸ್ ಅನ್ನು ಎನ್‌ಡಿಎ ಮೈತ್ರಿಕೂಟಕ್ಕೆ ಸೇರ್ಪಡೆ ಮಾಡಿಕೊಳ್ಳುವುದರ ಜತೆಗೆ ದೆಹಲಿ ಮೂಲದ 4 ಖಾಸಗಿ ಸಂಸ್ಥೆಗಳ ಮೂಲಕ ಸಮೀಕ್ಷೆ ನಡೆಸಿದೆ.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು, ಕಳೆದ ಭಾನುವಾರ ಜೆಡಿಎಸ್ ರಾಜ್ಯಾಧ್ಯಕ್ಷ ಹಾಗೂ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಬಿಡದಿ ತೋಟದಲ್ಲಿ ಭೇಟಿಯಾಗಿ ಲೋಕಸಭೆ ಚುನಾವಣೆಗೆ ಸಂಬಂಧಿಸಿದಂತೆ ಒಂದು ತಾಸಿಗೂ ಹೆಚ್ಚು ಕಾಲ ಮಾತುಕತೆ ನಡೆಸಿದ್ದಾರೆ. ಪಂಚರಾಜ್ಯಗಳ ಚುನಾವಣೆ ಪ್ರಕ್ರಿಯೆ ಪೂರ್ಣಗೊಂಡು ಫಲಿತಾಂಶ ಹೊರಬಿದ್ದ ನಂತರ ದೆಹಲಿಗೆ ತೆರಳಿ ಬಿಜೆಪಿ ವರಿಷ್ಠರನ್ನು ಭೇಟಿ ಮಾಡಿ, ಸೀಟು ಹಂಚಿಕೆ ಹಾಗೂ ಅಭ್ಯರ್ಥಿಗಳ ಆಯ್ಕೆ ಸಂಬಂಧ ಚರ್ಚೆ ನಡೆಸಲು ತೀರ್ಮಾನಿಸಿದ್ದಾರೆ. ರಾಜ್ಯದ ಆಡಳಿತದ ಚುಕ್ಕಾಣಿ ಹಿಡಿದಿರುವ ಕಾಂಗ್ರೆಸ್, ಕಳೆದ ವಿಧಾನಸಭೆ ಚುನಾವಣೆ ಫಲಿತಾಂಶದ ಆಧಾರದ ಮೇಲೆ 20 ಸ್ಥಾನಗಳನ್ನು ಗೆಲ್ಲಲೇಬೇಕು ಎಂದು ಪಣ ತೊಟ್ಟು, ಸಿದ್ಧತೆ ಆರಂಭಿಸಿದೆ.

ಕಾಂಗ್ರೆಸ್ ಸಿದ್ಧತೆ ಬಗ್ಗೆಯೂ ಚರ್ಚೆ ನಡೆಸಿದ ಉಭಯ ನಾಯಕರು ಪ್ರಧಾನಿ ನರೇಂದ್ರ ಮೋದಿ ಅವರ ಅಲೆ ಬಳಸಿಕೊಂಡು ಈ ಬಾರಿಯೂ ಕನಿಷ್ಠ 25 ಕ್ಷೇತ್ರಗಳಲ್ಲಿ ಗೆಲ್ಲಲೇಬೇಕು. ಅದಕ್ಕಾಗಿ ವರ್ಚಸ್ವಿ ನಾಯಕರನ್ನು ಕಣಕ್ಕಿಳಿಸುವ ಬಗ್ಗೆಯೂ ಚರ್ಚೆ ಮಾಡಿದ್ದಾರೆ. ಆದರೆ, ಯಾರನ್ನು ಯಾವ ಕ್ಷೇತ್ರದಿಂದ ಸ್ಪರ್ಧೆಗಿಳಿಸಿದರೆ ಹೇಗೆ ಎಂಬ ಬಗ್ಗೆಯೂ ಚರ್ಚಿಸಿದ್ದಾರೆ.

ಅಭ್ಯರ್ಥಿಗಳ ಆಯ್ಕೆ ವಿಚಾರದಲ್ಲಿ ವರಿಷ್ಠರ ತೀರ್ಮಾನವಾದರೂ ಇಂಥವರನ್ನು ಕಣಕ್ಕಿಳಿಸಿದರೆ ಗೆಲುವಿಗೆ ಸಹಕಾರಿಯಾಗಲಿದೆ ಎಂಬ ಮಾಹಿತಿ ರವಾನಿಸಲಿವೆ. ಇದೂ ಕೂಡ ಸಮೀಕ್ಷೆ ಆಧಾರದ ಮೇಲೆ ನಡೆಯಲಿದೆ. ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಹಾಗೂ ಜೆಡಿಎಸ್ ನಡುವೆ ಪೈಪೋಟಿ ಇದ್ದರೂ ಆ ಕ್ಷೇತ್ರವನ್ನು ಬಿಜೆಪಿಗೆ ಬಿಟ್ಟುಕೊಡಲು ಕುಮಾರಸ್ವಾಮಿ ಒಪ್ಪಿದ್ದಾರೆ. ಈ ಕ್ಷೇತ್ರದಲ್ಲಿ ಐದು ಗ್ರಾಮೀಣ ವಿಧಾನಸಭಾ ಕ್ಷೇತ್ರಗಳ ಜತೆಗೆ ಮೂರು ನಗರ ಪ್ರದೇಶಗಳ ವಿಧಾನಸಭಾ ಕ್ಷೇತ್ರಗಳು ಒಳಗೊಂಡಿದ್ದು, ಅಲ್ಲಿ ಬಿಜೆಪಿ ಬಲಾಢ್ಯವಾಗಿದೆ.

ಹಾಲಿ ಕಾಂಗ್ರೆಸ್ ಸಂಸದ ಡಿ.ಕೆ.ಸುರೇಶ್ ಅವರನ್ನು ಈ ಬಾರಿ ಸೋಲಿಸುವ ಉದ್ದೇಶದಿಂದ ಕುಮಾರಸ್ವಾಮಿ ಬಿಜೆಪಿಗೆ ಬಿಟ್ಟುಕೊಡಲಿದ್ದು, ಅಲ್ಲಿ ಮಾಜಿ ಸಚಿವ ಹಾಗೂ ವಿಧಾನ ಪರಿಷತ್ ಸದಸ್ಯ ಸಿ.ಪಿ. ಯೋಗೇಶ್ವರ್ ಅವರನ್ನು ಕಣಕ್ಕಿಳಿಸುವ ಬಗ್ಗೆ ಚರ್ಚೆ ಮಾಡಿದ್ದಾರೆ. ಯಡಿಯೂರಪ್ಪ ಕುಟುಂಬಕ್ಕೂ ಯೋಗೇಶ್ವರ್ ನಡುವೆ ಭಿನ್ನಾಭಿಪ್ರಾಯಗಳಿದ್ದರೂ ಕುಮಾರಸ್ವಾಮಿ ಕ್ಷೇತ್ರದ ಗೆಲುವಿನ ದೃಷ್ಟಿಯಿಂದ ಟಿಕೆಟ್ ಅವರಿಗೆ ನೀಡುವಂತೆ ಸಲಹೆ ಮಾಡಿದ್ದಾರೆ. ರಾಜ್ಯದ 28 ಕ್ಷೇತ್ರಗಳ ಪೈಕಿ ಕೇವಲ 4 ಕ್ಷೇತ್ರಗಳಲ್ಲಿ ಜೆಡಿಎಸ್ ಸ್ಪರ್ಧಿಸಲಿದ್ದು, ಉಳಿದ ಕ್ಷೇತ್ರಗಳನ್ನು ಬಿಜೆಪಿಗೆ ಬಿಟ್ಟುಕೊಡಲಿದೆ. ಹಾಸನ, ಮಂಡ್ಯ, ಕೋಲಾರ, ತುಮಕೂರು, ಚಿಕ್ಕಬಳ್ಳಾಪುರ ಹಾಗೂ ರಾಯಚೂರು ಲೋಕಸಭಾ ಕ್ಷೇತ್ರಗಳ ಪೈಕಿ ನಾಲ್ಕರಲ್ಲಿ ಕಣಕ್ಕಿಳಿಯಲು ಜೆಡಿಎಸ್ ನಿರ್ಧರಿಸಿದ್ದರೂ ಸಮೀಕ್ಷಾ ವರದಿ ಬಳಿಕವಷ್ಟೇ ಕ್ಷೇತ್ರ ಹಂಚಿಕೆ ಅಂತಿಮಗೊಳ್ಳಲಿದೆ.

ಲೋಕಸಭಾ ಚುನಾವಣೆಯ ಜತೆಗೆ ಸರ್ಕಾರದ ವಿರುದ್ಧ ಬೆಳಗಾವಿಯ ಚಳಿಗಾಲದ ಅಧಿವೇಶನದಲ್ಲಿ ಜಂಟಿಯಾಗಿ ಹೋರಾಟ ನಡೆಸುವುದು ಮತ್ತು ಕೆಲವು ಹಗರಣಗಳನ್ನು ಬಯಲಿಗೆಳೆಯಲು ಕುಮಾರಸ್ವಾಮಿ ಹಾಗೂ ವಿಜಯೇಂದ್ರ ಕಾರ್ಯತಂತ್ರ ರೂಪಿಸಿದ್ದಾರೆ.

ಸಿಕ್ಕಿದ ಪರ್ಸ್ ಹಿಂದಿರುಗಿಸಿ ಪ್ರಾಮಾಣಿಕತೆ ಮೆರೆದ ಯುವಕ



ಕೇಶವ ಪ್ರತಾಪ್

ಮೈಸೂರು, ನ.28(ಆರ್‌ಕೆ)–ರಸ್ತೆಯಲ್ಲಿ ಸಿಕ್ಕಿದ ಹಣ, ಎಟಿಎಂ ಕಾರ್ಡ್, ಗುರುತಿನ ಚೀಟಿಗಳಿದ್ದ ಪರ್ಸ್ ಅನ್ನು ಯುವಕನೋರ್ವ ವಾರಸುದಾರರಿಗೆ ಹಿಂದಿರುಗಿಸಿ ಪ್ರಾಮಾಣಿಕತೆ ಮೆರೆದಿದ್ದಾರೆ. ಮೈಸೂರಿನ ರಾಘವೇಂದ್ರ ನಗರ ನಿವಾಸಿ ಕೇಶವ ಪ್ರತಾಪ್ ಎಂಬುವರು ಪರ್ಸ್ ಹಿಂದಿರುಗಿಸಿದವರು. 'ಸ್ಟಾರ್ ಆಫ್ ಮೈಸೂರ್' ಸಿಬ್ಬಂದಿ ನಜೀರ್ ಅಹಮದ್, ಸೋಮವಾರ ತಮ್ಮ ಪರ್ಸ್ ಕಳೆದುಕೊಂಡಿದ್ದರು. ಅದರಲ್ಲಿ ನಗದು, ಬ್ಯಾಂಕ್ ಎಟಿಎಂ ಕಾರ್ಡ್‌ಗಳು, ಸಂಸ್ಥೆಯ ಗುರುತಿನ ಚೀಟಿಗಳಿದ್ದವು.

ಸೋಮವಾರ ಸಂಜೆ ಮನೆಗೆ ಹೋಗುವಾಗ ರಾಘವೇಂದ್ರ ನಗರ ಸಮೀಪ ಡಾ.ರಾಜ್‌ಕುಮಾರ್ ರಸ್ತೆಯಲ್ಲಿ ಸಿಕ್ಕಿದ ಪರ್ಸ್ ಅನ್ನು ಕೇಶವ ಪ್ರತಾಪ್ ಅವರು, ಮೈಸೂರಿನ ಕೆ.ಆರ್.ಠಾಣೆಯಲ್ಲಿ ಹೆಡ್ ಕಾನ್‌ಸ್ಟೇಬಲ್ ಆಗಿ ಕರ್ತವ್ಯ ನಿರ್ವಹಿಸುತ್ತಿರುವ ಸಹೋದರ ಭಗತ್‌ಗೌಡರಿಗೆ ಒಪ್ಪಿಸಿದ್ದಾರೆ. ಪರ್ಸ್‌ನಲ್ಲಿದ್ದ ಐಡಿ ಕಾರ್ಡಿನ ಮಾಹಿತಿಯಿಂದ ಭಗತ್‌ಗೌಡರು, ನಜೀರ್ ಅಹಮದ್‌ಗೆ ಫೋನ್ ಮಾಡಿ ಕರೆಸಿಕೊಂಡು ಪೊಲೀಸ್ ಠಾಣೆಯಲ್ಲಿ ಪರ್ಸ್ ಅನ್ನು ಇಂದು ಹಿಂದಿರುಗಿಸಿದರು. ಸಿಕ್ಕಿದ ಪರ್ಸ್ ಅನ್ನು ಹಿಂದಿರುಗಿಸುವ ಮೂಲಕ ಕೇಶವ ಪ್ರತಾಪ್ ಅವರು ಪ್ರಾಮಾಣಿಕತೆ ಮೆರೆದಿದ್ದಾರೆ. ಠಾಣೆಯ ಇನ್ಸ್‌ಪೆಕ್ಟರ್ ನಾಗೇಗೌಡ ಅವರು ತಮ್ಮ ಸಿಬ್ಬಂದಿಯ ಸಹೋದರನ ಪ್ರಾಮಾಣಿತೆಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಅಲ್ಲದೆ, ಕಳೆದುಕೊಂಡ ಪರ್ಸ್ ಅನ್ನು ವಾಪಸ್ ನೀಡಿದಂತಹ ಕೇಶವ ಪ್ರತಾಪ್‌ಗೆ ನಜೀರ್ ಅಹಮದ್ ಸಹ ಕೃತಜ್ಞತೆ ಸಲ್ಲಿಸಿದ್ದಾರೆ.

ಬೈಕ್‌ಗೆ ಬೊಲೆರೋ ಡಿಕ್ಕಿ: ವ್ಯಕ್ತಿ ಸಾವು

ಮೈಸೂರು, ನ.28(ಆರ್‌ಕೆ)– ಬೊಲೆರೋ ಕಾರೊಂದು ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ವ್ಯಕ್ತಿ ಸಾವನ್ನಪ್ಪಿರುವ ಘಟನೆ ಪಾಲಹಳ್ಳಿ ಬಳಿ ಸೋಮವಾರ ಸಂಜೆ ಸಂಭವಿಸಿದೆ.

ಮೈಸೂರಿನ ಕೇರ್ಗಳ್ಳಿ ಬಳಿಯ ಮೈಸೂರು ವಿಶ್ವವಿದ್ಯಾನಿಲಯ ಬಡಾವಣೆ ನಿವಾಸಿ ಭದ್ರಯ್ಯ ಅವರ ಮಗ ಎಂ.ಬಿ.ಪ್ರಶಾಂತ್(36) ಸಾವನ್ನಪ್ಪಿದವರು. ಮೂಲತಃ ಚಿಕ್ಕಮಗಳೂರಿನವರಾದ ಅವರು ಖಾಸಗಿ ಕಂಪನಿ ಉದ್ಯೋಗಿ. ತಾಯಿ ಮನೆಯಲ್ಲಿದ್ದ 2 ತಿಂಗಳ ಬಾಣಂತಿ ಪತ್ನಿ ಮತ್ತು ಮಗುವನ್ನು ನೋಡಲೆಂದು ಬೈಕ್‌ನಲ್ಲಿ ಶ್ರೀರಂಗಪಟ್ಟಣ ತಾಲೂಕು ಕಡತನಾಳು ಗ್ರಾಮಕ್ಕೆ ಹೋಗುತ್ತಿದ್ದಾಗ, ಹಿಂದಿನಿಂದ ಬಂದ ಬೊಲೆರೋ ಪಾಲಹಳ್ಳಿ ಸಮೀಪ ಸೋಮವಾರ ಸಂಜೆ 5.30 ಗಂಟೆಯಲ್ಲಿ ಡಿಕ್ಕಿ ಹೊಡೆದಿದೆ. ತೀವ್ರ ಗಾಯಗಳಾದ ಪ್ರಶಾಂತರನ್ನು ಕೆ.ಆರ್.ಆಸ್ಪತ್ರೆಗೆ ಕರೆತರುವಾಗ ಮಾರ್ಗ ಮಧ್ಯೆ ಕೊನೆಯುಸಿರೆಳೆದಿದ್ದಾರೆ ಎಂದು ಪ್ರಕರಣ ದಾಖಲಿಸಿಕೊಂಡಿರುವ ಶ್ರೀರಂಗಪಟ್ಟಣ ಟೌನ್ ಠಾಣೆ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ಹಾಡಿ ಜನಾಂಗದ ಮಕ್ಕಳಿಗೆ ರಕ್ತದ ಗುಂಪು ಉಚಿತ ಪರೀಕ್ಷಾ ಶಿಬಿರ



ಮೈಸೂರು, ನ.28–ಮೈಸೂರು ಜಿಲ್ಲೆಯ ಹುಣಸೂರು ನಾಗಪುರದ ಹಾಡಿಯ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿರುವ ಸರ್ಕಾರಿ ವಾಲ್ಮೀಕಿ ಆಶ್ರಮ ಶಾಲೆಯಲ್ಲಿ ಜೀವಧಾರ ರಕ್ತನಿಧಿ ಕೇಂದ್ರದ ವತಿಯಿಂದ ಶಾಲಾ ಮಕ್ಕಳ ರಕ್ತದ ಗುಂಪು ಉಚಿತ ಪರೀಕ್ಷಾ ಶಿಬಿರ ಆಯೋಜಿಸಲಾಗಿತ್ತು.

200ಕ್ಕೂ ಹೆಚ್ಚು ಮಕ್ಕಳಿಗೆ ರಕ್ತ ಗುಂಪು ಪರೀಕ್ಷೆ ಮಾಡಿ ಮಕ್ಕಳಿಗೆ ರಕ್ತದ ಗುಂಪಿನ ಗುರುತಿನ ಕಾರ್ಡ್ ವಿತರಿಸಿ, ಅವರ ರಕ್ತದ ಗುಂಪಿನ ಬಗೆ ತಿಳಿಸಲಾಯಿತು. ಜೊತೆಗೆ ರಕ್ತದ ಬಗ್ಗೆ ಜಾಗೃತಿ ಸಹ ಮೂಡಿಸಲಾಯಿತು.

ನಂತರ ಮಾತನಾಡಿದ ಜೀವಧಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ರಕ್ತ ಪರೀಕ್ಷೆ ರೋಗ ಪತ್ತೆ ಮಾಡಲು ಸಹಕಾರಿಯಾಗುತ್ತದೆ ಎಂದರು. ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕು.

ಮಕ್ಕಳಿಗೆ ಶುಚಿತ್ವ, ಆಹಾರ ಪದ್ಧತಿ ಹಾಗೂ ಆರೋಗ್ಯವನ್ನು ಕಾಪಾಡಿಕೊಳ್ಳುವ ಬಗ್ಗೆ ಅರಿವು ಮೂಡಿಸಲಾಗುತ್ತಿದೆ. ಪ್ರತಿಯೊಬ್ಬ ವಿದ್ಯಾರ್ಥಿಗೂ ತಮ್ಮ ರಕ್ತದ ಗುಂಪು ಯಾವುದು ಎನ್ನುವುದನ್ನು ತಿಳಿಸಲು ಶಾಲೆಗಳಿಗೆ ಭೇಟಿ ನೀಡಿ ರಕ್ತದ ಗುಂಪು ಪರೀಕ್ಷೆ ಮಾಡುವ ಕೆಲಸ ಕೂಡ ಮಾಡಲಾಗುತ್ತಿದೆ ಎಂದರು. ಮುಂದಿನ ದಿನಗಳಲ್ಲಿ ಪ್ರತಿಯೊಂದು ಸರ್ಕಾರಿ ಶಾಲೆಯ ಮಕ್ಕಳಿಗೂ ಉಚಿತ ರಕ್ತದ ಗುಂಪಿನ ಪರೀಕ್ಷೆ ಮಾಡಿ ಅವರಿಗೆ ರಕ್ತದ ಗುಂಪಿನ ಗುರುತಿನ ಕಾರ್ಡ್ ವಿತರಿಸಲಾಗುವುದು, ಈಗಾಗಲೇ 25ಕ್ಕೂ ಹೆಚ್ಚು ಶಾಲೆಯ ಮಕ್ಕಳಿಗೆ ರಕ್ತದ ಗುಂಪಿನ ಉಚಿತ ಪರೀಕ್ಷೆಯನ್ನು ಮಾಡಲಾಗಿದೆ ಎಂದರು.

ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಮ ಅಯ್ಯಂಗಾರ್, ರಾಕೇಶ್, ದುರ್ಗಾ ಪ್ರಸಾದ್, ರಶ್ಮಿ, ಜಯಂತ್, ಶಿಕ್ಷಕರಾದ ತಿಮ್ಮೇಗೌಡ, ರವಿಜಿತ್, ಶಾಲೆಯ ಮುಖ್ಯೋಪಾಧ್ಯಾಯರು ಹಾಗೂ ಶಿಕ್ಷಕರು ಹಾಜರಿದ್ದರು.

PUBLIC NOTICE

My client intends to Purchase the Schedule property from its present owner **Sri Manjunathaswamy. N** S/o Late Nagashetty, residing at No.63, Shrishyla, Kapila Marga, Nandini Layout, 1st Stage, Alanahalli, Mysuru-570 028.

That if any person/s having any right, title, interest or claim over the Schedule property shall file their objections with relevant documents **WITHIN FIFTEEN DAYS** from the date of publication of this notice to the under signed Advocate. In the event of non receiving any objection/ claims with in the above time, it is presumed that there is no claim/objection whatsoever of nature over the Schedule property mentioned below from any person and my client will proceed with sale transaction in respect of the Schedule property.

SCHEDULE

All the Piece and Parcel of the agricultural Land bearing **Survey No.9, (Old Sy No.4 Block 19/B)**, measuring **39.08 Guntas, Assessment @ Rs.0.97, Khata No.76,** Situated at KURUBAEAHALLI Village, Kasaba Hobali, Mysuru Thaluk, Mysuru District and and bounded on :- East by : Road Leading to Lalithadripura, West by : Block No.19A of Survey No.4 of Kurubarahalli, North by: Block No.18 of Survey No.4 of Kurubarahalli and South by: Land bearing Survey No.10 (Old Sy No.4) of Kurubarahalli belongs to Sri Manjunathaswamy .N.

H. M. SUDHAKARA
ADVOCATE
No..23, Behind Petrol Bunk,
Nivedithanagara, Mysore
Ph.: 94485 58136

Place: Mysore
Date: 28-11-2023

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ ಶ್ರೀ ಮರಿಸಿದ್ದೇಗೌಡ ಬಿನ್ ಲೇಟ್ ಸಿದ್ದಲಿಂಗೇಗೌಡ, ನಂಬರ್ 163, ಬೋಗಾದಿ, ಮೈಸೂರು ತಾಲ್ಲೂಕು ಅವರು ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ಅವರು ಹಾಗೂ ಅವರ ಸಹೋದರುಗಳಾದ ಶ್ರೀಯುತ ಸಿದ್ದೇಗೌಡ ಮತ್ತು ಸ್ವಾಮಿಯವರುಗಳು ದಿನಾಂಕ 27.04.2007ರಂದು ಎಂ.ವೈ.ಎಸ್-1-02 383-20-07-08 ಸಿಡಿ ನಂಬರ್ ಎಂ.ವೈ.ಎನ್.ಡಿ-140ರಲ್ಲಿ ಮೆಸರ್ಸ್ ಮಾನಸ ಡೆವಲಪರ್ಸ್‌ರವರೊಂದಿಗೆ ಅನುಸೂಚಿ ಸ್ವತ್ತಿನ ಅಭಿವೃದ್ಧಿಗೆ ಒಂದು ಜಂಟಿ ಅಭಿವೃದ್ಧಿ ಕರಾರು ಮಾಡಿಕೊಂಡಿದ್ದು ಅವರು ಸದರೀ ಒಪ್ಪಂದವನ್ನು ಉಲ್ಲಂಘಿಸಿರುವುದರಿಂದ ಅವರೊಂದಿಗೆ ಮಾಡಿಕೊಂಡಿದ್ದ ಸದರೀ ನೋಂದಾಯಿತ ಜಂಟಿ ಅಭಿವೃದ್ಧಿ ಕರಾರು ಕೊನೆಗೊಂಡಿರುತ್ತದೆ ಮತ್ತು 03-10-2023 ರ ನೋಟೀಸಿನಲ್ಲಿ ನಮೂದಿಸಿರುವಂತೆ ಅವರಿಗೆ ನೀಡಿದ ನೋಂದಾಯಿತ ಸಾಮಾನ್ಯ ಅಧಿಕಾರ ಪತ್ರವು ರದ್ದತಿಯಾಗಿರುತ್ತದೆ. ಆದುದರಿಂದ ಸಾರ್ವಜನಿಕರು ಮೆಸರ್ಸ್ ಮಾನಸ ಡೆವಲಪರ್ಸ್‌ನೊಡನೆ ಈ ಕೆಳಗೆ ನಮೂದಿಸಿರುವ ಅನುಸೂಚಿ ಸ್ವತ್ತಿನ ವಿಚಾರದಲ್ಲಿ ಯಾವುದೇ ರೀತಿಯ ವ್ಯವಹಾರಗಳನ್ನು ಮಾಡಬಾರದೆಂದು ಈ ಮೂಲಕ ತಿಳಿಸಲಾಗುತ್ತಿದೆ. ಹಾಗೊಂದು ವೇಳೆ ಮೆಸರ್ಸ್ ಮಾನಸ ಡೆವಲಪರ್ಸ್‌ನೊಡನೆ ಅನುಸೂಚಿ ಸ್ವತ್ತಿನ ವಿಚಾರದಲ್ಲಿ ವ್ಯವಹಾರ ಮಾಡಿದಲ್ಲಿ ಅದರಿಂದಾಗುವ ಆಗುಹೋಗುಗಳಿಗೆ ಅವರೇ ಜವಾಬ್ದಾರರಾಗಿರುತ್ತಾರೆ.

ಷೆಡ್ಯೂಲ್: ಮೈಸೂರು ತಾಲ್ಲೂಕು ಕಸಬಾ ಹೋಬಳಿ ಬೋಗಾದಿ ಗ್ರಾಮದ 4 ಎಕರೆ 6 ಗುಂಟೆ ವಿಸ್ತೀರ್ಣವುಳ್ಳ ಸರ್ವೆ ನಂಬರ್ 275/6 ರ ಜಮೀನು.

ಸಹಿ/- (ಎ.ವಿ.ಜಯರಾಮ ರಾವ್) ವಕೀಲರು, ನಂ 1230/ಎ, 2ನೇ ಕ್ರಾಸ್ (ಕೃಷ್ಣಮೂರ್ತಿಪುರಂ ರಾಮ ಮಂದಿರದ ಹಿಂಭಾಗ) ಚಾಮರಾಜ ಮೊಹಲ್ಲ, ಮೈಸೂರು- 570 004, ಫೋ: 0821-2334334 ಮೊ: 9448438222

ಮುಖ್ಯ ಅಧೀಕ್ಷಕರ ಕಛೇರಿ ಕೇಂದ್ರ ಕಾರಾಗೃಹ ಮೈಸೂರು

ಇ–ಟೆಂಡರ್ ನೋಟೀಸ್

2023–24ನೇ ಸಾಲಿಗೆ ಕೇಂದ್ರ ಕಾರಾಗೃಹ ಮೈಸೂರು ವಲಯ ವ್ಯಾಪ್ತಿಯ ಅಧೀನ ಕಾರಾಗೃಹಗಳ ಬಂದಿಗಳಿಗೆ ಅವಶ್ಯಕವಿರುವ ತಲೆಕ್ಷೌರ ಮತ್ತು ಮುಖಕ್ಷೌರದ ಸೇವೆಯನ್ನು ಕರೆ–3ರಲ್ಲಿ ಪಡೆಯಲು ದಿ:27.11.2023 ರಂದು ಇ–ದರಪಟ್ಟಿ ಕರೆಯಲಾಗಿದೆ.

ಟೆಂಡರ್ ಇಂಡೆಂಟ್ ಸಂಖ್ಯೆ: PCSD/2023-24/SE0007 ಬಿಡ್ ಸಲ್ಲಿಸಲು ಕೊನೆಯ ದಿನಾಂಕ: 12.12.2023

ಹೆಚ್ಚಿನ ವಿವರಗಳಿಗಾಗಿ https://kppp.karnataka.gov.in/ ವೆಬ್‌ಸೈಟ್‌ನ್ನು ಸಂಪರ್ಕಿಸಿ.

ಸಹಿ/– ಮುಖ್ಯ ಅಧೀಕ್ಷಕರು, ಕೇಂದ್ರ ಕಾರಾಗೃಹ, ಮೈಸೂರು.

DIPR/DDMYS/KSMCA/700/2023-24

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಕಾರ್ಯಪಾಲಕ ಅಭಿಯಂತರವರ ಕಛೇರಿ
ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ನಗರ ವಿಭಾಗ (ಜೆ.ಎನ್ ನರ್ಮ್)
ಜಲಭವನ, 2ನೇ ಮಹಡಿ, ಪಿ–4,10ನೇ ಮುಖ್ಯ ರಸ್ತೆ, 3ನೇ ಅಡ್ಡರಸ್ತೆ, ಸರಸ್ವತಿಪುರಂ, ಮೈಸೂರು–570009 ☐: 9480813129 ಇ–ಮೇಲ್: kwbmysjnee@gmail.com

ಟೆಂಡರ್ ಪ್ರಕಟಣೆ

ಅಮೃತ್ 2.0 ಯೋಜನೆಯಡಿಯಲ್ಲಿ ಮೈಸೂರು ತಾಲ್ಲೂಕಿನ ಬೋಗಾದಿ ಮತ್ತು ಕಡಕೊಳ ಪಟ್ಟಣ ಪಂಚಾಯಿತಿ ವ್ಯಾಪ್ತಿಗಳಿಗೆ ಸಂಭಂದಿಸಿದ ಅಂದಾಜು ಪಟ್ಟಿ, ವಿನ್ಯಾಸಗಳು, ರೇಖಾಚಿತ್ರಗಳು, ವರದಿ ಇತ್ಯಾದಿಗಳನ್ನು ಅಗತ್ಯವಿರುವ ಗಾತ್ರಗಳಲ್ಲಿ ಮುದ್ರಿಸಿ ಮತ್ತು ಡಿ.ಪಿ.ಆರ್ ಪುಸ್ತಕಗಳನ್ನು ಬೈಂಡಿಂಗ್ ಮಾಡುವ ಕಾಮಗಾರಿಯ ಟೆಂಡರ್‌ನ್ನು ಪ್ರಕಟಣೆ ಸಂಖ್ಯೆ:1811/2023–24, ದಿನಾಂಕ:27.11.2023ರಲ್ಲಿ ಟೆಂಡರ್ ಪ್ರತ್ಯೇಕವಾಗಿ ಕರೆಯಲಾಗಿದ್ದು, ಖಾಲಿ ಟೆಂಡರ್ ಪುಸ್ತಕದ ಬೆಲೆ ತಲಾ –ರೂ1,000/–, ಖಾಲಿ ಟೆಂಡರ್ ಪತ್ರಗಳನ್ನು ವಿತರಿಸುವ ದಿ:6.12.2023 ತನಕ, ಭರ್ತಿ ಮಾಡಿದ ಟೆಂಡರ್ ಸಲ್ಲಿಸಲು ಕೊನೆಯ ದಿ:07.12.2023, ಇತರೆ ಮಾಹಿತಿ ಕಛೇರಿಯಿಂದ ಪಡೆಯಬಹುದಾಗಿದೆ.

ಸಹಿ/–
ಕಾರ್ಯಪಾಲಕ ಅಭಿಯಂತರರು,

Jayachamaraja Wadiyar Golf Club

Maharana Prathap Singhji Road, Nazarbad, Mysore – 570 010
Phone: 0821-2538457 / 2413385
Date : 28-11-2023

WANTED IMMEDIATELY

1. FRONT OFFICE RECEPTIONIST

Qualification/Experience: Any Graduate with experience and freshers may apply. Computer skills required. Good communication skills are a must. Should be ready to work in shifts. **IMMEDIATE APPOINTMENT.**

2. SWIMMING COACH

Qualification/Experience: Required Course Certificate with minimum 1 year of experience. SHOULD BE READY TO WORK IN SPLIT HOURS. **IMMEDIATE APPOINTMENT**

Note : Interested Candidates, kindly post your resumes by e-mail : jwgc@rediffmail.com, jwgclub1@gmail.com

Sd/-
Hon. Secretary, JWGC

